ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

47

ಏಪ್ರಿಲ್ 21 ಮಂಗಳವಾರ 2026

ಸಂಪುಟ: 47 | ಸಂಚಿಕೆ: 6 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*



ಮೈಸೂರಿನ ನಾನಾ ಕಡೆ ಬಸವೇಶ್ವರ ಜಯಂತಿ...



ಮೈಸೂರಿನ ಗನ್‌ಹೌಸ್ ಸರ್ಕಲ್ ಬಳಿ ಬಸವೇಶ್ವರ ವೃತದಲ್ಲಿರುವ ಶ್ರೀ ಬಸವೇಶ್ವರರ ಪ್ರತಿಮೆಗೆ ಮೈಸೂರು ನಗರ ಬಿಜೆಪಿ ಅಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ ಮಾಲಾರ್ಪಣೆ ಮಾಡಿದರು. ಈ ವೇಳೆ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ, ನಗರ ಕಾರ್ಯದರ್ಶಿ ಪುನೀತ್, ಮುಖಂಡರಾದ ಮೈ.ಪು.ರಾಜೇಶ್, ರಾಕೇಶ್‌ಭಟ್, ಕಿರಣ್ ಮಾದೇಗೌಡ, ಖಂಡೇಶ್, ನಾಗೇಂದ್ರ, ವಿಕ್ರಮ್, ಅಜಯ್, ಸಂತೋಷ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.



ಬಸವ ಜಯಂತಿ ಪ್ರಯುಕ್ತ ಗನ್‌ಹೌಸ್ ಬಳಿ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪ್ರೊ.ಶಿವರಾಜಪ್ಪ, ಡಾ.ಮಾರುತಿ, ಸಾಹಿತಿ ಕೃಷ್ಣಮೂರ್ತಿ, ಚಂದ್ರಶೇಖರ್ ನಮನ ಸಲ್ಲಿಸಿದರು. ಎನ್‌ಎಸ್‌ಎಸ್ ಅಧಿಕಾರಿ ಗಿರೀಶ್‌ಚಂದ್ರ, ಪ್ರೊ.ಜಗದೀಶ್, ಡಾ.ನವೀನ್‌ಕುಮಾರ್, ವೇದಿಕೆ ಅಧ್ಯಕ್ಷ ಆರ್.ವಾಸುದೇವ್, ಮಾಜಿ ಸಂಶೋಧಕ ಸಂಘದ ಅಧ್ಯಕ್ಷ ಶಿವು, ಮಹೇಶ್, ಉಪಾಧ್ಯಕ್ಷ ಭಾಸ್ಕರ್ ಇನ್ನಿತರರು ಉಪಸ್ಥಿತರಿದ್ದರು.



ಬಸವ ಜಯಂತಿ ಅಂಗವಾಗಿ ಮೈಸೂರಿನ ಗನ್‌ಹೌಸ್ ಬಳಿಯಿರುವ ಬಸವೇಶ್ವರ ಪ್ರತಿಮೆಗೆ ಸೋಮವಾರ ಮಾಜಿ ಕಾರ್ಪೊರೇಟರ್ ಆರ್.ಸೋಮಸುಂದರ್, ಮುಖಂಡರಾದ ಕನಕಮೂರ್ತಿ, ವೆಂಕಟೇಶ, ರಾಮಯ್ಯ ಮಾಲಾರ್ಪಣೆ ಮಾಡಿದರು.



ಬಸವ ಜಯಂತಿ ಅಂಗವಾಗಿ ಮೈಸೂರಿನ ಗನ್‌ಹೌಸ್ ಸರ್ಕಲ್ ಬಳಿ ಇರುವ ಬಸವೇಶ್ವರ ಪುತ್ಥಳಿಗೆ ಮಾಜಿ ಮೈಸೂರು ಮಹಾನಗರಪಾಲಿಕೆ ಸದಸ್ಯ ಜಗದೀಶ್ ಪುಷ್ಪಾರ್ಚನೆ ಮಾಡಿದರು. ಬಿಜೆಪಿ ಮುಖಂಡರಾದ ಶಿವಕುಮಾರ್, ಮಧು, ಮೋಹನ್, ಪ್ರಸನ್ನ, ಸಂತೋಷ್, ಕಿರಣ್, ಮಹೇಶ್, ಬಸವರಾಜ್ ಉಪಸ್ಥಿತರಿದ್ದರು.



ಬಸವ ಜಯಂತಿ ಅಂಗವಾಗಿ ಜೆ.ಪಿ.ನಗರದಲ್ಲಿರುವ ಶ್ರೀ ಪೇಜಾವರ ಸಾರ್ವಜನಿಕ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಡ್ರೈ ಫ್ರೂಟ್ಸ್, ಹಣ್ಣು–ಹಂಪಲು ವಿತರಿಸಲಾಯಿತು. ಜೆಡಿಎಸ್ ಮುಖಂಡ ಪ್ರಕಾಶ್ ಪ್ರಿಯಾದರ್ಶನ್, ಅನುದಾನ ರಹಿತ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪಿ.ಎಸ್.ರಾಜಶೇಖರಮೂರ್ತಿ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ್, ಬ್ಲಡ್ ಆನ್ ಕಾಲ್ ಕ್ಲಬ್, ಮೈಸೂರು ಸಂಸ್ಥಾಪಕ ದೇವೇಂದ್ರ ಪರಿಹಾರಿಯಾ, ಸಮಾಜ ಸೇವಕಿ ವಿದ್ಯಾ, ಅಶ್ವಿನಿ, ರಾಜೇಶ್‌ಕುಮಾರ್, ಮಹೇಶ, ದತ್ತ ನಿಲಯಪಾಲಕ ಪುಟ್ಟಣ್ಣ ಸತೀಶ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ನಗರದ ಸಮರ್ಥನಂ ಅಂಗವಿಕಲರ ಸಂಸ್ಥೆಯಲ್ಲಿ ಬಸವ ಜಯಂತಿ ಆಚರಿಸಲಾಯಿತು. ಈ ವೇಳೆ ಬರಹಗಾರ ಎನ್. ಪುನೀತ್, ಸಂಸ್ಥೆಯ ಮೈಸೂರು ವಿಭಾಗದ ಮುಖ್ಯಸ್ಥ ಶಿವರಾಜು, ಉದ್ಯೋಗಾಧಿಕಾರಿ ಸುಬ್ರಮಣಿ ರಾಜೇಂದ್ರ, ಎನ್. ಮಾಂತೇಶ, ಚೈತ್ರಕುಮಾರಿ, ಬೃಂದಾಬಾಯಿ, ವಕೀಲ ಗೋವಿಂದರಾಜು, ಸ್ಪರ್ಶ, ಎಸ್. ಲತಾ, ಪವನ್, ರಜತ್ ಹಾಗೂ ಸಂಸ್ಥೆಯ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಬಸವ ಜಯಂತಿ ಪ್ರಯುಕ್ತ ಮೈಸೂರಿನ ಗನ್‌ಹೌಸ್ ಸಮೀಪವಿರುವ ಬಸವೇಶ್ವರರ ಪ್ರತಿಮೆಗೆ ಚಾಮುಂಡೇಶ್ವರಿ ಬಳಗದ ಆಶ್ರಯದಲ್ಲಿ ಮಾಲಾರ್ಪಣೆ ಮಾಡಿ, ಗೌರವ ನಮನ ಸಲ್ಲಿಸಲಾಯಿತು. ಈ ವೇಳೆ ತಹಸೀಲ್ದಾರ್ ಮಹೇಶ್, ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಪಂಚಾಯತ್‌ರಾಜ್ ಕಾರ್ಯದರ್ಶಿ ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಬಸವಣ್ಣನವರ ಪ್ರತಿಮೆಗೆ ಸಿಎಂ, ಸುತ್ತೂರು ಶ್ರೀಗಳಿಂದ ಪುಷ್ಪಾರ್ಚನೆ



ಮೈಸೂರಿನ ಗನ್‌ಹೌಸ್ ವೃತ್ತದ ಬಳಿಯಿರುವ ಬಸವಣ್ಣನವರ ಪ್ರತಿಮೆಗೆ ಸೋಮವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪುಷ್ಪಾರ್ಚನೆ ಮಾಡಿದರು.


ಮೈಸೂರು,ಏ.20(ಎಂಟಿವೈ)– ಮೈಸೂರಿನ ಗನ್‌ಹೌಸ್ ವೃತ್ತದ ಬಳಿಯಿರುವ ಬಸವಣ್ಣನವರ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರೊಂದಿಗೆ ಪುಷ್ಪಾರ್ಚನೆಯೊಂದಿಗೆ ಗೌರವ ಸಮರ್ಪಿಸಿದರು.

ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ರಸ್ತೆ ಮಾರ್ಗವಾಗಿ ಗನ್‌ಹೌಸ್ ವೃತ್ತದ ಬಳಿಯಿರುವ ಬಸವಣ್ಣನವರ ಪ್ರತಿಮೆ ಬಳಿ ಆಗಮಿಸಿದರು. ಅಷ್ಟರಲ್ಲಾಗಲೇ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರತಿಮೆ ಬಳಿ ಬಂದಿದ್ದರು. ಸಿಎಂ ಶ್ರೀಗಳೊಂದಿಗೆ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ, ಪುಷ್ಪಾರ್ಚನೆ ಮಾಡಿದರು. ಈ ವೇಳೆ ನೆರೆದಿದ್ದ ಬಸವ ಬಳಗದ ಮುಖಂಡರು ಕ್ರಾಂತಿಕಾರಿ ಬಸವಣ್ಣನವರಿಗೆ ಜೈಕಾರದ ಘೋಷಣೆ ಕೂಗಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಕನ್ನಡ–ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಹೆಚ್.ವಿ.ರಾಜೀವ್, ಅಯೂಬ್‌ಖಾನ್, ಪ್ರಾದೇಶಿಕ ಆಯುಕ್ತ ನಿತೀಶ್ ಪಾಟೀಲ್, ಡಿಸಿ ಜಿ.ಲಕ್ಷ್ಮೀಕಾಂತರೆಡ್ಡಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾಧಿಕಾರಿಯ ಕಚೇರಿ ಮುಂದೆ ಬಸವಣ್ಣನವರ ಪ್ರತಿಮೆಗೆ ಶಂಕುಸ್ಥಾಪನೆ

ಮೈಸೂರು,ಏ.20(ಎಂಟಿವೈ)– ಮೈಸೂರಿನ ಸಿದ್ದಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಷ್ಠಾಪಿಸಲು ಉದ್ದೇಶಿಸಿರುವ ಸಮಾಜ ಸುಧಾರಕ ಬಸವಣ್ಣನವರ ಪ್ರತಿಮೆ ಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರಲ್ಲಿ ಬಸವಣ್ಣನವರ ಪ್ರತಿಮೆ ಪ್ರತಿಷ್ಠಾಪನೆಗೆ ಬಸವಣ್ಣನವರ ಅನುಯಾಯಿಗಳು ಹಲವು ವರ್ಷದಿಂದ ಒತ್ತಾಯಿಸುತ್ತಾ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾ ಬಂದಿದ್ದರು. ಈ ಹಿನ್ನೆಲೆಯಲ್ಲಿ ಬಸವ ಬಳಗ ಒಕ್ಕೂಟದ ಮನವಿ ಮೇರೆಗೆ ರಾಜ್ಯ ಸರ್ಕಾರ ಮೈಸೂರಲ್ಲಿ ಬಸವಣ್ಣನವರ ಪ್ರತಿಮೆ ನಿರ್ಮಾಣಕ್ಕೆ ಸಮ್ಮತಿ ಸೂಚಿಸಿದೆ. ಬಸವ ಜಯಂತಿ ದಿನವಾದ ಇಂದು ಮಧ್ಯಾಹ್ನ ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಟನ್ ಒತ್ತುವ ಮೂಲಕ ಪ್ರತಿಮೆ ಪ್ರತಿಷ್ಠಾಪನೆಗೆ ಸಿಎಂ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದರು.



ಮೈಸೂರಿನ ಡಿಸಿ ಕಚೇರಿ ಆವರಣದಲ್ಲಿ ನೂತನವಾಗಿ ನಿರ್ಮಿಸಲು ಉದ್ದೇಶಿಸಿರುವ ಬಸವಣ್ಣನವರ ಪ್ರತಿಮೆಯ ಮಾದರಿ. ಚಿತ್ರ.

ನೂತನ ಡಿಸಿ ಕಚೇರಿ ಮುಂಭಾಗ ಈಗಾಗಲೇ ಒಂದೆಡೆ ಮಾಜಿ ಮುಖ್ಯಮಂತ್ರಿ ಡಿ.ದೇವ ರಾಜ ಅರಸ್ ಪ್ರತಿಮೆಯಿದ್ದು, ಮತ್ತೊಂದೆಡೆ ಮಹರ್ಷಿ ವಾಲ್ಮೀಕಿ ಪ್ರತಿಮೆ ಸ್ಥಾಪಿಸಲಾಗುತ್ತಿದೆ. ಇದೀಗ ಇಲ್ಲಿ ಬಸವಣ್ಣನವರ ಪ್ರತಿಮೆ ಪ್ರತಿಷ್ಠಾಪನೆಗೆ ಸರ್ಕಾರ ಕ್ರಮ ಕೈಗೊಂಡಿದೆ. 1.50 ಕೋಟಿ ರೂ. ವೆಚ್ಚದಲ್ಲಿ ಬಸವಣ್ಣನವರ ಪ್ರತಿಮೆಯನ್ನು ಕನ್ನಡ–ಸಂಸ್ಕೃತಿ ಇಲಾಖೆ ಮೂಲಕ ಸ್ಥಾಪಿಸಲಾಗುತ್ತಿದೆ. ವಿಶ್ವಗುರು ಬಸವಣ್ಣನವರನ್ನು ರಾಜ್ಯ ಸರ್ಕಾರ ಈ ಹಿಂದೆ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿ, ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಬಸವಣ್ಣನವರು ಕುಳಿತು ಕೊಂಡು ವಚನ ಬರೆಯುವ ವಿನ್ಯಾಸದ ಫೋಟೋ ಹಾಕುವಂತೆ ಆದೇಶಿಸಿತ್ತು. ಇದೀಗ ಅದೇ ಚಿತ್ರದ ವಿನ್ಯಾಸದಲ್ಲಿ ಪ್ರತಿಮೆ ಪ್ರತಿಷ್ಠಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಶೀಘ್ರದಲ್ಲಿ ಟೆಂಡರ್ ಪ್ರಕ್ರಿಯೆ ನಡೆದು, ಪ್ರತಿಮೆ ಕೆತ್ತನೆ ಕಾರ್ಯ ಆರಂಭವಾಗಲಿದೆ ಎನ್ನಲಾಗಿದೆ.

ಬಸವೇಶ್ವರ ಜಯಂತಿ: ಸಾರ್ವಜನಿಕರಿಗೆ ಬಾದಾಮಿ ಹಾಲು ವಿತರಣೆ...



ಕೃಷ್ಣರಾಜ ಯುವ ಬಳಗದ ವತಿಯಿಂದ ಮೈಸೂರಿನ ಗನ್‌ಹೌಸ್ ವೃತ್ತದಲ್ಲಿ ಬಸವೇಶ್ವರ ಜಯಂತಿ ಅಂಗವಾಗಿ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಬಿಸಿಲಿನ ತಾಪ ಹೆಚ್ಚಿರುವ ಹಿನ್ನೆಲೆ ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ ನೇತೃತ್ವದಲ್ಲಿ ಸಾರ್ವಜನಿಕರಿಗೆ ತಂಪಾದ ಬಾದಾಮಿ ಹಾಲು ವಿತರಿಸಲಾಯಿತು. ಈ ವೇಳೆ ಮಾಜಿ ಮೇಯರ್ ಸಂದೇಶ ಸ್ವಾಮಿ, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಕೆ.ವಿ.ಶ್ರೀಧರ್, ಜಗದೀಶ್, ಮಂಚೇಗೌಡನಕೊಪ್ಪಲು ರವಿ, ಗುಡ್ಡಪ್ಪ ಶಿವಣ್ಣ, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಜೀವಧಾರ ಗಿರೀಶ್, ದೂರ ರಾಜಣ್ಣ, ಮಂಜು, ಗಣೇಶ್‌ಮೂರ್ತಿ ಇನ್ನಿತರರು ಹಾಜರಿದ್ದರು.



ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬಸವಣ್ಣರ ಜಯಂತಿಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಬಳಿಯಿರುವ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಸಿಹಿ ಹಂಚಿ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಹೋಮದೇವ ಜೆ.ಎಸ್., ಉಪಾಧ್ಯಕ್ಷ ಎಂ.ಎನ್.ಆರ್, ಪ್ರಧಾನ ಕಾರ್ಯದರ್ಶಿ ಸಿ. ಶಿವಣ್ಣ, ಪತ್ರಿಕಾ ಕಾರ್ಯದರ್ಶಿ ಶ್ರೀಕಾಂತ, ಮಹದೇವಸ್ವಾಮಿ, ಗೋವಿಂದಶೆಟ್ಟಿ, ಜವರಪ್ಪ, ಹರೀಶ್ ಇನ್ನಿತರರು ಉಪಸ್ಥಿತರಿದ್ದರು

ಬಸವಣ್ಣ ಹಾಕಿಕೊಟ್ಟ ದಾರಿಯಲ್ಲಿ ಯುವ ಸಮೂಹ ಮುನ್ನಡೆಯಲಿ

ಮಾಜಿ ಸಚಿವ ಸಾರಾ ಮಹೇಶ್ ಕಿವಿಮಾತು

ಮೈಸೂರು: ಬಸವೇಶ್ವರ ಜಯಂತಿ ಅಂಗವಾಗಿ ನಗರದ ಗನ್ ಹೌಸ್ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆಗೆ ಮಾಜಿ ಶಾಸಕ ಸಾ.ರಾ.ಮಹೇಶ್ ಮಾಲಾರ್ಪಣೆ ಮಾಡಿದರು.

ಬಳಿಕ ಮಾತನಾಡಿದ ಅವರು, ಜಾತ್ಯತೀತ ಸಮಾಜ ನಿರ್ಮಾಣದ ತತ್ವದಲ್ಲಿ ಬಸವಣ್ಣನವರು ಸಾಮಾಜಿಕ ಕ್ರಾಂತಿ ಮಾಡಿದ್ದರು. ಸಮಸಮಾಜದ ಅಭಿವೃದ್ಧಿಗಾಗಿ ಹೋರಾಡಿದ್ದರು. ಸಮಾಜದಲ್ಲಿ ಸರ್ವರಿಗೂ ಸ್ವತಂತ್ರ ಹಕ್ಕು ಅವಕಾಶ ನ್ಯಾಯ ಒದಗಿಸಬೇಕೆಂದು ಅನುಭವ ಮಂಟಪ ಪರಿಕಲ್ಪನೆ ಹಾಗೂ ಕನ್ನಡ ಸಾಹಿತ್ಯಕ್ಕೆ ವಚನಗಳ ಮೂಲಕ ಬಸವಣ್ಣನವರ ಕೊಡುಗೆ ಅಪಾರ ಎಂದರು.



ಬಸವೇಶ್ವರ ಜಯಂತಿ ಅಂಗವಾಗಿ ಗನ್ ಹೌಸ್ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆಗೆ ಮಾಜಿ ಶಾಸಕ ಸಾ.ರಾ. ಮಹೇಶ್ ಮಾಲಾರ್ಪಣೆ ಮಾಡಿದರು.

ಬಸವಣ್ಣನವರು ಹಾಕಿಕೊಟ್ಟ ದಾರಿಯಲ್ಲಿ ಯುವಸಮೂಹ ಅರಿತು ಮುನ್ನಡೆಯಬೇಕು. ಅವರ ಜೀವನಸಂದೇಶ ಸಮಾಜಕ್ಕೆ ಆದರ್ಶಪ್ರಾಯ. 12ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಬಸವಣ್ಣನವರು ಸಮಾಜದಲ್ಲಿ ಬೆಳಗಿಸಿದ ಜ್ಯೋತಿಯ ಪ್ರಾಮುಖ್ಯತೆ ಇಂದಿಗೂ ಅವಶ್ಯಕ ಎಂದರು.

ಮಾಜಿ ಉಪಮೇಯರ್ ಶೈಲೇಂದ್ರ, ಅಮಿತ್ ವಿಶ್ವನಾಥ್, ಜೀವಧಾರ ಗಿರೀಶ್, ಪಾಲಿಕೆ ಮಾಜಿ ಸದಸ್ಯ ಕೆವಿ.ಶ್ರೀಧರ್, ಜಗದೀಶ್, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸಪ್ಪ ಬಸವರಾಜ್, ಜೆಡಿಎಸ್ ಮುಖಂಡ ಸಂತೋಷ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ದೂರ ರಾಜಣ್ಣ, ಲೋಹಿತ್, ಅಪೂರ್ವ ಸುರೇಶ್, ರಾಧಾಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.4.2026 ಮಂಗಳವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಕೊಲೆಸ್ಟ್ರಾಲ್, ಬೊಜ್ಜು ನಿವಾರಣಾ ಚಿಕಿತ್ಸಾ, ಕುತ್ತಿಗೆ ನೋವು ಮತ್ತು ಭುಜದ ನೋವು, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಮೈಸೂರು ವಕೀಲರ ಸಂಘ** : ವಿಶ್ವ ದಾರ್ಶನಿಕರ ದಿನಾಚರಣೆ ಅಂಗವಾಗಿ ತತ್ವಜ್ಞಾನಿಗಳಾದ ಆಚಾರ್ಯತ್ರಯರ ಜಯಂತ್ಯೋತ್ಸವ, ಪುಷ್ಪಾರ್ಚನೆ : ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಉಷಾರಾಣಿ, ಅಧ್ಯಕ್ಷತೆ : ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಉಪಸ್ಥಿತರು : ಹಿರಿಯ ವಕೀಲ ಕೆ.ಆರ್. ನಾಗರಾಜ, ಎಂ.ವಿ. ಚಂದ್ರಶೇಖರ, ಎ.ಜಿ. ಸುಧೀರ್, ಕೆ.ಆರ್. ಚರಣ್‌ರಾಜ್, ಶ್ರೀಮತಿ ವಿ.ಬಿ. ವಿನೋದ, ಹೆಚ್.ಬಿ. ಭರತ್, ಸ್ಥಳ: ವಕೀಲರ ಸಂಘದ ಆವರಣ, ಬೆಳಗ್ಗೆ 9.30ಕ್ಕೆ.
- **ಮಹಾರಾಜ ಕಾಲೇಜು** : ಕನ್ನಡ ಸಂಘದ ಕಾರ್ಯಕ್ರಮಗಳ ಸಮಾರೋಪ ಮತ್ತು ತಳಿರು ಪತ್ರಿಕೆಯ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ವಿ. ಷಣ್ಮುಗಂ, ಮುಖ್ಯ ಅತಿಥಿಗಳು: ಡಾ. ಎನ್.ಆರ್. ಚಂದ್ರೇಗೌಡ, ಉಪಸ್ಥಿತರು : ನಾಗೇಶ್ ಪಾಣತ್ತಲೆ, ಪ್ರೊ. ಗೋವಿಂದರಾಜು, ಪ್ರೊ.ಡಿ. ವಿಜಯಲಕ್ಷ್ಮಿ, ಪ್ರೊ. ಬಿ.ಪಿ. ಆಶಾಕುಮಾರಿ, ಎ.ಎಸ್. ನಂದೀಶ್, ಸ್ಥಳ: ಜೂನಿಯರ್ ಬಿ.ಎ. ಹಾಲ್, ಬೆಳಗ್ಗೆ 11ಕ್ಕೆ.
- **ದಲಿತ ಸಂಘರ್ಷ ಸಮಿತಿ** : ಐಕ್ಯತಾ ಸಮಾವೇಶ, ಉದ್ಘಾಟನೆ : ಅಕ್ಕಮಹಾದೇವಿ ವಿವಿ ವಿಶ್ರಾಂತ ಕುಲಪತಿ ಡಾ. ಸಬಿಹಾ ಭೂಮಿಗೌಡ, ಅಧ್ಯಕ್ಷತೆ: ಜಿಲ್ಲಾ ಸಂಚಾಲಕ ಬೆಟ್ಟಯ್ಯಕೋಟೆ, ಮುಖ್ಯ ಅತಿಥಿಗಳು : ಡಾ. ಜೆ. ಸೋಮಶೇಖರ್, ಆಲಗೂಡು ಶಿವಕುಮಾರ್, ಶಂಭುಲಿಂಗಸ್ವಾಮಿ, ಹೆಗ್ಗನೂರು ನಿಂಗರಾಜು, ಬಿ.ಡಿ. ಶಿವಬುದ್ಧಿ, ಸ್ಥಳ: ನಟರಾಜ ಕಲ್ಯಾಣ ಮಂಟಪ, ಶಂಕರ ಮಠದ ರಸ್ತೆ, ಬೆಳಗ್ಗೆ 11ಕ್ಕೆ.
- **ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್** : ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 102ನೇ ವರ್ಷದ ಮೈಸೂರು ಕರಗ ಮಹೋತ್ಸವ, ಬೆಳಗ್ಗೆ 6ಕ್ಕೆ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರಿಗೆ ಅಭಿಷೇಕ, ಬೆಳಗ್ಗೆ 8.30ಕ್ಕೆ ದೇವಸ್ಥಾನದಿಂದ ಹಾಲಿನ ಕೊಡ ಮೆರವಣಿಗೆ, ಸ್ಥಳ: ದೇವಸ್ಥಾನ, ಇಟ್ಟಿಗೆಗೂಡು.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಅಂಬಯ್ಯನುಲಿ, ವ್ಯಾಖ್ಯಾನ:ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ, ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಭಾಷಾವಿಜ್ಞಾನ (Linguistic) ಅಧ್ಯಯನ ವಿಭಾಗದಲ್ಲಿ ಇರುವ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಸಂಯೋಜನಾಧಿಕಾರಿ ಡಾ. ಎ.ಎಸ್. ಮಹದೇವ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ : ಎನ್.ಕೇಶವಮೂರ್ತಿ, 8.30 ಮತ್ತು ಸಂಜೆ 5.30 ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್–ಶಿಶುಗೀತೆಗಳ ಕಾರ್ಯಕ್ರಮ, 8.35 ಕರೆಗೊಂದು ಗೀತೆ –ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ರಂಗಸ್ವಾಮಿ ಮತ್ತು ಸಂಗಡಿಗರು ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಆರ್.ಲೋಕೇಶ್ವರಿ . ಬಿ.ಜಿ. ಕವಿತಾ ಹಾಗೂ ಎಸ್.ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಆರ್.ವಿ.ಅನುಪಮಾ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿ.ಕೆ.ರಾಮನ್–ಕೊಳಲು ವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ –ಭೀಷ್ಮಾಚಾರ್ಯ, ಪ್ರಸ್ತುತಿ–ಸಂತ ಶ್ರೀ ಕೇಶವ ದಾಸರು, 5.00 ಪ್ರಾಯೋಜಿತ ಕಾರ್ಯಕ್ರಮ : ನಿರಾಮಯ ನಿಮ್ಮ ಆರೋಗ್ಯ ನಮ್ಮ ಮಾತು, ಪ್ರಾಯೋಜಕರು : ನಿರಾಮಯ ಹೆಲ್ತ್ ಕೇರ್, ಸರಸ್ವತಿಪುರಂ, ಮೈಸೂರು, ಭಾಗವಹಿಸುತ್ತಾರೆ ಡಾ. ಶರಣ್ಯ, Gastro entrologist, ವಿಷಯ–ಲಿವರ್ ಅಂದರೆ ಯಕೃತ್ತಿನ ಆರೋಗ್ಯ, ಪ್ರಸ್ತುತಿ– ಡಾ.ಕುಲದೀಪ್.ಎನ್ ಹಾಗೂ ತೇಜಸ್ವಿನಿ.ಜೆ, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯ ಕ್ರಮ. ಕೃಷಿ ಉದ್ಯಮಶೀಲತೆ ಕುರಿತು ಸಂವಾದ ಭಾಗವಹಿಸುತ್ತಾರೆ ನಂಜನಗೂಡು ತಾಲ್ಲೂಕು, ಸುತ್ತೂರಿನ ಜೆ.ಎಸ್.ಎಸ್. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ದೀಪಕ್ ಮತ್ತು ಮೈಸೂರು ತಾಲೂಕು, ಜಯಪುರ ಹೋಬಳಿ ದೂರಗ್ರಾಮದ ಎಸ್. ಅಶ್ವಿನಿ, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ದಿಗ್ವಿಜಯ್ ಬಿ, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಅಲಿ ಅಕ್ಬರ್ ಖಾನ್–ಸರೋದ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ ಲಾಲ್ಗುಡಿ ಜಯರಾಮನ್ ವಯೋಲಿನ್ ವಾದನ, 10.00 ಚೈತ್ರವನ ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 21 ಮಂಗಳವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 6 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಲ್ಲಿ ಬಸವಣ್ಣನವರ ಜಯಂತಿ ಅದ್ದೂರಿ ಆಚರಣೆ

■ ಡಾ.ಸಿದ್ದರಾಮ ಬೆಲ್ದಾಳ ಅವರಿಗೆ ಬಸವ ರಾಷ್ಟ್ರೀಯ ಪುರಸ್ಕಾರ ಪ್ರದಾನ ■ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಕಾರ್ಯಕ್ರಮಕ್ಕೆ ಚಾಲನೆ; ಬಸವಣ್ಣನವರ ಪ್ರತಿಮೆಗೆ ಶಂಕು ಸ್ಥಾಪನೆ ■ ಬಸವಣ್ಣನವರ ತತ್ವಗಳು ಸಮಾಜದಲ್ಲಿ ಪ್ರತಿಯೊಬ್ಬರಿಗೂ ದಾರಿದೀಪ: ಸಿಎಂ

ಮೈಸೂರು, ಏ.20(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಕರ್ನಾಟಕ ಕಲಾಮಂದಿರದ ಭವ್ಯ ವೇದಿಕೆಯಲ್ಲಿ ಸಾಂಸ್ಕೃತಿಕ ನಾಯಕ ಬಸವಣ್ಣನವರ ರಾಜ್ಯಮಟ್ಟದ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಇದೇ ವೇಳೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬಸವಣ್ಣ ನವರ ಪ್ರತಿಮೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು.

ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಪಾಲಿಕೆ ಹಾಗೂ ಬಸವ ಬಳಗಗಳ ಒಕ್ಕೂಟ ಮೈಸೂರು ವತಿಯಿಂದ ಸೋಮವಾರ ಆಯೋಜಿಸಿದ್ದ 'ಬಸವ ಜಯಂತಿ–2026 ಹಾಗೂ 2025–26ನೇ ಸಾಲಿನ ಬಸವ ರಾಷ್ಟ್ರೀಯ ಪುರಸ್ಕಾರ ಪ್ರದಾನ' ಕಾರ್ಯಕ್ರಮವನ್ನು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಸವಣ್ಣನವರ ಪ್ರತಿಮೆಗೆ ಶಂಕುಸ್ಥಾಪನೆ ನೆರವೇರಿಸಿದರು. ಹಾಗೆಯೇ ಶರಣರು, ಬಸವ ತತ್ವ ಪ್ರಚಾರಕರಾದ ಡಾ.ಸಿದ್ದರಾಮ ಬೆಲ್ದಾಳ ಅವರಿಗೆ 'ಬಸವ ರಾಷ್ಟ್ರೀಯ ಪುರಸ್ಕಾರ' ಪ್ರದಾನ ಮಾಡಿ ಗೌರವಿಸಿದರು.

ಬಳಿಕ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿಗಳು, ಸಮಾಜದಲ್ಲಿ ಜಾತಿ ವ್ಯವಸ್ಥೆ ಬೇರೂರಿದೆ. ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮಾನತೆ ಎಲ್ಲರಿಗೂ ದೊರಕಿದಾಗ ಜಾತಿ ವ್ಯವಸ್ಥೆ ನಿರ್ಮೂಲನೆಯಾಗಲಿದೆ. 'ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ' ಎಂಬ ವ್ಯವಸ್ಥೆ ನಮ್ಮಲ್ಲಿ ಇನ್ನೂ ಬಂದಿಲ್ಲ. ಹಾಗಾಗಿ ಬಸವಣ್ಣನವರ ತತ್ವಗಳು, ಸಂದೇಶಗಳು ಇಂದಿಗೂ ಬೇಕು. ಮುಂದಕ್ಕೂ ಬೇಕಾಗುತ್ತವೆ. ಈ ನಿಟ್ಟಿನಲ್ಲಿ ಬಸವಣ್ಣನವರ ತತ್ವಗಳು ಪ್ರತಿಯೊಬ್ಬರ ಜೀವನದ ದಾರಿದೀಪವಾಗಬೇಕು ಎಂದು ಹೇಳಿದರು.

ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆ, ಮೂಢನಂಬಿಕೆ ವಿರುದ್ಧ ಹೋರಾಡಿದ ಬಸವಣ್ಣನವರು ತಳ ಸಮುದಾಯದಿಂದ ಬಂದವರಲ್ಲ. ಬ್ರಾಹ್ಮಣ ಸಮುದಾಯದಲ್ಲಿ ಹುಟ್ಟಿದ್ದರೂ ತಾನು ಅಸ್ಪೃಶ್ಯ ಸಮಾಜದಲ್ಲಿ ಹುಟ್ಟಿದ್ದೇನೆ ಎಂದು ಅವರು ಹೇಳಿದ್ದನ್ನು ಪ್ರತಿಯೊಬ್ಬರೂ ಸ್ಮರಿಸಬೇಕು. ಹಿಂದಿನ ಜನ್ಮದಲ್ಲಿ ಕರ್ಮ ಮಾಡಿದ್ದೆ, ಅದಕ್ಕಾಗಿ ಈ ಜನ್ಮದಲ್ಲಿ ಈ ರೀತಿಯಾದೆ ಎಂಬ ಹಾಗೂ ಪಟ್ಟಭದ್ರ ಹಿತಾಸಕ್ತಿಗಳು ಹುಟ್ಟು ಹಾಕಿದ್ದ ಕರ್ಮ ಸಿದ್ಧಾಂತವನ್ನು ಬಸವಣ್ಣ ನವರು ತಿರಸ್ಕರಿಸಿ ಸತ್ಯವನ್ನು ಮನವರಿಕೆ ಮಾಡಿಕೊಟ್ಟರು ಎಂದು ನೆನೆದರು.

ಸಾಂಕ್ರಾಮಿಕ ರೋಗ, ಅಂಟುರೋಗ: ಜಾತಿ ವ್ಯವಸ್ಥೆ ಸಾಂಕ್ರಾಮಿಕ ರೋಗ, ಅಂಟು ರೋಗ ಇದ್ದಂತೆ. ಎಲ್ಲರೂ ■6ನೇ ಪುಟಕ್ಕೆ





ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ರಾಜ್ಯಮಟ್ಟದ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ ಮತ್ತಿತರರು ಉಪಸ್ಥಿತರಿದ್ದರು. ಬಲಚಿತ್ರದಲ್ಲಿ ಶರಣರು, ಬಸವ ತತ್ವ ಪ್ರಚಾರಕರಾದ ಡಾ.ಸಿದ್ದರಾಮ ಬೆಲ್ದಾಳ ಅವರಿಗೆ '2025–26ನೇ ಸಾಲಿನ ಬಸವ ರಾಷ್ಟ್ರೀಯ ಪುರಸ್ಕಾರ' ಪ್ರದಾನ ಮಾಡಿ ಗೌರವಿಸುತ್ತಿರುವುದನ್ನು ಕಾಣಬಹುದು.

> ಮೈಸೂರಿನಲ್ಲಿ ಕಳೆದ 29 ವರ್ಷಗಳಿಂದ ವಿವಿಧ ಸಂಘ–ಸಂಸ್ಥೆಗಳು ಒಗ್ಗಟ್ಟಿನಿಂದ ಬಸವ ಜಯಂತಿ ಆಚರಿಸಿಕೊಂಡು ಬರುತ್ತಿರುವುದು ಇಡೀ ರಾಜ್ಯಕ್ಕೆ ಮಾದರಿ. ಬಸವಣ್ಣ ನವರು 12 ಶತಮಾನದಲ್ಲೇ ಸಾಮಾಜಿಕ ಚಳುವಳಿಯ ಮೂಲಕ ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದರು. ಜನಸಾಮಾನ್ಯರ ಭಾಷೆಯನ್ನು ದೈವ ಭಾಷೆಯನ್ನಾಗಿ ಮಾಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲಬೇಕು. ಲಿಂಗ ತಾರತಮ್ಯವಿಲ್ಲದೇ ಪ್ರತಿಯೊಬ್ಬರೂ ಶಿವನ ಆರಾಧನೆ ಮಾಡುವುದನ್ನು ಬಸವಣ್ಣನವರು ತೋರಿಸಿಕೊಟ್ಟರು. ಅದರಂತೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆದ ಬಳಿಕ ಬಸವಣ್ಣನವರ ತತ್ವಗಳ ಆಧಾರದ ಮೇಲೆ ನಡೆದುಕೊಳ್ಳುತ್ತಿದ್ದಾರೆ.
> – ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ.

> **ಮೈಸೂರಲ್ಲಿ ಬಸವ ಭವನ, ವರ್ಷಾಂತ್ಯಕ್ಕೆ ಅನುಭವ ಮಂಟಪ...!**
> ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಸರಳ ಕನ್ನಡದಲ್ಲಿ ವಚನಗಳನ್ನು ರಚಿಸಿ, ಜ್ಞಾನವು ಎಲ್ಲರಿಗೂ ತಲುಪುವಂತೆ ಮಾಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಬಸವಣ್ಣನವರು ಹಾಕಿಕೊಟ್ಟ ಹಾದಿಯಲ್ಲಿ ನಡೆಯುವುದು ನಮ್ಮ ಕರ್ತವ್ಯ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಕಡ್ಡಾಯವಾಗಿ ಅಳವಡಿಸಬೇಕು ಎಂಬ ಆದೇಶದ ಜೊತೆಗೆ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಲಾಯಿತು. ಜೊತೆಗೆ ಮೈಸೂರಿನಲ್ಲಿ ಬಸವ ಭವನ ನಿರ್ಮಾಣ ಮಾಡಲು 5 ಕೋಟಿ ರೂ. ಅನುದಾನ ಕೊಡುವುದಾಗಿ ಈ ಹಿಂದೆ ಒಪ್ಪಿಕೊಂಡಿದೆ. ಆ 5 ಕೋಟಿ ಹಣವನ್ನು ಸದ್ಯದಲ್ಲೇ ಕೊಡುತ್ತೇನೆ. ಹಾಗೆಯೇ ಬಸವಕಲ್ಯಾಣದಲ್ಲಿ (ಬೀದರ್ ಜಿಲ್ಲೆ) ನಿರ್ಮಾಣವಾಗುತ್ತಿರುವ ಆಧುನಿಕ ಅನುಭವ ಮಂಟಪವು ಆರ್ಥಿಕ ವರ್ಷಾಂತ್ಯಕ್ಕೆ ಪೂರ್ಣಗೊಳ್ಳಲಿದೆ. – ಸಿದ್ದರಾಮಯ್ಯ, ಮುಖ್ಯಮಂತ್ರಿ

ನಾಳೆಯಿಂದ ಸಿಇಟಿ: ವಸ್ತ್ರಸಂಹಿತೆ ಕಡ್ಡಾಯ

ಬೆಂಗಳೂರು: 2026ರ ಸಿಇಟಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಕಲ ಸಿದ್ಧತೆ ಮಾಡಿಕೊಂಡಿದ್ದು, ವಸ್ತ್ರಸಂಹಿತೆ ಜಾರಿ ಮಾಡಿದೆ.



ಏ.22 ಕನ್ನಡ ಸೇರಿದಂತೆ ಏ.23 ಮತ್ತು 24ರಂದು ಪರೀಕ್ಷೆ ನಡೆಯಲಿದ್ದು, ಕಟ್ಟುನಿಟ್ಟಾಗಿ ಪರೀಕ್ಷೆ ನಡೆಸಲು ಸಿದ್ಧತೆ ಮಾಡಿಕೊಂಡಿದೆ. ರಾಜ್ಯದ 745 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಪರೀಕ್ಷೆ ಬರೆಯಲು 3.30 ಲಕ್ಷ ವಿದ್ಯಾರ್ಥಿಗಳು ಅರ್ಜಿ ಸಲ್ಲಿಕೆ ಮಾಡಿದ್ದಾರೆ. ಸದ್ಯ ಕೆಇಎ ಪರೀಕ್ಷೆಗೆ ವಸ್ತ್ರಸಂಹಿತೆ ಬಿಡುಗಡೆ ಮಾಡಿದ್ದು, ಕಡ್ಡಾಯವಾಗಿ ವಸ್ತ್ರಸಂಹಿತೆ ಪಾಲನೆಗೆ ಸೂಚನೆ ನೀಡಿದೆ. ಇನ್ನೂ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾ ಅಳವಡಿಕೆ ಮಾಡಲಾಗುತ್ತದೆ. ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಪತ್ತೆ ಹಚ್ಚಲು ಸ್ಕ್ಯಾನಿಂಗ್ ವ್ಯವಸ್ಥೆ ಮಾಡಲಾಗಿದೆ.

ಪುರುಷ ಅಭ್ಯರ್ಥಿಗಳ ವಸ್ತ್ರಸಂಹಿತೆ: ಪರೀಕ್ಷೆಯ ದಿನದಂದು ಪೂರ್ಣ ತೋಳಿನ ಶರ್ಟ್‌ಗಳನ್ನು ಅನುಮತಿಸಲಾಗುವುದಿಲ್ಲವಾದ್ದರಿಂದ ಪುರುಷ ಅಭ್ಯರ್ಥಿಗಳು ಅರ್ಧ ತೋಳಿನ ಶರ್ಟ್‌ಗಳನ್ನು ಧರಿಸುವುದನ್ನು ಖಚಿತ ಪಡಿಸಿಕೊಳ್ಳಬೇಕು, ಸಾಧ್ಯವಾದಷ್ಟು ಕಾಲರ್‌ರಹಿತ ಸಾಧಾರಣ ಶರ್ಟ್/ಟಿ–ಶರ್ಟ್ ಧರಿಸಲು ಆದ್ಯತೆ ನೀಡುವುದು, ಪ್ಯಾಂಟ್ ಮತ್ತು ಸರಳ ಪ್ಯಾಂಟ್ ■6ನೇ ಪುಟಕ್ಕೆ

ಡಿಸಿಎಂ ಆಪ್ತ ಶಾಸಕ ಹ್ಯಾರಿಸ್ ಅಂಡ್ ಸನ್ ಮನೆ, ಕಚೇರಿ ಸೇರಿ 17 ಕಡೆ ಇಡಿ ದಾಳಿ

- ಹ್ಯಾಕರ್ ಶ್ರೀಕಿಯೊಂದಿಗೆ 4.5ಕೋಟಿ ವ್ಯವಹಾರ–ವಹಿವಾಟು ಕುತ್ತು
- ಹಲವು ವಂಚನೆ ಪ್ರಕರಣಗಳಲ್ಲಿ ಶಾಮೀಲು ಶಂಕೆ ಹಿನ್ನಲೆಯಲ್ಲಿ ಕ್ರಮ
- ಮಾಜಿ ಕೇಂದ್ರ ಸಚಿವ ರೆಹಮಾನ್ ಖಾನ್ ಮೊಮ್ಮಗನೂ ಭಾಗಿ!

ಬೆಂಗಳೂರು, ಏ.20(ಕೆಎಂಶಿ)– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಪ್ತ, ಬಿಡಿಎ ಅಧ್ಯಕ್ಷ ಹಾಗೂ ಶಾಸಕ ಎನ್.ಎ. ಹ್ಯಾರಿಸ್ ಹಾಗೂ ಅವರ ಪುತ್ರ ಮೊಹಮದ್ ನಲಪಡ್ ನಿವಾಸ, ಕಚೇರಿ ಸೇರಿದಂತೆ 17 ಕಡೆ ಜಾರಿ ನಿರ್ದೇಶನಾಲಯ (ಇ.ಡಿ.) ದಾಳಿ ನಡೆಸಿದೆ.

ಶಿವಕುಮಾರ್ ಇತ್ತೀಚೆಗಷ್ಟೇ ನಲಪಡ್‌ನನ್ನ ಮೂರನೇ ಪುತ್ರ ಎಂದು ಬಹಿರಂಗ ಸಭೆಯಲ್ಲೇ ಹೇಳಿಕೊಂಡಿದ್ದರು. ಇದಾದ ಕೆಲವು ದಿನಗಳಲ್ಲೇ ಇ.ಡಿ. ದಾಳಿ ನಡೆದಿದೆ.

ಬಿಟ್ ಕಾಯಿನ್ ಹೂಡಿಕೆ ಸಂಶಯದ ಹಿನ್ನೆಲೆಯಲ್ಲಿ ಈ ದಾಳಿ ನಡೆಸಲಾಗಿದೆ.

ಹ್ಯಾಕರ್ ಶ್ರೀಕಿ ಮೂಲಕ ಹ್ಯಾರಿಸ್ ಪುತ್ರ ಆರ್ಥಿಕ ವ್ಯವಹಾರ ಇಟ್ಟುಕೊಂಡಿದ್ದರು. ಆರು ವರ್ಷಗಳ ಹಿಂದೆ ಈ ಇಬ್ಬರೂ ಸೇರಿ 4.5 ಕೋಟಿ ರೂ.ವರೆಗೂ ವಹಿವಾಟು ನಡೆಸಿದ್ದರು ಎನ್ನಲಾಗಿದೆ. ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ಯಶೋಧ ದೇವಿ ಎಂಬುವವರು 2020ರಲ್ಲಿ ದೂರು ದಾಖಲು ಮಾಡಿ, ಶ್ರೀಕಿ, ರಾಬಿನ್ ಖಂಡೇಲ್ವಾಲ ಹಾಗೂ ಅಜಿತ್ ಖಂಡೇಲ್ವಾಲ ಅವರುಗಳು, 28 ಲಕ್ಷ ರೂ. ಹೂಡಿಕೆ ಮಾಡಿದರೆ, 45 ಲಕ್ಷ ರೂ. ಲಾಭ ಗಳಿಸಬಹುದು ಎಂಬ ಭರವಸೆ ನೀಡಿ ವಂಚಿಸಿದ್ದಾರೆಂದು ಆರೋಪಿಸಿದ್ದರು. ಆರೋಪಿಗಳ ಮಾತು ನಂಬಿ 28 ಲಕ್ಷವನ್ನ ಅಜಿತ್ ■6ನೇ ಪುಟಕ್ಕೆ



ನಲಪಾಡ್ ಮತ್ತು ಹ್ಯಾರಿಸ್

ತಪ್ಪು ತಿದ್ದಿಕೊಳ್ಳುವಂತೆ ಕಾಂಗ್ರೆಸ್‌ಗೆ ಮುಸ್ಲಿಂ ಸಂಘಟನೆಗಳ ಪತ್ರ

ಬೆಂಗಳೂರು: ರಾಜ್ಯದಲ್ಲಿ ಮುಸ್ಲಿಂ ಸಮುದಾಯವನ್ನು ನಡೆಸಿಕೊಳ್ಳುತ್ತಿರುವ ರೀತಿಯನ್ನು ಖಂಡಿಸಿ ರಾಜ್ಯದ ವಿವಿಧ ಪ್ರದೇಶಗಳ ಪ್ರಮುಖ ಮುಸ್ಲಿಂ ಸಂಘಟನೆಗಳು, ಸಂಘ ಸಂಸ್ಥೆಗಳು ಹಾಗೂ ಒಕ್ಕೂಟದ ಪ್ರತಿನಿಧಿಗಳು ಕಾಂಗ್ರೆಸ್‌ನ ಹಿರಿಯ ನಾಯಕರಿಗೆ ಪತ್ರ ಬರೆದಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಿಗೆ ಈ ಪತ್ರ ಬರೆಯಲಾಗಿದೆ.

ಪತ್ರಕ್ಕೆ ವಿಜಯಪುರದ ಮೌಲಾನಾ ಸೈಯದ್ ತನ್ವೀರ್ ಹಾಶ್ಮಿ, ಬೀದರ್‌ನ ಅಬ್ದುಲ್ ಖದೀರ್ ಸಾಹೇಬ್, ಬೆಂಗಳೂರಿನ ಮೌಲಾನಾ ಶಬ್ಬೀರ್ ಅಹ್ಮದ್ ನದ್ವಿ, ಉಡುಪಿಯ ಕೆ.ಎಸ್. ಮೊಹಮ್ಮದ್ ಮಸೂದ್, ಮೊಹಮ್ಮದ್ ಹನೀಫ್, ಮೊಹಮ್ಮದ್ ಮೌಲಾ, ಯಾಸೀನ್ ಮಲ್ಪೆ, ಭಟ್ಕಳದ ಮೌಲಾನಾ ಅಬ್ದುರ್‌ರಕೀಬ್ ನದ್ವಿ, ಹುಬ್ಬಳ್ಳಿಯ ಅಶ್ರಫ್ ಅಲಿ ಬಶೀರ್, ಅಬ್ದುಲ್ ಕರೀಂ ಹುಬ್ಬಳ್ಳಿ, ಕೆ. ಅಶ್ರಫ್ ದಕ್ಷಿಣ ಕನ್ನಡ, ಅಬೂಬಕರ್ ನೇಜಾರು ಸೇರಿದಂತೆ ವಿವಿಧ ಜಿಲ್ಲೆಗಳ ಅನೇಕರು ಸಹಿ ಹಾಕಿದ್ದಾರೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದವರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದರಿಂದಾಗಿ, ಆ ಪಕ್ಷ ಅಧಿಕಾರಕ್ಕೆ ಬರಲು ಕಾರಣವಾಯಿತು. ಆದರೆ, ಅಧಿಕಾರಕ್ಕೆ ಬಂದ ಬಳಿಕ ಪ್ರಮುಖ ನೇಮಕಾತಿಗಳಲ್ಲಿ ಮುಸ್ಲಿಮರಿಗೆ ಸರಿಯಾದ ಪ್ರಾತಿನಿಧ್ಯ ನೀಡಲಿಲ್ಲ. ತಾರತಮ್ಯ ನೀತಿ, ನ್ಯಾಯಯುತವಾಗಿ ನಡೆದುಕೊಳ್ಳದೆ ಇರುವುದು ಮುಂದುವರಿದಿದೆ. ■6ನೇ ಪುಟಕ್ಕೆ

ಮೈಸೂರಿನ ವಿಜಯನಗರದ ಪಬ್‌ನಲ್ಲಿ ಟೆಕ್ಕಿ ಕೊಲೆ ಪ್ರಕರಣ

ರೌಡಿಶೀಟರ್ ಸೇರಿ ಮೂವರ ಬಂಧನ; ಇನ್ನು ಮೂವರಿಗೆ ಪೊಲೀಸರ ಶೋಧ

ಮೈಸೂರು, ಏ.20(ಬಿಎಲ್‌ಯು)– ಮೈಸೂರಿನ ವಿಜಯನಗರ ಪಬ್‌ನಲ್ಲಿ ಟೆಕ್ಕಿ ನಿಶಾಂತ್‌ನನ್ನು ಹೊಡೆದು, ಮಹಡಿಯಿಂದ ಕೆಳಗೆ ತಳ್ಳಿ ಕೊಲೆಗೈದ್ದು ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.



ಕೊಲೆಯಾದ ನಿಶಾಂತ್

ಮೈಸೂರು ಹೆಬ್ಬಾಳಿನ ರೌಡಿ ಶೀಟರ್ ಮನೋಜ್, ಕುಂಬಾರಕೊಪ್ಪಲಿನ ವಿನೋದ್ ಹಾಗೂ ಅಭಿಷೇಕ್ ಸರ್ಕಲ್‌ನ ಪ್ರಶಾಂತ್ ಬಂಧಿತ ಆರೋಪಿಗಳಾಗಿದ್ದಾರೆ. ಈ ಕೊಲೆಯಲ್ಲಿ ಭಾಗಿಯಾಗಿದ್ದ ಪ್ರಮುಖ ಆರೋಪಿ ಕುಂಬಾರ ಕೊಪ್ಪಲು ನಿವಾಸಿ ರೌಡಿಶೀಟರ್ ರಾಕೇಶ್ ಅಲಿಯಾಸ್ ರಾಕಿ, ವಿಜಯನಗರದ ಪೃಥ್ವಿ ಹಾಗೂ ನಿತಿನ್ ತಲೆ ಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಪೊಲೀಸರು ವ್ಯಾಪಕ ಶೋಧ ನಡೆಸಿದ್ದಾರೆ.

ವಿಜಯನಗರದ 2ನೇ ಹಂತದಲ್ಲಿನ ಪಬ್‌ನಲ್ಲಿ ಶನಿವಾರ ರಾತ್ರಿ ಮದ್ಯ ಸೇವಿಸುತ್ತಿದ್ದ ಸಂದರ್ಭದಲ್ಲಿ ಜೋರಾಗಿ ಮಾತನಾಡಬೇಡಿ ಎಂದಿದ್ದಕ್ಕೆ ಕೆರಳಿದ ರೌಡಿ ಶೀಟರ್‌ಗಳಾದ ಮನೋಜ್, ರಾಕೇಶ್ ಸೇರಿದಂತೆ ಆರು ಮಂದಿ ನಿಶಾಂತ್ ಹಾಗೂ ಈತನ ಇಬ್ಬರು ಸ್ನೇಹಿತರ ಮೇಲೆ ಹಲ್ಲೆ ನಡೆಸಿ, ನಿಶಾಂತ್‌ನ್ನು ಪಬ್‌ನ 2ನೇ ಮಹಡಿಯಿಂದ ತಳ್ಳಿ ಕೊಂದಿದ್ದರು ಈ ಸಂಬಂಧ ದಾಖಲಾಗಿದೆ.

ಈ ಸಂಬಂಧ ಮೂವರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು ಇನ್ನುಳಿದ ಮೂವರಿಗೆ ಬಲೆ ಬೀಸಿದ್ದಾರೆ.

ಮಧ್ಯರಾತ್ರಿವರೆಗೂ ಬಾರ್‌ಗಳ ಕಾರು–ಬಾರು

ಮೈಸೂರಿನ ಬಹುತೇಕ ಅದರಲ್ಲೂ, ಪ್ರಭಾವಿಗಳು, ಅಧಿಕಾರಿಗಳ ಕೃಪಾಶೀರ್ವಾದ ಇರುವಂತಹ ಬಾರ್‌ಗಳು ಸರಿರಾತ್ರಿವರೆಗೂ ತೆರೆದಿರುತ್ತವೆ. ವಿಜಯನಗರ ಎರಡನೇ ಹಂತದ ಪಬ್‌ನಲ್ಲಿ ಕೊಲೆ ನಡೆದಾಗ ರಾತ್ರಿ 11.40. ವಿಜಯನಗರ, ಹೆಬ್ಬಾಳ್ ಭಾಗದಲ್ಲಿ ಬಹುಹೊತ್ತಿನವರೆಗೆ ಬಾರ್, ವೈನ್‌ಶಾಪ್‌ಗಳು ತೆರೆದಿರುತ್ತವೆ. ನಿಶಾಂತ್ ಕೊಲೆ ನಡೆದಾಗ ರಾತ್ರಿ 11.40 ಗಂಟೆಯಾಗಿತ್ತು ಎಂದು ನಿಶಾಂತ್ ಸ್ನೇಹಿತನೇ ತಿಳಿಸಿದ್ದಾನೆ. ಪೊಲೀಸ್ ಹಾಗೂ ಅಬಕಾರಿ ನಿಯಮದಂತೆ ರಾತ್ರಿ 11 ಗಂಟೆಯೊಳಗೆ ಎಲ್ಲಾ ರೀತಿಯ ಮದ್ಯ ಮಾರಾಟ ನಿಷಿದ್ಧ. ಸಮಯಕ್ಕೆ ಮುಚ್ಚಿದ್ದರೆ ಪ್ರಾಯಶಃ ಈ ಕೊಲೆ ನಡೆಯುತ್ತಿರಲಿಲ್ಲ. ಆದರೆ ರಾತ್ರಿ 11 ಗಂಟೆ ನಂತರವೂ ಪಬ್ ಬಾಗಿಲು ತೆರೆದಿತ್ತು ಎಂಬುದಕ್ಕೆ ಈ ಪ್ರಕರಣ ಸ್ಪಷ್ಟ ನಿದರ್ಶನವಾಗಿದೆ. ಕೊಲೆ ನಡೆದ ಸಂದರ್ಭದಲ್ಲಿ ಪಬ್‌ನ ಸಿಸಿಟಿವಿಯ ಫುಟೇಜ್‌ನಲ್ಲಿ ಸಮಯ ಉಲ್ಲೇಖವಾಗಿದೆ. ಬಹಳಷ್ಟು ಬಾರ್‌ಗಳು ರಾತ್ರಿ 2 ಗಂಟೆವರೆಗೂ ತೆರೆದಿರುತ್ತವೆ. ನಿಯಮ ಮೀರಿ ಬಾರ್‌ಗಳು ತೆರೆಯಲು ಪೊಲೀಸರು ಹೇಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂಬುದು ಯಕ್ಷ ಪ್ರಶ್ನೆಯಾಗಿದೆ.

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಹಸ್ತಕ್ಷೇಪ ಆರೋಪ

ಚೆಸ್ಕಾಂ ಅಧಿಕಾರಿಗೆ 2 ದಿನದಲ್ಲಿ ಸ್ಥಾನಪಲ್ಲಟ!!

ಮೈಸೂರು, ಏ.20– ಮುಖ್ಯಮಂತ್ರಿ ಸಿದ್ದರಾಮಯ್ಯರ ಪುತ್ರ, ಎಂಎಲ್ಸಿ ಡಾ.ಯತೀಂದ್ರ ಅವರ ಅವಕೃಪೆಯಿಂದ ನಿವೃತ್ತಿ ಅಂಚಿನಲ್ಲಿರುವ ಮೈಸೂರಿನ ಅಧಿಕಾರಿಯೊಬ್ಬರು ಸ್ಥಾನಪಲ್ಲಟಕ್ಕೆ ಗುರಿಯಾಗಿ ನಲುಗುತ್ತಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಮಾಜಿ ಸಚಿವ, ಜೆಡಿಎಸ್ ನಾಯಕ ಸಾ.ರಾ. ಮಹೇಶ್ ಪತ್ರಿಕಾ ಹೇಳಿಕೆಯಲ್ಲಿ ಚೆಸ್ಕಾಂನ ಹಿರಿಯ ಇಂಜಿನಿಯರ್‌ವೊಬ್ಬರ ಸ್ಥಳಾಂತರ ಪ್ರಹಸನವನ್ನು ಉದಾಹರಿಸಿ, ಈ ಗಂಭೀರ ಆರೋಪ ಮಾಡಿದ್ದಾರೆ. ಅಲ್ಲದೆ ಮೈಸೂರಿನಲ್ಲಿ ಡಾ. ಯತೀಂದ್ರ ಸಿದ್ದರಾಮಯ್ಯ ಅವರ ಅಪ್ಪಣೆ ಇಲ್ಲದೆ ಏನೂ ನಡೆಯುವುದಿಲ್ಲ ಎಂಬುದಕ್ಕೆ ಇದು ಒಂದು ಸಾಕ್ಷಿ ಎಂದಿದ್ದಾರೆ.

ಸಾರಾ ಆರೋಪವೇನು?: ಡಾ.ಯತೀಂದ್ರ ಸಿದ್ದರಾಮಯ್ಯರ ಸಲಹೆ, ಸೂಚನೆ ಇಲ್ಲದೆ ಮೈಸೂರಿನಲ್ಲಿ ಒಂದು ಹುಲ್ಲುಕಡ್ಡಿಯೂ ಅಲುಗಾಡದು ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಅವರ ಹಠಮಾರಿತನದಿಂದಾಗಿ ಅಮಾಯಕ ಅಧಿಕಾರಿಯೊಬ್ಬರು ಎರಡೇ ದಿನದಲ್ಲಿ ಗುರಿಯಾಗಿ ಹಿಂಸೆ ಅನುಭವಿಸುತ್ತಿದ್ದಾರೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚೆಸ್ಕಾಂ)ದ ಅಧೀಕ್ಷಕ ಇಂಜಿನಿಯರ್ ಲೋಕೇಶ್ ಅವರನ್ನು ಚೆಸ್ಕಾಂ ಆಡಳಿತ ಮಂಡಳಿ, ನಿರ್ದೇಶಕ (ತಾಂತ್ರಿಕ) ರನ್ನಾಗಿ ಇತ್ತೀಚೆಗೆ ನೇಮಕ ಮಾಡಿತ್ತು. ಈ ಹುದ್ದೆಯಲ್ಲಿರುವವರು ಓರ್ವ ಸಹಾಯಕ (ಆರ್ಡರ್‌ಲೀ) ರನ್ನು ನೇಮಿಸಿಕೊಳ್ಳುವ ಅವಕಾಶ ಹೊಂದಿರುತ್ತಾರೆ. ಅದರಂತೆ ಲೋಕೇಶ್ ಅವರು ಚೆಸ್ಕಾಂ ಅಧ್ಯಕ್ಷರಾದ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡರು ಸೂಚಿಸಿದ ವ್ಯಕ್ತಿಯೊಬ್ಬರನ್ನು ಸಹಾಯಕರನ್ನಾಗಿ ನಿಯೋಜಿಸಿಕೊಂಡಿದ್ದರು. ಹೀಗೆ ನೇಮಿಸಿಕೊಳ್ಳುವ ಸಹಾಯಕರು 8–10 ತಿಂಗಳು ಕಾರ್ಯನಿರ್ವಹಿಸಿದ ನಂತರ ಖಾಯಂ ಗೊಳಿಸಿ, ನಿಯಮಾನುಸಾರ ವೇತನ ಮತ್ತು ಇತರ ಭತ್ಯೆಗಳನ್ನು ನೀಡಲಾಗುತ್ತದೆ.

ಸಿಎಂ ಸಿದ್ದರಾಮಯ್ಯರ ಪ್ರಬುದ್ಧತೆಯ ಗುಣಗಾನ ಮಾಡಿ, ಅವರ ಪುತ್ರನ ಕುಟುಕಿದ ಮಾಜಿ ಸಚಿವ ಸಾರಾ ಮಹೇಶ್



ಸಾ.ರಾ.ಮಹೇಶ್

ಲೋಕೇಶ್ ತಮ್ಮ ಸಹಾಯಕರನ್ನು ನೇಮಿಸಿಕೊಂಡ ಕೆಲವೇ ಸಮಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಕರೆ ಮಾಡಿ, ತಮ್ಮ ಕಡೆಯ ವ್ಯಕ್ತಿಯನ್ನು ಸಹಾಯಕನನ್ನಾಗಿ ನೇಮಿಸಿಕೊಳ್ಳುವಂತೆ ಸೂಚಿಸಿದ್ದಾರೆ. ಅದಕ್ಕೆ ಲೋಕೇಶ್, ಈಗಾಗಲೇ ಅಧ್ಯಕ್ಷರ ಕಡೆಯವರನ್ನು ಸಹಾಯಕರನ್ನಾಗಿ ನೇಮಿಸಿ ಕೊಂಡಿರುವುದಾಗಿ ತಿಳಿಸಿದ್ದರಂತೆ. ಈ ವಿಚಾರವನ್ನು ವೈಯಕ್ತಿಕ ಹಾಗೂ ಪ್ರತಿಷ್ಠೆಯಾಗಿ ತೆಗೆದುಕೊಂಡ ಡಾ.ಯತೀಂದ್ರ ಸಿದ್ದರಾಮಯ್ಯ, ಲೋಕೇಶ್ ಅವರು ನೇಮಕಗೊಂಡ ಎರಡೇ ದಿನದಲ್ಲಿ ನಿರ್ದೇಶಕ ಸ್ಥಾನದಿಂದ ಕಿತ್ತುಹಾಕಿ, ಚೀಫ್ ಇಂಜಿನಿಯರ್ ಹುದ್ದೆಗೆ ಸ್ಥಳಾಂತರ ಆಗುವಂತೆ ನೋಡಿಕೊಂಡಿದ್ದಾರೆ. ಇದೊಂದು ರೀತಿ ಹಿಂಬಡ್ತಿಯಾಗಿದೆ. ಸದ್ಯ ಪ್ರಭಾರ ನಿರ್ದೇಶಕರೊಬ್ಬರನ್ನು ನೇಮಕ ಮಾಡಿರುವ ಮಾಹಿತಿ ಲಭ್ಯವಾಗಿದೆ.



ಡಾ.ಯತೀಂದ್ರ

ಲೋಕೇಶ್ ಅವರು ಮೂರು ದಶಕಗಳಿಗೂ ಅಧಿಕ ಕಾಲದಿಂದ ಪ್ರಾಮಾಣಿಕರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅವರು ಇನ್ನು 8–10 ತಿಂಗಳಲ್ಲಿ ನಿವೃತ್ತರಾಗಲಿದ್ದಾರೆ. ಮಾತ್ರವಲ್ಲದೆ ಇವರು ಹಿಂದುಳಿದ ಸಮುದಾಯಕ್ಕೆ ಸೇರಿದವರು. ಆದರೆ ಡಾ.ಯತೀಂದ್ರ ಅವರು ಕಿಂಚಿತ್ತೂ ಸಹನೆ, ಸಂಯಮ, ಕರುಣೆ ತೋರದೆ ಲೋಕೇಶ್ ಅವರನ್ನು ಹಿಂಬಡ್ತಿಗೊಳಿಸುವ ಕ್ರಮಕ್ಕೆ ಮುಂದಾಗಿದ್ದು ಅತ್ಯಂತ ವಿಷಾದದ ಸಂಗತಿ.

ಸಿಎಂ ಸಿದ್ದರಾಮಯ್ಯರ ಗುಣಗಾನ: ರಾಜ್ಯದಲ್ಲಿ ಅಧಿಕಾರಿಗಳ ವರ್ಗಾವಣೆ, ಬಡ್ತಿ ಇನ್ನಿತರೆ ವಿಷಯದಲ್ಲಿ ಮುಖ್ಯಮಂತ್ರಿಗಳ ಪುತ್ರ ಯತೀಂದ್ರ ಹಸ್ತಕ್ಷೇಪ ಮಾಡುತ್ತಾ ಬಂದಿದ್ದಾರೆ ಎಂಬುದಕ್ಕೆ ಇದೊಂದು ತಾಜಾ ಉದಾಹರಣೆ. ಕಳೆದ ನಾಲ್ಕು ದಶಕಗಳಿಂದ ನಾವೂ ಸಹ ಸಿದ್ದರಾಮಯ್ಯ ಅವರ ರಾಜಕಾರಣವನ್ನು ಗಮನಿಸಿಕೊಂಡು ಬಂದಿದ್ದೇವೆ. ಇಂತಹ ವಿಚಾರದಲ್ಲಿ ಅವರು ಅತ್ಯಂತ ಪ್ರಬುದ್ಧತೆ ತೋರಿಸಿದಂತಹವರು. ಎಲ್ಲವನ್ನೂ ಕೂಲಂಕುಶವಾಗಿ ಪರಿಶೀಲನೆ ಮಾಡಿ, ನಂತರ ನಿರ್ಧರಿಸುವಂತಹವರು. ಆದರೆ ಈಗ ಅವರ ಗಮನಕ್ಕೂ ಬಾರದಂತೆ ಅವರ ಪುತ್ರ ಮಾಡುತ್ತಿರುವ ಇಂತಹ ಕೆಲಸಗಳಿಂದ ಎಲ್ಲೋ ಒಂದು ಕಡೆ ಸಿದ್ದರಾಮಯ್ಯರಿಗೂ ಅಪಖ್ಯಾತಿ ಬರಬಹುದು ಎಂದು ಸಾ.ರಾ.ಮಹೇಶ್ ಕಳಕಳಿ ವ್ಯಕ್ತಪಡಿಸಿದ್ದಾರೆ.

ಏನೋ ಸಮಸ್ಯೆಯಾಯ್ತು...!: ಈ ವಿದ್ಯಮಾನಗಳ ಬಗ್ಗೆ 'ಮೈಸೂರು ಮಿತ್ರ' ಲೋಕೇಶ್ ಅವರನ್ನು ಮೊಬೈಲ್ ಮೂಲಕ ಸಂಪರ್ಕಿಸಿದಾಗ, 'ಏನೋ ಸಮಸ್ಯೆಯಾಯ್ತು... ಬಿಡಿ ಸಾರ್' ಎಂದು ಅತ್ಯಂತ ನೋವಿನಿಂದ ನುಡಿದರು.

ನಕ್ಕರೆ ಅದೇ ಸ್ವರ್ಗ

ಪ್ರಿನ್ಸಿಪಾಲ್: ಕಾಲೇಜಿಗೆ ಯಾಕೆ ಲೇಟಾಗಿ ಬಂದೆ?
ವಿದ್ಯಾರ್ಥಿ: ಸಾರ್, ಬೈಕ್ ಪಂಕ್ಚರ್ ಆಗಿ ಹೋಯ್ತು...
ಪ್ರಿನ್ಸಿಪಾಲ್: ಬೈಕ್ ಬಿಟ್ಟು ಬಸ್‌ನಲ್ಲಿ ಬರಬೇಕು ಅಲ್ವಾ
ವಿದ್ಯಾರ್ಥಿ: ಹೌದು ಸರ್, ಆದರೆ ನಿಮ್ಮ ಮಗಳು ಕೇಳಬೇಕಲ್ಲಾ?

ಮೈಸೂರು ಮಿತ್ರ
ಮಂಗಳವಾರ, ಏಪ್ರಿಲ್ 21, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ದಾನದಿಂದ ಮನೆ ಸಂಪದ್ಭರಿತ, ಧ್ಯಾನದಿಂದ ಮನಸ್ಸು ಸಂಪದ್ಭರಿತ, ಪ್ರೀತಿಯಿಂದ ಹೃದಯ ಸಂಪದ್ಭರಿತ, ನಂಬಿಕೆಯಿಂದ ಸಂಬಂಧಗಳು ಸಂಪದ್ಭರಿತ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಅಳುವ ಗಂಡಸನ್ನು ... ನಗುವ ಹೆಂಗಸನ್ನೂ ನಂಬಬೇಡ !

ನಿಮ್ಮ ಪತ್ರಗಳು

ಬಾನಂಗಳದಿಂದ ಬಾಬಾ ಸಾಹೇಬರಿಗೆ ಹೂ ಮಳೆ ಸುರಿಸಿದ ಅಶೋಕಪುರಂ

ಮಾನ್ಯರೆ,

ವಿಶ್ವಜ್ಞಾನಿ, ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ. ಬಿ.ಆರ್ ಅಂಬೇಡ್ಕರ್ ಅವರ 135ನೇ ವರ್ಷದ ಜನ್ಮ ದಿನೋತ್ಸವವನ್ನು ಮೈಸೂರಿನಲ್ಲೇ ತನ್ನದೇ ಆದ ವರ್ಚಸ್ಸನ್ನು ಹೊಂದಿರುವ ಅಶೋಕಪುರಂ ಜನತೆ ವಿನೂತನವಾಗಿ ಹೆಲಿಕಾಪ್ಟರ್ ಮೂಲಕ ಆಗಸದಿಂದ ಡಾ.ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ, ಹೆಲಿಕಾಪ್ಟರ್ ಮೂಲಕ ಸಂವಿಧಾನ ಶಿಲ್ಪಿಗೆ ಹೂ ಮಳೆ ಸುರಿಸಿದ ದಾಖಲೆಯನ್ನು ರಾಜ್ಯದಲ್ಲೇ ಮೊದಲನೆಯದಾಗಿ ರಾಷ್ಟ್ರದಲ್ಲಿ ಎರಡನೆಯದಾಗಿ ರಾಷ್ಟ್ರ ವ್ಯಾಪಿ ಮೆಚ್ಚುಗೆಯನ್ನು ಗಳಿಸಿದೆ.

ಅಶೋಕಪುರಂ ಮೈಸೂರು ಪ್ರಾಂತ್ಯದ ಅನಾದಿಕಾಲದಿಂದಲೂ ಅನೇಕ ಬಗೆಯ ಚಾರಿತ್ರಿಕ ಇತಿಹಾಸದಲ್ಲಿ ತನ್ನದೇ ಆದ ಗಟ್ಟಿತನವನ್ನು ತೋರಿರುವುದು ಐತಿಹಾಸಿಕವಾಗಿದೆ. ಈಗಿನ ಮೈಸೂರಿನ ಅಂಬಾವಿಲಾಸ ಅರಮನೆಗೆ 1897 ರಲ್ಲಿ ಆಗಿನ ಅರಮನೆಯು ಬೆಂಕಿಗೆ ಆಹುತಿಯಾದ ಸಂದರ್ಭದಲ್ಲಿ ಬೆಂಕಿಯ ಕೆನ್ನಾಲಿಗೆಯನ್ನು ಆರಿಸಲು ಸಂಪೂರ್ಣವಾಗಿ ಸಹಕರಿಸಿದ ಜನಗಳೇ ಈಗಿನ ಅಶೋಕಪುರಂನ ಪೂರ್ವಜರು. ಇದನ್ನು ಸೂಕ್ಷ್ಮವಾಗಿ ಗಮನಿಸಿದಂತಹ ಅಂದಿನ ಮೈಸೂರಿನ ಶ್ರೇಷ್ಠ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಇವರ ನಿಷ್ಠೆಯನ್ನು ಹಾಗೂ ಮೈಸೂರು ಸಾಮ್ರಾಜ್ಯದ ಮೇಲೆ ಇರುವ ಬದ್ಧತೆಯನ್ನು ಒಪ್ಪಿ ತಮ್ಮ ಅಧೀನಕ್ಕೆ ಒಳಪಟ್ಟ ಭೂಮಿಯನ್ನು ವಾಸ ಮಾಡಲು ನೀಡಿ ಅದಕ್ಕೆ ಅಶೋಕಪುರಂ ಎಂಬ ಹೆಸರಿಟ್ಟು ಅಲ್ಲಿನ ಜನಗಳಿಗೆ ಕೃತಜ್ಞತೆಯನ್ನು ಸಲ್ಲಿಸಿ ಮೈಸೂರು ಸಾಮ್ರಾಜ್ಯದ ಇತಿಹಾಸ ಪುಟಗಳಲ್ಲಿ ಅಶೋಕಪುರಂ ದಾಖಲಾಗುವಾಗೆ ನಾಲ್ವಡಿ ಅವರು ನೆರವಾಗಿದ್ದಾರೆ.

ಇಂತಹ ಪ್ರಾಮಾಣಿಕತೆಯ ಬದ್ಧತೆಗೆ ಹೆಸರಾದ ಅಶೋಕಪುರಂ ಜನರೂ ಬಾಬಾ ಸಾಹೇಬರ ವಂಶಸ್ಥರ ಕುಡಿಗಳು ಎನ್ನುವುದು ವಿಶೇಷ. ಕೇವಲ ಒಂದು ಜಾತಿಗೆ ಅಥವಾ ಒಂದು ಧರ್ಮಕ್ಕೆ ತಮ್ಮ ಹೋರಾಟವನ್ನು ತಮ್ಮ ಜೀವನದುದ್ದಕ್ಕೂ ಸೀಮಿತಗೊಳಿಸದೆ ಈ ದೇಶದಲ್ಲಿ ಹುಟ್ಟುವ ಪ್ರತಿಯೊಬ್ಬರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸಮಾನತೆಯಿಂದ ತಮ್ಮ ಹಕ್ಕುಗಳನ್ನು ಅನುಭವಿಸುವ ಅವಕಾಶವನ್ನು ಸಂವಿಧಾನದ ಮೂಲಕ ನೀಡಿ ಹಾಗೂ ತನಗೆ ವ್ಯವಸ್ಥೆಯಿಂದ ಅನ್ಯಾಯಕ್ಕೆ ಒಳಪಟ್ಟ ಸಂದರ್ಭದಲ್ಲಿ ಕಾನೂನು ಬದ್ಧವಾಗಿ ಹೋರಾಟದ ಮೂಲಕ ನ್ಯಾಯವನ್ನು ಗಳಿಸುವ ಧೈರ್ಯ ತುಂಬಿದ ದಿವ್ಯ ಚೇತನ ಮಹಾ ಮಾನವತಾವಾದಿ ಡಾ. ಅಂಬೇಡ್ಕರ್ ಅವರು. ಈ ಮಹಾನ್ ಚೇತನಕ್ಕೆ 135 ವರ್ಷಗಳು ತುಂಬಿದ ಸುದಿನಕ್ಕೆ ಬಾನಂಗಳದಿಂದ ಹೂ ಮಳೆಯನ್ನು ಸುರಿಸುವ ಮೂಲಕ ಅಶೋಕಪುರಂ ಜನತೆಯು ಮಹಾ ನಾಯಕ ಬಾಬಾ ಸಾಹೇಬರಿಗೆ ಸಾವಿರಾರು ಜನಗಳ ಮಧ್ಯೆ ವಿಶೇಷ ಗೌರವ ಸಮರ್ಪಿಸಿದ್ದಾರೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ

ಬಾಡಿಗೆ ನಿಯಮ ಖಂಡನೀಯ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಮೈಸೂರಿನಲ್ಲಿ ಮನೆ ಮಾಲೀಕರಿಗೆ ದುರಾಸೆ ಹೆಚ್ಚಾಗಿದ್ದು, ಸಾಮಾನ್ಯ ಜನರ ಜೇಬಿಗೆ ಕತ್ತರಿ ಬೀಳುವಂತಾಗಿದೆ. ಏಕೆಂದರೆ ನಮಗೆ ಆದಂತಹ ಅನುಭವ ಇದು. ಬಾಡಿಗೆ ಮನೆಗೆ ಹೋಗುವಂತಹ ಸಾಮಾನ್ಯ ಜನರು ಮತ್ತು ಮಧ್ಯಮ ವರ್ಗದವರು ತಮ್ಮ ಅವಶ್ಯಕತೆಗೆ ತಕ್ಕಂತೆ ಬಾಡಿಗೆ ಮನೆಗಳನ್ನು ನೋಡುತ್ತಾರೆ. ಆದರೆ ಮನೆಯ ಮಾಲೀಕರಾದವರು ತಮಗೆ ಇಷ್ಟ ಬಂದಂಗೆ ಬಾಡಿಗೆಯನ್ನು ಕೇಳುತ್ತಾರೆ. ಇದರಿಂದಾಗಿ ದಿನನಿತ್ಯ ಕೂಲಿ ಕೆಲಸ ಮಾಡುವವರು ದುಡಿದು ತಿನ್ನುವವರು ಇಷ್ಟೊಂದು ಬಾಡಿಗೆ ಹೇಗೆ ಕಟ್ಟಬೇಕಾಗಿದೆ ಎಂಬುವ ವಿಷಯ ಸಾಮಾನ್ಯವಾಗಿ ಕಾಡುತ್ತಿದೆ. ಆದ್ದರಿಂದ ಸರ್ಕಾರ ಇಂತಹ ಬಡ ಕುಟುಂಬದವರಿಗೆ ಹಾಗೂ ನಮ್ಮಂತಹ ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ರೆಂಟ್ ಕಂಟ್ರೋಲ್ ಆಕ್ಟನ್ನು ಕಾಯಂ ಮಾಡಬೇಕು ಎಂಬುದು ನನ್ನ ಮನವಿ.

–ಸೈಯದ್ ಅಫ್ತಾಬ್, ಪತ್ರಕರ್ತ ಮೈಸೂರು

ಫೇಲ್ ಆದ ವಿದ್ಯಾರ್ಥಿಗಳಿಗೆ ಕೌನ್ಸಿಲಿಂಗ್ ವ್ಯವಸ್ಥೆ ಕಲ್ಪಿಸಿ

ಮಾನ್ಯರೆ,

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗುತ್ತಿರುವುದು ಶಿಕ್ಷಣ ಇಲಾಖೆಯ ವ್ಯವಸ್ಥಿತ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಅಂಕಿಅಂಶಗಳ ಪ್ರಕಾರ ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೇವಲ ಪರೀಕ್ಷಾ ಒತ್ತಡದಿಂದ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇಲಾಖೆಯ ಸಹಾಯವಾಣಿಗಳು ಕಾರ್ಯ ನಿರ್ವಹಿಸುತ್ತಿಲ್ಲ. ಗ್ರಾಮೀಣ ಮಟ್ಟದ ವಿದ್ಯಾರ್ಥಿಗಳಿಗೆ ಲಭ್ಯವಾಗುತ್ತಿಲ್ಲ. ಅಂಕಗಳನ್ನೇ ಮಾನದಂಡವಾಗಿಸಿಕೊಂಡಿರುವ ಈ ಶಿಕ್ಷಣ ಕ್ರಮವು ವಿದ್ಯಾರ್ಥಿಗಳನ್ನು ಮಾನಸಿಕವಾಗಿ ಕುಗ್ಗಿಸುತ್ತಿದೆ. ಕೇವಲ ಪರೀಕ್ಷೆಗಳನ್ನು ನಡೆಸುವುದರಲ್ಲಿ ಮಗ್ನವಾಗಿರುವ ಸರ್ಕಾರ ಪ್ರತಿ ಶಾಲಾ ಕಾಲೇಜುಗಳಲ್ಲಿ ಕಡ್ಡಾಯ ಆಪ್ತ ಸಮಾಲೋಚನೆ ಕೇಂದ್ರಗಳನ್ನು ಸ್ಥಾಪಿಸಲಿ. ವಿದ್ಯಾರ್ಥಿಗಳ ಜೀವಕ್ಕಿಂತ ಅಂಕಪಟ್ಟಿ ಮುಖ್ಯವಲ್ಲ ಎಂಬ ಕನಿಷ್ಠ ಜ್ಞಾನವಿಲ್ಲದ ಇಲಾಖೆಯ ಮೌನವು ಈ ಶೈಕ್ಷಣಿಕ ಕೊಲೆಗಳಿಗೆ ನೇರ ಹೊಣೆಯಾಗಿದೆ. ಕೂಡಲೇ ಫೇಲ್ ಆದ ವಿದ್ಯಾರ್ಥಿಗಳಿಗೆ ಕೌನ್ಸಿಲಿಂಗ್ ವ್ಯವಸ್ಥೆ ಕಲ್ಪಿಸಿ ಆತ್ಮಹತ್ಯೆ ತಡೆಗಟ್ಟಿ.

–ಡಾ. ಎಚ್.ಕೆ. ವಿಜಯಕುಮಾರ, ಮೈಸೂರು.


ಬೇಸಿಗೆಯಲ್ಲಿ ವಿದ್ಯುತ್ ದರ ಏರಿಕೆ ಶಾಕ್

ಮಾನ್ಯರೆ,

ಅಗತ್ಯ ವಸ್ತುಗಳ ಬೆಲೆ ಏರಿಕೆಯ ನಡುವೆ ಬಿರು ಬೇಸಿಗೆಯಲ್ಲಿ ಗೃಹಬಳಕೆಯ ಗ್ರಾಹಕರಿಗೆ ವಿದ್ಯುತ್ ದರ ಏರಿಕೆ ಶಾಕ್ ಎದುರಿಸುವಂತಾಗಿದ್ದು, ಜನತೆಯಲ್ಲಿ ಅಸಮಾಧಾನ ವ್ಯಕ್ತವಾಗುತ್ತಿದೆ. ತಮ್ಮ ತಮ್ಮಲ್ಲೇ ಸರ್ಕಾರದ ನಡೆಗೆ ಶಾಪ ಹಾಕುತ್ತಿರುವುದು ಸರ್ವೇಸಾಮಾನ್ಯವಾಗಿದೆ.ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು(ಸೆಸ್ಕಾಂಗಳು) ನಷ್ಟದ ಭೀತಿಯಿಂದ ಪ್ರಸ್ತಾವನೆ ಸಲ್ಲಿಸಿರುವುದು ವಿಪರ್ಯಾಸವೇ ಸರಿ. ನಷ್ಟಕ್ಕೆ ಸರಿಯಾದ ಕಾರಣವನ್ನು ಹುಡುಕುವುದರ ಬದಲು ರಾಜ್ಯದ ಜನತೆಯ ಜೇಬಿಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) ಕೈ ಹಾಕಿ ದರ ಏರಿಕೆಗೆ ಆದೇಶ ನೀಡಿರುವುದು ಅನಗತ್ಯ ಬೆಳವಣಿಗೆ. ಇನ್ನೂ ಕಾಲ ಮಿಂಚಿಲ್ಲ ದರ ಏರಿಕೆಯನ್ನು ಹಿಂಪಡೆದು ಜನತೆಗೆ ಅನುಕೂಲ ಮಾಡುವುದು ಸೂಕ್ತ.

– ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಶಂಕರರ ಸೂತ್ರದಲ್ಲಿ ಮನುಷ್ಯನ ಸುಂದರ ಬದುಕು



ಇಂದು ಶಂಕರ ಜಯಂತಿ

ಭಾರತೀಯ ಸಂಸ್ಕೃತಿ ಬಹು ವಿಶಾಲವಾದುದು; ಬಹು ವ್ಯಾಪಕವಾದುದು. ಅದೊಂದು ಆಲದ ಮರವಿದ್ದಂತೆ. ಭಾರತೀಯ ಸಂಸ್ಕೃತಿಯೂ ಹಾಗೆಯೇ. ಅದು ಮೂಲದಲ್ಲಿ ಏಕ ಸಮಾಜದ್ದು. ಆದರೆ ಫಲ–ಪರಿಣಾಮಗಳಲ್ಲಿ ಅದು ಬಹು ಸಂಸರ್ಗದ್ದು. ನಾನಾ ಸಮಾಜ ಸಂಘಟಕವಾದುದು. ವಿಶ್ವವಿಸ್ತಾರವಾದುದು. ಅದರ ತೆಕ್ಕೆಗೆ ಬಾರದೇ ಇದ್ದ ಸಂಗತಿಗಳೇ ಇಲ್ಲ. ದೇವತಾ ಮತಧರ್ಮ, ಶ್ರುತಿಸ್ಮೃತಿ, ಪುರಾಣ, ತತ್ತ್ವಜಿಜ್ಞಾಸೆ, ಪೂಜೆ, ಧ್ಯಾನ, ಉಪವಾಸ, ವ್ರತನಿಯಮಾದಿಗಳು, ಸಾಹಿತ್ಯಾದಿ ಸರಸಕಲೆ, ವಿಜ್ಞಾನ, ದೇಶ–ವಿದೇಶ ಚರಿತ್ರೆ, ಹೀಗೆ ನೂರಾರು ಸಂಗತಿಗಳು ನಮ್ಮ ಸಂಸ್ಕೃತಿಯ ಮೂಲಸ್ಥಾನಗಳಾಗಿವೆ. ಯೋಗ–ಭೋಗ ಸಮನ್ವಯ, ಪ್ರವೃತ್ತಿ–ನಿವೃತ್ತಿ ಸಮನ್ವಯ, ಬ್ರಾಹ್ಮ–ಕ್ಷಾತ್ರ ಸಮನ್ವಯ, ಕರ್ಮ–ಜ್ಞಾನ–ಭಕ್ತಿ ಸಮನ್ವಯ ಹೀಗೆ ಹಲವು ವಿಷಯಗಳ ಸಮನ್ವಯವೇ ನಮ್ಮ ಸಂಸ್ಕೃತಿಯ ವೈಶಿಷ್ಟ್ಯಗಳಾಗಿವೆ. ಈ ವಿಶ್ವೋದಾರ ತತ್ತ್ವವನ್ನು ಅದ್ವೈತ ಮತಪ್ರಚಾರಕ ಜಗದ್ಗುರು ಶ್ರೀ ಶಂಕರಾಚಾರ್ಯರು ತಮ್ಮ ಭಜ ಗೋವಿಂದ ಸ್ತೋತ್ರದ

ಯೋಗರತೋ ವಾ ಭೋಗರತೋ ವಾ
ಸಂಗರತೋ ವಾ ಸಂಗವಿಹೀನಃ
ಯಸ್ಯ ಬ್ರಹ್ಮಣಿ ರಮತೇ ಚಿತ್ತಂ ನಂದತಿ ನಂದತಿ ನಂದತ್ಯೇವ ॥

ಎಂಬ ಪದ್ಯದಲ್ಲಿ ಬಹು ಸುಂದರವಾಗಿ ಪ್ರತಿಪಾದಿಸಿದ್ದಾರೆ. ಯಾವನೇ ಆಗಲಿ, ಅವನು ಯೋಗದಲ್ಲಿ ಆಸಕ್ತನಾಗಿರಲಿ, ಭೋಗದಲ್ಲಿ ಆಸಕ್ತನಾಗಿರಲಿ, ಸಂಗ ಕಟ್ಟಿಕೊಂಡಿರಲಿ ಅಥವಾ ಬಿಟ್ಟಿರಲಿ, ಅವನ ಮನಸ್ಸು ಬ್ರಹ್ಮದಲ್ಲಿ ರಮಿಸುತ್ತಿದ್ದರೆ ಖಂಡಿತಕ್ಕೂ ಆತ ಬ್ರಹ್ಮಾನಂದ ಪಡೆಯುವುದರಲ್ಲಿ ಸಂದೇಹವಿಲ್ಲ. ಹಾಗೆಂದರೆ; ಶಂಕರಾಚಾರ್ಯರು ಮನುಷ್ಯನೊಬ್ಬ ಬ್ರಹ್ಮಸಾಕ್ಷಾತ್ಕಾರಕ್ಕೆ ಹೀಗೆಯೇ ಇರಬೇಕೆಂಬ ನಿಯಮವನ್ನು ಹೇರುವುದಿಲ್ಲ. ಅವನು ಯೋಗರತನೇ ಆಗಿರಲಿ, ಭೋಗರತನೇ ಆಗಿರಲಿ, ಸಂಗ–ಸಂಸಾರ, ಮನೆ–ಮಠ ಕಟ್ಟಿಕೊಂಡಿರಲಿ ಅಥವಾ ಎಲ್ಲವನ್ನೂ ತ್ಯಜಿಸಿರಲಿ. ಅವನ ಮನಸ್ಸು ದೇವರಲ್ಲಿ ರಮಿಸಿದರೆ ಸಾಕು. ಅವನು ಬ್ರಹ್ಮಾನಂದವನ್ನು ಪಡೆಯುತ್ತಾನೆ. ಇದೇ ಆಚಾರ್ಯರ ವಿಶ್ವೋದಾರ ತತ್ತ್ವ.

ಭಾರತೀಯರು ಯಾವುದೇ ಕೆಲಸ ಮಾಡುವುದಿದ್ದರೂ ಅದನ್ನು ಯಜ್ಞ ಬುದ್ಧಿಯಿಂದ ಮಾಡಬೇಕೆಂದು ಹೇಳುತ್ತಾರೆ. ಯಜ್ಞವೆಂದರೆ ನಮ್ಮ ಮನಸ್ಸಿನಲ್ಲಿ ಹೋಮ, ಹವನ, ತುಪ್ಪ, ಸಮಿತ್ತು ಇತ್ಯಾದಿಗಳ ಚಿತ್ರ ಏಳಬಹುದು. ಆದರೆ ಅದಲ್ಲ. ಇಲ್ಲಿ ಯಜ್ಞವೆಂದರೆ ತನಗೆ ಪ್ರಿಯ ವಾದದ್ದನ್ನು ಅನ್ಯಪ್ರೀತ್ಯರ್ಥವಾಗಿ (ಭಗವತ್ಪ್ರೀತ್ಯರ್ಥವಾಗಿ) ಸಮರ್ಪಿಸುವುದು ಎಂದು ಅರ್ಥ. ಗೀತೆ, ಉಪನಿಷತ್ತುಗಳಲ್ಲಿ ಯಜ್ಞದ ಬಗ್ಗೆ ತುಂಬಾ ಮಾತುಗಳು ಬಂದಿವೆ. ಅವನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳುವುದಾದರೆ– ನಮ್ಮ ಸುಖಸಂತೋಷಗಳೆಲ್ಲ ದೇವರು ಕೊಟ್ಟ ಪ್ರಸಾದ, ಅವು ಭಗವದನುಗ್ರಹದಿಂದ ಬಂದದ್ದು. ಅವನ್ನು ಅನುಭವಿಸುವಾಗ ಅದು ಭಗವಂತನ ಪ್ರಸಾದ ಅನ್ನಿ. ಬಾಯಿಂದ ಅಲ್ಲ. ಮನಸ್ಸಿನಿಂದ, ಅಂತರಂಗದ ಆಳದಿಂದ ಅನ್ನಿ. ಅದೇ ಬ್ರಹ್ಮ ಸ್ಮೃತಿ. ಅದೇ ಯಜ್ಞ. ಶಂಕರಾಚಾರ್ಯರು ಆ ಬ್ರಹ್ಮಸ್ಮೃತಿಯನ್ನು ಯಸ್ಯ ಬ್ರಹ್ಮಣಿ ರಮತೇ ಚಿತ್ತಂನಂದತಿ ನಂದತಿ ನಂದತ್ಯೇವ ಎಂಬ ಸ್ತೋತ್ರಖಂಡದಲ್ಲಿ ಮನ ಗಾಣಿಸಿಕೊಟ್ಟಿದ್ದಾರೆ.

ಹಾಗಾದರೆ ಈ ಬ್ರಹ್ಮ ಸ್ಮರಣೆ ಯನ್ನು ಯಾಕೆ ಮಾಡಬೇಕು ಎಂಬ ಪ್ರಶ್ನೆ ಏಳುತ್ತದೆ. ಅದಕ್ಕೂ ಕಾರಣವಿದೆ. ಯಾವುದೇ ಕೆಲಸ ಮಾಡುವಾಗ, ಸುಖೋಪ ಭೋಗಗಳನ್ನು ಅನುಭವಿಸುವಾಗ, ಒಳ್ಳೆಯ ಸಂಸಾರವಂದಿಗ ನಾದಾಗ, ಒಳ್ಳೆಯ ಹೆಂಡತಿ ಮಕ್ಕಳನ್ನು ಪಡೆದಾಗ, ಒಳ್ಳೆಯ ನೌಕರಿಯಲ್ಲಿರುವಾಗ ಅವೆಲ್ಲವೂ ಭಗವಂತನಿಂದ ಪ್ರಾಪ್ತವಾದದ್ದು ಎಂಬ ಸ್ಮರಣೆಯಿದ್ದರೆ ನಮ್ಮ ಅಹಂಭಾವ ಒಂದಿಷ್ಟು ಸವೆದು, ಪಾಪ ನೀಗಿ, ಜೀವ ಕೊಂಚ ಶುದ್ಧವಾಗುತ್ತದೆ. ಜೀವ ಶುದ್ಧವಾದಂತೆಲ್ಲ ಅದು ತತ್ತ್ವಗ್ರಹಣಕ್ಕೆ ಸಮರ್ಥವಾಗುತ್ತದೆ. ಈ ಬ್ರಹ್ಮ ಸ್ಮರಣೆ ದೇವರ ಸಾನ್ನಿಧ್ಯಕ್ಕೆ ಸುಲ ಭೋಪಾಯ. Practice of the presence of God ದೇವರ ಸಾನ್ನಿಧ್ಯದ ಅಭ್ಯಾಸ ಬೇಕು ಎಂದು ಇಂಗ್ಲಿಷಿನಲ್ಲೂ ಹೇಳುತ್ತಾರೆ.

ಆದರೆ ಇಂದೇನಾಗಿದೆ; ದೇವರ ಸಾನ್ನಿಧ್ಯವೆಂದರೆ ದೇವರ ದರ್ಶನ ಕ್ಕಾಗಿ ಬಿಸಿಲು–ಮಳೆ–ಚಳಿಯೆನ್ನದೇ ಗಂಟೆಗಟ್ಟಳೆ, ದಿನಗಟ್ಟಳೆ ಕ್ಯೂ ನಿಲ್ಲುವುದು, ರುದ್ರಾಕ್ಷಿ ವಿಭೂತಿ ಧರಿಸುವುದು, ಅರಚಿ ಕಿರುಚಿ ಭಜನೆ ಮಾಡುವುದು, ದೇವರ ತಲೆಯ ಮೇಲೆ ಲಕ್ಷಾಂತರ ರೂ.ಗಳ ಹೂ ಸುರಿಸುವುದು, ಢೋಂಗಿ ಸುಳ್ಳು ಜ್ಯೋತಿಷ್ಯರಿಗೆ ಮರುಳಾಗಿ ಅವರು ಹೇಳಿದ ದೇವಸ್ಥಾನಗಳಿಗೆ ಹೋಗಿ ಪೂಜೆ ಸಲ್ಲಿಸುವುದು ಮಾಮೂಲಾಗಿದೆ. ಅಂತರಂಗದಲ್ಲಿ ಯಜ್ಞಭಾವವಿಲ್ಲದ, ಈಶ್ವರ ಸ್ಮರಣೆಯಿಲ್ಲದ, ಯಾವ ತತ್ತ್ವಾರ್ಥ ಚಿಂತನೆಯೂ ಇಲ್ಲದ ಬಹಿರಾಡಂಬರದ ಪೂಜೆ, ಹೋಮ ಹವನಗಳೇ ಭಗವತ್ಸಾನ್ನಿಧ್ಯ ಎಂಬಂತಾಗಿದೆ. ಯಜ್ಞ ಭಾವನೆಯಿಲ್ಲದ ಪೂಜೆಯು ಸಾವಿರ ಹೂಗಳಿಂದಲೂ, ಲಕ್ಷ ಕುಂಕುಮಾರ್ಚನೆಗಳಿಂದಲೂ, ಕೋಟಿ ಕೋಟಿ ದಾನ ದಕ್ಷಿಣೆಗಳಿಂದಲೂ ಫಲ ಕೊಡದು. ತಾನನುಭವಿಸುತ್ತಿರುವುದೆಲ್ಲ ಭಗವಂತನ ಅನುಗ್ರಹವೆಂದು ಭಾವಿಸಿದ್ದೇ ಆದರೆ ಅವನ ಅಹಂಭಾವವೆಲ್ಲಾ ಕ್ಷಯಿಸಿ ಭಗವಂತನ ಸಾಮೀಪ್ಯ ಸುಲಭವಾಗುತ್ತದೆ. ಭಗವಂತನೇ ಹೇಳಿದಂತೆ ಪತ್ರಂ ಪುಷ್ಪಂ ಫಲಂ ತೋಯಮ್ ತನ್ನ ಅರ್ಚನೆಗೆ ಒಂದು ಎಲೆಯೂ ಆದೀತು! ಒಂದು ಹೂವೂ ಆದೀತು! ಹಣ್ಣೂ ಆದೀತು! ಕೊನೆ ಪಕ್ಷ ನೀರೂ ಆದೀತು! ಇದು ಭಗವದರ್ಚನೆಯ ಸುಲಭ ವಿಧ. ಇಂತಹ ಗಹನವಾದ ವೇದಾಂತ ಮರ್ಮವನ್ನು ಸುಂದರವಾದ ಈ ಸ್ತೋತ್ರದಲ್ಲಿ ಅಡಕಗೊಳಿಸಿದ್ದು ಶಂಕರಾಚಾರ್ಯರ ಹಿರಿಮೆಯಾಗಿದೆ.

ಜೀವನಿಗೂ ಪರಮಾತ್ಮನಿಗೂ ಭೇದವಿಲ್ಲವೆಂದು ಅದ್ವೈತ ವೇದಾಂತ ಹೇಳುತ್ತದೆ. ಶಂಕರಾಚಾರ್ಯರು ಇದನ್ನು ಅದೆಂತಹ ಸುಂದರ ಉಪಮೆ ಮೂಲಕ ತೋರಿಸಿಕೊಟ್ಟಿದ್ದಾರೆ ಅನ್ನುವುದನ್ನು ಅದನ್ನು ಓದಿಯೇ ಸವಿಯಬೇಕು. ಅದು ಬರುವುದು ಅವರೇ ರಚಿಸಿದ ವಿಷ್ಣುಷಟ್ಪದೀ ಸ್ತೋತ್ರದಲ್ಲಿ–

ಸತ್ಯಪಿ ಭೇದಾಪಗಮೇ ।
ನಾಥ ತವಾಹಂ ನ ಮಾಮಕೀನಸ್ತ್ವಮ್ ।
ಸಾಮುದ್ರೋ ಹಿ ತರಂಗಃ ।
ಕ್ವಚನ ಸಮುದ್ರೋ ನ ತಾರಂಗಃ ॥

ಸ್ವಾಮಿ, ನಾನು ನಿನ್ನ ಭಕ್ತ. ನೀನು ನನ್ನ ಅಧೀನನಲ್ಲ. ಹೇಗೆಂದರೆ– ಸಮುದ್ರಕ್ಕೂ ಅಲೆಗೂ ಭೇದವಿಲ್ಲವಾದರೂ ಅಲೆಯು ಅಲೆಯ ಆಕಾರದಲ್ಲಿರುವಾಗ ಶಕ್ಯವಾದ ದೃಷ್ಟಿ ಒಂದು. ಅಲೆಯು ಸಮುದ್ರ ರಾಶಿಯಲ್ಲಿ ಲಯವಾದ ಬಳಿಕ ಶಕ್ಯವಾದ ದೃಷ್ಟಿ ಇನ್ನೊಂದು. ಅಂದರೆ ಅಲೆಯು ಸಮುದ್ರಕ್ಕೆ ಸೇರಿದ್ದು. ಆದರೆ ಸಮುದ್ರವು ಎಂದಿಗೂ ಅಲೆಗೆ ಸೇರಿದ್ದಲ್ಲ. ಹಾಗೆಯೇ ನಾನು ಎಂದೆಂದಿಗೂ ಸಮುದ್ರದಲ್ಲಿ ಲಯವಾಗುವ ತರಂಗದಂತೆ ನಿನ್ನಲ್ಲಿ ಸೇರುವವನು. ನನಗೆ ಪ್ರತ್ಯೇಕ ಅಸ್ತಿತ್ವವಿಲ್ಲ. ಇಲ್ಲಿ ಅಲೆ ಜೀವವಾದರೆ ಸಮುದ್ರವೇ ಪರಮಾತ್ಮ. ಹೀಗೆ ಶಂಕರರು ತಮ್ಮ ಸ್ತೋತ್ರ ಸಾಹಿತ್ಯಗಳಲ್ಲೂ ವೇದಾಂತ ಮರ್ಮಗಳನ್ನು ಅಡಗಿ ಸಿಟ್ಟಿದ್ದಾರೆ. ಜೀವ ಪರಮಾತ್ಮ ಅಭೇದವನ್ನು ಎಲ್ಲರಿಗೂ ತಿಳಿಯುವಂತೆ ಸಮುದ್ರ ತರಂಗ ಉಪಮೆಯದ ಮೂಲಕ ಹೃದ್ಯವಾಗಿಸಿದ್ದಾರೆ.

ಬಹುಮಂದಿ ಮನುಷ್ಯರ ಬದುಕೆಲ್ಲ ಪ್ರಾಪಂಚಿಕ ಸುಖದಲ್ಲೇ ಕಳೆದುಹೋಗುತ್ತದೆ. ಐಹಿಕಭೋಗ, ಇಂದ್ರಿಯಸುಖ, ಎಲ್ಲವನ್ನೂ ಮರೆಸುವ ಬಾಹ್ಯವ್ಯಾಪಾರದಲ್ಲಿ ಮಗ್ನತೆ, ಆಯುಷ್ಯವನ್ನೂ, ಆರೋಗ್ಯವನ್ನು ಹೆಚ್ಚಿಸುವ ವೈದ್ಯಕೀಯ ಸೌಲಭ್ಯ, ವಿವಿಧವಾಹನ ಸೌಕರ್ಯ, ಹೊಸ ಹೊಸ ಆಹಾರ–ಪಾನೀಯಗಳು, ಮನಸ್ಸನ್ನು ಬಾಹ್ಯೋದ್ವೇಗದಲ್ಲಿ ಲೀನವಾಗಿಸುವ ಮದ್ಯಪಾನೀಯಗಳು–ಇವೇ ಮೊದಲಾದವುಗಳಿಂದ ಮನುಷ್ಯನ ಬದುಕು ಸದಾ ಹೊರಗೇ ಸುತ್ತುತ್ತಿರುತ್ತದೆ. ಉಡುವುದು, ಉಣ್ಣುವುದು, ಮೆರೆಯುವುದು, ಮೈಮರೆಯುವುದು–ಇವಿಷ್ಟರಲ್ಲೇ ಕಳೆದುಹೋಗುತ್ತದೆ. ಇದನ್ನೇ ಅಡಕವಾಗಿ ಹೇಳುವುದಾದರೆ ಆಹಾರ, ನಿದ್ರಾ, ಭಯ, ಮೈಥುನಗಳಲ್ಲೇ ಮುಗಿದುಹೋಗುತ್ತದೆ.

ಇವೆಲ್ಲ ತೀರಿದ ಮೇಲೂ ಅಂತರಂಗದಲ್ಲಿ ಏನೋ ಒಂದು ಕೊರಗು–ಒಂದು ಬಯಕೆ ಉಳಿದುಕೊಂಡಿರುತ್ತದೆ. ಅದನ್ನೇ ಅಧ್ಯಾತ್ಮ ಅಂತ ಕರೆಯುವುದು. ಅದು ಮನುಷ್ಯರಲ್ಲಿ ಕಾಣಿಸಿಕೊಂಡರೆ ಅವನೇ ಭಾಗ್ಯವಂತ; ಪುಣ್ಯವಂತ. ಇದನ್ನೇ ಶಂಕರರು ತಮ್ಮ ಭಜ ಗೋವಿಂದದಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ.

ಬಾಲಸ್ತಾವತ್ ಕ್ರೀಡಾಸಕ್ತಃ ।
ತರುಣಸ್ತಾವತ್ ತರುಣೀಸಕ್ತಃ ॥
ವೃದ್ಧಸ್ತಾವತ್ ಚಿಂತಾಸಕ್ತಃ ।
ಪರಮೇ ಬ್ರಹ್ಮಣಿ ಕೋಪಿ ನ ಸಕ್ತಃ ॥

ಹುಟ್ಟಿದ ಮನುಷ್ಯ ತನ್ನ ಬಾಲ್ಯವನ್ನು ಆಟದಲ್ಲಿ ಕಳೆದು ಬಿಡುತ್ತಾನೆ. ತರುಣನಾದಮೇಲೆ ಅವನ ಕಾಲವು ತರುಣಿಯ ಪ್ರೇಮ ಸಲ್ಲಾಪದಲ್ಲಿ, ಇಂದ್ರಿಯಚಾಪಲ್ಯದಲ್ಲಿ ಕಳೆದು ಹೋಗುತ್ತದೆ. ವೃದ್ಧನಾದಮೇಲೆ ಅವನನ್ನು ಚಿಂತೆ, ಭೀತಿ, ರೋಗ–ರುಜಿನಗಳು ಆವರಿಸಿಕೊಳ್ಳುತ್ತವೆ. ಪರಬ್ರಹ್ಮನನ್ನು ಕುರಿತು ಚಿಂತಿಸುವದಕ್ಕೆ ಸಮಯವೇ ಒದಗಿ ಬರುವುದಿಲ್ಲ. ಬಾಲ್ಯ, ಯೌವನದಲ್ಲಿ ಬಾರದಿದ್ದ ಪರಬ್ರಹ್ಮ ಚಿಂತೆ ಮುಪ್ಪಿನಲ್ಲಿ ಬರುವುದೇ ಇಲ್ಲ. ಅದಕ್ಕಾಗಿ ಬಾಲ್ಯದಲ್ಲೇ ಅದನ್ನು ರೂಢಿಸಿಕೊಳ್ಳಬೇಕು ಎನ್ನುವುದು ಈ ಶ್ಲೋಕದ ಇಂಗಿತ.

ನಿವೃತ್ತಿ ಮರೆತ ಪ್ರವೃತ್ತಿಯ ಗತಿ ಇದು. ಅದಾಗಬಾರದೆಂದು ಶಂಕರರ ಅಭಿಪ್ರಾಯ. ಮನುಷ್ಯ ಸುಂದರವಾಗಿ ಬದುಕಬೇಕು. ಭೋಗವೇ ದೊಡ್ಡದೆಂದು ಭಾವಿಸಿ ಬದುಕಬಾರದು. ಈಶ್ವರ ಸ್ಮರಣೆಯಲ್ಲಿ ಬದುಕಬೇಕು. ಜೊತೆ ಜೊತೆಗೆ ಲೋಕ ಕಾರ್ಯಗಳನ್ನೂ ಮಾಡಬೇಕು. ಸ್ವಾರ್ಥದ ಸೋಂಕಿಲ್ಲದೆ ಮಾಡಬೇಕು. ಅಹಂಕಾರ–ಮಮಕಾರಗಳನ್ನು ದೂರಮಾಡಿ ತನಗೆ ವಿಹಿತವಾದ ಕರ್ತವ್ಯ–ಕರ್ಮಗಳನ್ನು ಮಾಡುತ್ತಾ ನೂರು ವರ್ಷ ಬದುಕಲು ಬಯಸಬೇಕು. ಜೀಜೀವಿ ಷೇಚ್ಛತಗುಂ ಸಮಾಃ ॥ ಎಂಬುದೇ ಶಂಕರಾಚಾರ್ಯರ ಸ್ತೋತ್ರಗಳಲ್ಲಿ ನಿಹಿತವಾದ ವೇದಾಂತದ ಮರ್ಮ.



ಗ.ನಾ.ಭಟ್ಟ
ಸಂಸ್ಕೃತ ವಿದ್ವಾಂಸರು

ಹಾರ್ಮುಜ್ ಮೇಲಿನ ನಿರ್ಬಂಧಗಳಿಗೆ ಭಾರೀ ಬೆಲೆ ತೆರಬೇಕು

● ಜಾಗತಿಕ ತೈಲ ಮಾರುಕಟ್ಟೆಗೆ ಇರಾನ್ ಎಚ್ಚರಿಕೆ ● ಹಡಗು ವಶಕ್ಕೆ ಪಡೆದ ಅಮೆರಿಕ ನಡೆಗೂ ಆಕ್ರೋಶ

ನವದೆಹಲಿ: ಇರಾನ್‌ನ ತೈಲ ರಫ್ತಿನ ಮೇಲಿನ ಆರ್ಥಿಕ ಮತ್ತು ಮಿಲಿಟರಿ ಒತ್ತಡಗಳು ಕೊನೆಗೊಂಡರೆ ಮಾತ್ರ ಜಾಗತಿಕ ಇಂಧನ ಬೆಲೆಗಳು ಸ್ಥಿರಗೊಳ್ಳಬಹುದು ಎಂದು ಇರಾನ್‌ನ ಮೊದಲ ಉಪಾಧ್ಯಕ್ಷ ಮೊಹಮ್ಮದ್ ರೆಜಾ ಅರೆಫ್ ಹೇಳಿದ್ದಾರೆ.

ನಮ್ಮ ತೈಲ ರಫ್ತನ್ನು ನಿರ್ಬಂಧಿಸುವುದಕ್ಕೆ ಪ್ರತಿಯಾಗಿ ಜಾಗತಿಕ ವ್ಯಾಪಾರಕ್ಕೆ ಸುರಕ್ಷಿತ ಮತ್ತು ಸುಭದ್ರ ಮಾರ್ಗವನ್ನು ನಾವು ಖಚಿತಪಡಿಸಿಕೊಳ್ಳುತ್ತೇವೆ ಎಂದು ನಿರೀಕ್ಷಿಸಬೇಡಿ. ಆಯ್ಕೆ ಸ್ಪಷ್ಟವಾಗಿದೆ, 'ಎಲ್ಲರಿಗೂ ಸುರಕ್ಷಿತ ತೈಲ ಮಾರುಕಟ್ಟೆ, ಅಥವಾ ಎಲ್ಲರಿಗೂ ಗಮನಾರ್ಹ ವೆಚ್ಚಗಳ ಅಪಾಯ' ಎಂದು ಅರೆಫ್ ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಬರೆದಿದ್ದಾರೆ. ಈ ಮೂಲಕ ಜಾಗತಿಕ ಬಿಕ್ಕಟ್ಟು ಶಮನ, ಇರಾನ್‌ನ ಸುರಕ್ಷತೆ ಆಧರಿಸಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಇರಾನ್ ಹಡಗು ವಶ: ಅಮೆರಿಕಾ ಸೇನೆ ಇರಾನ್ ಧ್ವಜದ ಸರಕು ಹಡ ಗೊಂದನ್ನು ವಶಪಡಿಸಿಕೊಂಡಿದ್ದು, ಇದರಿಂದ ಉದ್ವಿಗ್ನತೆ ಮತ್ತೆ ಉಲ್ಬಣ ಗೊಂಡಿದೆ. ಇದರಿಂದ ಉಭಯ ರಾಷ್ಟ್ರಗಳ ಶಾಂತಿ ಒಪ್ಪಂದವನ್ನು ಸಂಪೂರ್ಣ ಕುಸಿತಗೊಳ್ಳುವ ಸಾಧ್ಯತೆ ದಟ್ಟವಾಗಿದೆ. ಪರಿಣಾಮ ಜಾಗತಿಕ ಮಟ್ಟದಲ್ಲೂ ಆತಂಕ ಹೆಚ್ಚಾಗಿದೆ.

ಟೌಸ್ಕಾ ಎಂಬ ಇರಾನ್ ಹಡಗು ಓಮನ್ ಸಮುದ್ರದ ಬಳಿ ಅಮೆರಿಕಾ ನೌಕಾಪಡೆಯ ಎಚ್ಚರಿಕೆಗಳನ್ನು ನಿರ್ಲಕ್ಷಿಸಿತು. ನಂತರ ಅಮೆರಿಕಾ ನೌಕಾ ಪಡೆಯ ಡಿಸ್ಟ್ರಾಯರ್ ಹಡಗು ಅದರ ಎಂಜಿನ್ ಭಾಗಕ್ಕೆ ಗುಂಡು ಹಾರಿಸಿ, ಹಡಗನ್ನು ನಿಷ್ಕ್ರಿಯಗೊಳಿಸಿದೆ. ನಂತರ ಅಮೆರಿಕಾ ನೌಕಾ ಪಡೆ ಹಡಗನ್ನು ವಶಕ್ಕೆ ಪಡೆದು ಅದರೊಳಗಿನ ಸರಕುಗಳ ಪರಿಶೀಲನೆ ನಡೆಸಿದೆ. ಈ ಸಂಪೂರ್ಣ ಕಾರ್ಯಾಚರಣೆಯ ವೀಡಿಯೋವನ್ನು ಅಮೆರಿಕಾ ಸೆಂಟ್ರಲ್ ಕಮಾಂಡ್ ಬಿಡುಗಡೆ ಮಾಡಿದ್ದು, ಹಲವು ಗಂಟೆಗಳ ಎಚ್ಚರಿಕೆಗಳ ನಂತರ ಕ್ರಮ ಕೈಗೊಳ್ಳಲಾಗಿದೆ ಎಂದು ಅಮೆರಿಕ ಸ್ಪಷ್ಟಪಡಿಸಿದೆ.

ತಕ್ಕ ಪ್ರತಿಕ್ರಿಯೆ ಕಾದಿದೆ: ಇದಕ್ಕೆ ತೀವ್ರ ಪ್ರತಿಕ್ರಿಯೆ ನೀಡಿರುವ ಇರಾನ್ ಸರ್ಕಾರ, ಅಮೆರಿಕಾ ಕ್ರಮವನ್ನು ನೇರವಾಗಿ 'ಸಮುದ್ರ ದರೋಡೆ' ಎಂದು ಕರೆದಿದೆ. ಅಲ್ಲದೆ ಇರಾನ್ ಸೇನೆಯೂ ಈ ಸಂಬಂಧ ಸ್ಪಷ್ಟ ಎಚ್ಚರಿಕೆ ನೀಡಿದ್ದು, ಅಮೆರಿಕದ ಈ ದಾಳಿಗೆ ನಾವು ಶೀಘ್ರದಲ್ಲೇ ತಕ್ಕ ಪ್ರತಿಕ್ರಿಯೆ ನೀಡುತ್ತೇವೆ ಎಂದು ಘೋಷಿಸಿದೆ. ಟೆಹ್ರಾನ್ ರಾಜಕೀಯ ವಲಯವೂ ಕಠಿಣ ನಿಲುವು ತಳೆದಿದ್ದು, ಅಧ್ಯಕ್ಷ ಮಸೂದ್ ಪೆಜೆಷ್ಕಿಯನ್ ಅಮೆರಿಕದ ಕ್ರಮವನ್ನು ಉದ್ದೇಶಪೂರ್ವಕ ಪ್ರಚೋದನೆ ಎಂದು ಟೀಕಿಸಿದ್ದಾರೆ. ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಪಾಕಿಸ್ತಾನದ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ, ಅಮೆರಿಕದ ಈ ನಡೆ ರಾಜತಾಂತ್ರಿಕ ಪ್ರಯತ್ನಗಳಿಗೆ ದೊಡ್ಡ ಧಕ್ಕೆ ತರುತ್ತಿದೆ ಎಂದು ತಿಳಿಸಿದ್ದಾರೆ.

ಕೆಲವೇ ದಿನಗಳಲ್ಲಿ ಇರಾನ್–ಅಮೆರಿಕಾ ಶಾಂತಿ ಒಪ್ಪಂದದ ಅವಧಿ ಮುಗಿಯಲಿದ್ದು, ಹೊಸ ಮಾತುಕತೆ ಕೂಡ ಅನಿಶ್ಚಿತವಾಗಿದೆ. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ಇರಾನ್ ಹಡಗನ್ನು ವಶಕ್ಕೆ ಪಡೆದಿರುವುದು ರಾಜತಾಂತ್ರಿಕ ಪರಿಹಾರ ಸಾಧ್ಯತೆಗಳನ್ನು ಕುಗ್ಗಿಸಿದೆ. ಹಾರ್ಮುಜ್ ಜಲಸಂಧಿಯಲ್ಲಿ ಪರಿಸ್ಥಿತಿ ಅತ್ಯಂತ ಗಂಭೀರವಾಗಿದ್ದು, ಇರಾನ್ ಕಠಿಣ ನಿಯಂತ್ರಣ ಹೇರಿದೆ. ಅನೇಕ ಹಡಗುಗಳು ಸಾಗಲು ಸಾಧ್ಯವಾಗದೆ ಹಿಂದಿರುಗುತ್ತಿವೆ. ಇದರಿಂದ ಜಾಗತಿಕ ತೈಲ ಪೂರೈಕೆ ಸರಪಳಿಗೆ ದೊಡ್ಡ ಹೊಡೆತ ಬಿದ್ದಂತಾಗಿದೆ.

ಎಂಟನೇ ವಾರಕ್ಕೆ ಕಾಲಿಟ್ಟಿರುವ ಇರಾನ್ ಮೇಲಿನ ಅಮೆರಿಕ–ಇಸ್ರೇಲ್ ಯುದ್ಧವು ದಶಕಗಳಲ್ಲಿಯೇ ಅತ್ಯಂತ ಕೆಟ್ಟ ಜಾಗತಿಕ ಇಂಧನ ಬಿಕ್ಕಟ್ಟನ್ನು ಸೃಷ್ಟಿಸಿದೆ. ಮಧ್ಯಪ್ರಾಚ್ಯದಿಂದ ಹೆಚ್ಚಿನ ತೈಲವನ್ನು ಆಮದು ಮಾಡಿಕೊಳ್ಳುವ ಏಷ್ಯಾ ಮತ್ತು ಯುರೋಪ್ ದೇಶಗಳು ಸ್ಥಗಿತಗೊಂಡ ಸರಬರಾಜು ಮತ್ತು ಉತ್ಪಾದನಾ ಕಡಿತದ ಹೆಚ್ಚಿನ ಪರಿ ಣಾಮವನ್ನು ಅನುಭವಿಸಿವೆ. ವೇಗವಾಗಿ ಏರುತ್ತಿರುವ ಪೆಟ್ರೋಲ್, ಡೀಸೆಲ್ ಮತ್ತು ಜೆಟ್ ಇಂಧನ ಬೆಲೆಗಳು ವಿಶ್ವದಾದ್ಯಂತ ವ್ಯವಹಾರಗಳು ಮತ್ತು ಗ್ರಾಹಕರ ಮೇಲೆ ಪರಿಣಾಮ ಬೀರುತ್ತಿವೆ.

ಯುದ್ಧದಲ್ಲಿ 3,300ಕ್ಕೂ ಹೆಚ್ಚು ಜನ ಸಾವು

ದುಬೈ: ಇಸ್ರೇಲ್ ಮತ್ತು ಅಮೆರಿಕದೊಂದಿಗಿನ ಸಂಘರ್ಷದಲ್ಲಿ ಇರಾನ್‌ನಲ್ಲಿ ಒಟ್ಟು ಕನಿಷ್ಠ 3,375 ಜನರು ಸಾವಿಗೀಡಾಗಿದ್ದಾರೆ ಎಂದು ಟೆಹ್ರಾನ್‌ನ ಕಾನೂನು ವೈದ್ಯಕೀಯ ಸಂಸ್ಥೆಯ ಮುಖ್ಯಸ್ಥ ಅಬ್ಬಾಸ್ ಮಸ್ಜೆದಿ ಹೇಳಿದ್ದಾರೆ.

ನ್ಯಾಯಾಂಗದ ಮಿಜಾನ್ ಸುದ್ದಿಸಂಸ್ಥೆ ಸೇರಿದಂತೆ ಕೆಲ ಮಾಧ್ಯಮಗಳು ಸೋಮವಾರ ಮಸ್ಜೆದಿ ಹೇಳಿಕೆಯನ್ನು ಉಲ್ಲೇಖಿಸಿದ್ದು, ಮೃತರ ಪೈಕಿ ಕೇವಲ ನಾಲ್ವರ ಗುರುತು ಪತ್ತೆಯಾಗಿಲ್ಲ. ಯುದ್ಧದಿಂದಾಗಿ 2,875 ಪುರುಷರು ಮತ್ತು 496 ಮಹಿಳೆಯರು ಸಾವಿಗೀಡಾಗಿದ್ದಾರೆ. ಇವರಲ್ಲಿ 383 ಮಂದಿ 18 ವರ್ಷ ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಾಗಿದ್ದಾರೆ ಎಂದು ಪ್ರಕಟಿಸಲಾಗಿದೆ.

ಏ.25ರಂದು ಮೈಸೂರಲ್ಲಿ ಅವಲೋಕನ ಕೃತಿ ಬಿಡುಗಡೆ

ಮೈಸೂರು,ಏ.20(ಜಿಎ)–ಖ್ಯಾತ ವಕೀಲ ಹೆಚ್.ವಿ.ಎಸ್. ಮೂರ್ತಿ ಅವರ 80ರ ಸಂಭ್ರಮ, ಅಭಿನಂದನೆ ಹಾಗೂ ಅವರ ಹೋರಾಟದ ಅವಲೋಕನ ಕೃತಿ ಬಿಡುಗಡೆ ಸಮಾರಂಭವನ್ನು ಏ.25ರಂದು ಬೆಳಗ್ಗೆ 10.30ಕ್ಕೆ ವಿಶ್ವೇಶ್ವರನಗರ 2ನೇ ಹಂತದ ಕೆ.ವಿ.ಆರ್ ವೆಡ್ಡಿಂಗ್ ಬೆಲ್ಸ್ ಸಭಾಂಗಣದಲ್ಲಿ ನಡೆಯಲಿದೆ ಎಂದು ವಕೀಲ ಎಂ.ಎಸ್.ರವೀಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಎ.ಆರ್.ಕೃಷ್ಣಮೂರ್ತಿ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸುವರು. ಈ ವೇಳೆ ಹೆಚ್.ವಿ.ಎಸ್. ಮೂರ್ತಿ ಅವರನ್ನು ಅಭಿನಂದಿಸಲಾಗುವುದು ಎಂದರು.

ಮುಖ್ಯ ಅತಿಥಿಗಳಾಗಿ ಶಾಸಕ ಗಣೇಶ್ ಪ್ರಸಾದ್, ರಾಜ್ಯ ವಕೀಲ ಪರಿಷತ್ ಸದಸ್ಯ ಚಂದ್ರಮೌಳಿ, ಹಿರಿಯ ಪತ್ರ ಕರ್ತ ಅಂಶಿ ಪ್ರಸನ್ನಕುಮಾರ್, ಶಾರದಾವಿಲಾಸ ವಿದ್ಯಾಸಂಸ್ಥೆ ಮಾಜಿ ಅಧ್ಯಕ್ಷ ಎಸ್. ನಾರಾಯಣ್ ರಾವ್, ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಆಗಮಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶಿವಶಂಕರ್, ಸುನೀಲ್, ಹೆಚ್.ವಿ.ರವಿಕಾಂತ್, ಹೆಚ್.ಎಸ್. ವೀಣಾಮೂರ್ತಿ ಉಪಸ್ಥಿತರಿದ್ದರು.

ಮುಂಬೈ ಇಂಡಿಯನ್ಸ್‌ಗೆ ಗೆಲುವಿನ 'ತಿಲಕ'



ಅಹಮದಾಬಾದ್, ಏ.20– ತಿಲಕ್ ವರ್ಮಾ ಅವರ ಭರ್ಜರಿ ಶತಕದ ನೆರವಿನಿಂದ 5 ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಗುಜರಾತ್ ಟೈಟಾನ್ಸ್ ವಿರುದ್ಧ 99 ರನ್‌ಗಳ ಭರ್ಜರಿ ಜಯ ದಾಖಲಿಸಿದೆ. ಆ ಮೂಲಕ ಟೂರ್ನಿಯಲ್ಲಿ 2ನೇ ಗೆಲುವು ದಾಖಲಿಸಿ ಅಂಕಪಟ್ಟಿಯಲ್ಲಿ 7ನೇ ಸ್ಥಾನ ಅಲಂಕರಿಸಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ ತಿಲಕ್ ವರ್ಮಾ ಅವರ ಅಮೋಘ ಶತಕದ ನೆರವಿನಿಂದ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. 200 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ ಟೈಟಾನ್ಸ್ 15.5 ಓವರ್‌ಗಳಲ್ಲಿ 100 ರನ್‌ಗೆ ಆಲೌಟಾಗುವ ಮೂಲಕ ಹೀನಾಯ ಸೋಲು ಅನುಭವಿಸಿತು.

ಗುರಿ ಬೆನ್ನತ್ತಿದ ಗುಜರಾತ್ ಇನ್ನಿಂಗ್ಸ್‌ನ ಮೊದಲ ಎಸೆತದಲ್ಲೇ ಸಾಯಿ ಸುದರ್ಶನ್ ಅವರ ವಿಕೆಟ್ ಕಳೆದುಕೊಂಡಿತು. ನಂತರ ಬಂದ ಬ್ಯಾಟ್ಸ್‌ಮನ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ಉಳಿಯದೇ ಪೆವಿಲಿಯನ್ ಪರೇಡ್ ನಡೆಸಿದರು. ತಂಡದ ಪರ ನಾಯಕ ಶುಭ್‌ಮನ್ ಗಿಲ್ 14, ವಾಷಿಂಗ್‌ಟನ್ ಸುಂದರ್ 26, ಶಾರೂಖ್ ಖಾನ್ 17, ಕಗಿಸೋ ರಬಾಡ 12 ರನ್ ಗಳಿಸಿದ್ದು ಬಿಟ್ಟರೇ, ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ಮುಂಬೈ ಪರ ಅಶ್ವನಿ ಕುಮಾರ್ 4 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು. ಉಳಿದಂತೆ ಎ.ಎಂ.ಗಜನ್ಫರ್, ಮಿಚೆಲ್ ಸ್ಯಾಂಟ್ನರ್ ತಲಾ 2, ಹಾರ್ದಿಕ್ ಪಾಂಡ್ಯ, ಬೂಮ್ರಾ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ತಂಡದ ಮೊತ್ತ 44 ರನ್ ಆಗುವಷ್ಟರಲ್ಲೇ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಜೊತೆಯಾದ ನಮನ್ ಧೀರ್ ಹಾಗೂ ತಿಲಕ್ ವರ್ಮಾ 52 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 45 ರನ್ ನಮನ್ ಧೀರ್ ಔಟಾದರೇ, ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ಮೂಲಕ ಅಬ್ಬರಿಸಿದ ತಿಲಕ್ ವರ್ಮಾ 45 ಎಸೆತಗಳಲ್ಲಿ 7 ಸಿಕ್ಸರ್, 4 ಬೌಂಡರಿ ಒಳಗೊಂಡ ಅಜೇಯ 101 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣವಾದರು. ಉಳಿದಂತೆ ನಾಯಕ ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್ ತಲಾ 15, ಕ್ವಿಂಟನ್ ಡಿಕಾಕ್ 13 ರನ್ ಗಳಿಸಿದರು. ಗುಜರಾತ್ ಪರ ಕಗಿಸೋ ರಬಾಡ 3, ಪ್ರಸಿದ್ಧ ಕೃಷ್ಣ, ಮೊಹಮ್ಮದ್ ಸಿರಾಜ್ ಒಂದೊಂದು ವಿಕೆಟ್ ಉರುಳಿಸಿದರು. ತಿಲಕ್ ವರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,

ಸಾಮಾಜಿಕ ಅರಣ್ಯ ವಿಭಾಗ,
ಸುಲ್ತಾನ್ ಷರೀಫ್ ವೃತ್ತ, ಸತ್ತಿ ರಸ್ತೆ, ಚಾಮರಾಜನಗರ–571313
ಕಛೇರಿ ದೂರವಾಣಿ ಸಂಖ್ಯೆ: 08226–224831
ಇಮೇಲ್: acfsfchamarajanagar@gmail.com

ಕಡತ ಸಂಖ್ಯೆ: ಸಅಸಂ/ಸಾಅವಿಚಾ/ಅ.ಕಾ/ಟೆಂಡರ್/ಸಿಆರ್–03/2026–27

ದಿನಾಂಕ: 18.04.2026.

ಇ–ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರೆಂಟ್ ಪೋರ್ಟಲ್ ಮುಖಾಂತರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಅರಣ್ಯೀಕರಣ ಕಾಮಗಾರಿಗಳು ಋತುಮಾನದ ಕಾಮಗಾರಿಗಳಾಗಿರುವುದರಿಂದ ಚಾಮರಾಜನಗರ ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯ ಚಾಮರಾಜನಗರ / ಗುಂಡ್ಲುಪೇಟೆ / ಕೊಳ್ಳೇಗಾಲ ಮತ್ತು ಯಳಂದೂರು ಸಾಮಾಜಿಕ ಅರಣ್ಯ ವಲಯಗಳಲ್ಲಿ 2026–27 ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ವಿವಿಧ ಮಾದರಿಯ ಅರಣ್ಯೀಕರಣ ಕಾಮಗಾರಿಗಳಾದ ನೆಡುತೋಪುಗಳನ್ನು ಬೆಳೆಸುವುದು, ಪೋಷಣೆ, ಸಸಿಗಳನ್ನು ಬೆಳೆಸುವುದು ಮತ್ತು ಪೋಷಣೆ, ಹಾಗೂ ಮುಂಗಡ ಕಾಮಗಾರಿ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಂಬಂಧ ನೊಂದಾಯಿತ ಗುತ್ತಿಗೆದಾರರಿಂದ ನಿಬಂಧನೆಗಳನ್ನೊಳಗೊಂಡಂತೆ ಇ–ಟೆಂಡರ್ ಆಹ್ವಾನಿಸಲಾಗಿದೆ.

ಇ–ಟೆಂಡರ್ ಸ್ವೀಕರಿಸಲು ಮೊದಲನೇ ದಿನಾಂಕ: 27–04–2026 ರ ಸಂಜೆ 4.00 ಘಂಟೆಯವರೆಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಇ–ಟೆಂಡರನ್ನು ದಿನಾಂಕ: 29–04–2026 ರಂದು ಸಂಜೆ 4.10 ಘಂಟೆಗೆ ತೆರೆಯಲಾಗುವುದು. ಮೇಲ್ಕಂಡ ದಿನದಂದು ಸದರಿ ಇ–ಟೆಂಡರ್‌ನಲ್ಲಿ ಯಾರೂ ಭಾಗವಹಿಸದಿದ್ದಲ್ಲಿ ಎರಡನೇ ಬಾರಿಗೆ ಇ–ಟೆಂಡರ್ ಸ್ವೀಕರಿಸಲು ದಿನಾಂಕ: 06–05–2026ರ ಸಂಜೆ 4.00 ಘಂಟೆಯವರೆಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಟೆಂಡರನ್ನು ದಿನಾಂಕ: 07–05–2026ರಂದು ಅಪರಾಹ್ನ 4.10 ಘಂಟೆಗೆ ತೆರೆಯಲಾಗುವುದು. ಮರು ಟೆಂಡರ್ ಸಂಬಂಧ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಇತರೆ ಹೆಚ್ಚಿನ ಮಾಹಿತಿಗಳನ್ನು http://kppp..karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಈ ಕಛೇರಿಯಿಂದ ಕರ್ತವ್ಯ ದಿನಗಳಂದು ಕೆಲಸ ಅವಧಿಯಲ್ಲಿ ಮಾಹಿತಿ ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ಚಾಮರಾಜನಗರ.

ಸಂ:ವಾಸಾಸಂಇ:ಚಾನಗರ:55:2026–27

ಮೈಸೂರು ಮಿತ್ರ 47 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

'ನಮ್ಮ ಬಸವಣ್ಣ ಸಾಂಸ್ಕೃತಿಕ ನಾಯಕ' ಶೀರ್ಷಿಕೆಯಡಿ ನಡೆದ ಬಸವ ಜಯಂತಿ ಸಮಾರೋಪ

ಬಸವಣ್ಣನವರು ಲಿಂಗಾಯತರಿಗೆ ಮಾತ್ರವಲ್ಲ, ಇಡೀ ಮಾನವ ಕುಲದ ಆಸ್ತಿ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಮಹದೇವ ಬಿದರಿ ಅಭಿಮತ

ಮೈಸೂರು, ಏ.20(ಪಿಎಂ)– ಬಸವಣ್ಣನವರು ಲಿಂಗಾಯತರಿಗೆ ಮಾತ್ರ ಸಂಬಂಧಿಸಿದವರು ಎಂದುಕೊಂಡರೆ ಅದು ಮೂರ್ಖತನ. ಅವರು ಇಡೀ ಮಾನವ ಕುಲಕೋಟಿಗೆ ಸೇರಿದವರು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ಅ.ಭಾ.ವೀ.ಲಿಂ. ಮಹಾಸಭಾ) ರಾಜ್ಯಾಧ್ಯಕ್ಷ ಶಂಕರ ಮಹದೇವ ಬಿದರಿ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ಬಸವ ಬಳಗಗಳ ಒಕ್ಕೂಟ ಮೈಸೂರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು, ಜಿಲ್ಲಾಡಳಿತದ ಸಹಯೋಗದಲ್ಲಿ ಎರಡು ದಿನಗಳ ಕಾಲ 'ನಮ್ಮ ಬಸವಣ್ಣ ಸಾಂಸ್ಕೃತಿಕ ನಾಯಕ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಬಸವ ಜಯಂತಿ 2026ರ ಸಮಾರೋಪ ಹಾಗೂ ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಸೋಮವಾರ ಸಂಜೆ ಅವರು ಮಾತನಾಡಿದರು.

ಬಸವ ತತ್ವ ಒಂದು ಜೀವನ ಪದ್ಧತಿ. ಬಸವಾದಿ ಶರಣರ ತತ್ವಗಳು ಕೇವಲ ಕರ್ನಾಟಕದ ಆಸ್ತಿಯಲ್ಲ. ಭಾರತದ ಜೊತೆಗೆ ಇಡೀ ಮಾನವ ಕುಲಕೋಟಿಯ ಆಸ್ತಿ. ಕೇವಲ ಲಿಂಗಾಯತರಿಗೆ ಬಸವಣ್ಣ ಸಂಬಂಧಿಸಿದವರು ಎಂದು ತಿಳಿದು ಕೊಂಡರೆ ಅದಕ್ಕಿಂತ ಮೂರ್ಖತನ ಮತ್ತೊಂದಿಲ್ಲ. ಬಸವಣ್ಣನವರು ತತ್ವ ಪಾಲಿಸುವ ಹಕ್ಕು–ಕರ್ತವ್ಯ 800 ಕೋಟಿ ಜನತೆಗೂ ಇದೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇಂತಹ ವಿಶಾಲ ತಳಹದಿಯ ಮೇಲಿನ ಜೀವನ ಪದ್ಧತಿಯನ್ನು ಬಸವಣ್ಣನವರು ಕೊಟ್ಟರು. ಆದರೆ ನಾವು ಅದನ್ನು ಸರಿಯಾದ ರೀತಿ ಪ್ರಸಾರ ಮಾಡಿಲ್ಲ. ಕ್ರಿಶ್ಚಿಯನ್ ಪಾದ್ರಿಗಳ ರೀತಿಯಲ್ಲಿ ನಾವು ಪ್ರಸಾರ ಮಾಡಬೇಕಿದೆ ಎಂದು ತಿಳಿಸಿದರು.

ಈ ರೀತಿ ಮಾಡಬೇಕಿರುವುದು ನಮ್ಮ ಸಲುವಾಗಿಯಲ್ಲ. ಬಸವಣ್ಣನವರ ತತ್ವ ಪಾಲಿಸುವವರು ಭಾರತದಲ್ಲಿ ಹೆಚ್ಚಾದರೆ ದೇಶದಲ್ಲಿ ಶಾಂತಿ ನೆಲೆಸಲಿದೆ. ಸಮೃದ್ಧಿಯಿಂದ ಅಭಿವೃದ್ಧಿಯಾಗಿ ಒಂದು ಆದರ್ಶ ರಾಷ್ಟ್ರವಾಗಲಿದೆ. ಬಸವ ತತ್ವ ಪಾಲಿಸುವವರಲ್ಲಿ ದಲಿತರು, ಹಿಂದುಳಿದವರು, ಮಾದರು, ಸಾದರು, ಡೋರರು, ಹೂಗಾರರು, ಕಂಬಾರರು, ಕುಂಬಾರರು, ಬಣಜಿಗರು ಹಾಗೂ ಪಂಚಮಸಾಲಿಗಳಿದ್ದಾರೆ. ಈ ನಾವೆಲ್ಲರೂ ನಮ್ಮ ವೃತ್ತಿಗಳನ್ನು ಮುಂದುವರೆಸಿಕೊಂಡು ಹೋಗೋಣ. ಆದರೆ ನಾವೆಲ್ಲರೂ ಒಂದೇ ಎನ್ನುವ ಭಾವನೆ ಸದಾ ಕಾಲ ಇರಬೇಕು. ಆಗ ಮಾತ್ರ ನಮ್ಮ ಉದ್ಧಾರ ಸಾಧ್ಯ ಎಂದು ಪ್ರತಿಪಾದಿಸಿದರು.

ಸರ್ಕಾರದಲ್ಲಿ ಹೆಚ್ಚು ಅವಲಂಬನೆ ಸಲ್ಲ: ತಮ್ಮ ಧರ್ಮಕಾರ್ಯಕ್ಕಾಗಿ ಸಿಖ್ಖರು 10 ಪರ್ಸೆಂಟ್ ಕೊಡುತ್ತಾರೆ. ಅದೇ ರೀತಿ ಜೈನರು 10 ಪರ್ಸೆಂಟ್ ಕೊಡುತ್ತಾರೆ. ರಾಷ್ಟ್ರದಲ್ಲಿ ಮುಸಲ್ಮಾನರಲ್ಲಿ ಹೆಚ್ಚಿನ ಸಂಖ್ಯೆಯ ಬಡವರಿದ್ದರೂ ಪ್ರತಿ ವರ್ಷ 2 ಪರ್ಸೆಂಟ್ ಅನ್ನು ತಪ್ಪದೇ ಪ್ರತಿಯೊಬ್ಬರು ಕೊಡುತ್ತಾರೆ. ಇದನ್ನು ನಮ್ಮ ಸಮುದಾಯದವರು ಅರ್ಥ ಮಾಡಿಕೊಳ್ಳಬೇಕು. ಎಲ್ಲವನ್ನು ನಮ್ಮ ಮಹಾಸಭೆಗೆ ಕೊಡಿ ಎಂದು ಕೇಳುವುದಿಲ್ಲ. ಪ್ರತಿವರ್ಷ ನಿಮ್ಮ ನಿವ್ವಳ ಆದಾಯದಲ್ಲಿ 2 ಪರ್ಸೆಂಟ್ ತೆಗೆದಿಟ್ಟು ಧರ್ಮಕಾರ್ಯ, ಸಮಾಜ ಕಾರ್ಯಕ್ಕೆ ಕೊಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಪ್ರತಿಯೊಂದಕ್ಕೂ ಸರ್ಕಾರದ ಮೇಲೆ ಅವಲಂಬನೆಯಾಗುವುದು ಕಷ್ಟ ಯಾವುದೇ ಪಕ್ಷ, ಸರ್ಕಾರ ಇರಬಹುದು. ಈ ವ್ಯವಸ್ಥೆಗಳಿಂದ ಎಲ್ಲದಕ್ಕೂ ಸ್ಪಂದನೆ ಸಾಧ್ಯವಿಲ್ಲ. ಹಾಗಾಗಿ ನಮ್ಮ ಸಮಾಜವು ಪ್ರತಿಯೊಂದಕ್ಕೂ ಸರ್ಕಾರದ ಮೇಲೆ ಅವಲಂಬನೆ ಆಗದೇ ಸ್ವಂತ ಶಕ್ತಿ ಮೇಲೆ ಬೆಳೆಯಲು ಪ್ರಯತ್ನ ಮಾಡಬೇಕು. ನಮ್ಮ ಉದ್ಧಾರಕ್ಕೆ ಸತ್ಯಶುದ್ಧವಾದ ಕಾಯಕ ಒಂದೇ ಮಾರ್ಗ. ಕಾಯಕದಿಂದ ನಾವು ಮುಂದೆ ಬರಬೇಕೇ ಹೊರತು ಯಾವುದೇ ಶಾರ್ಟ್ ಕಟ್ ವರ್ಕ್‌ಔಟ್ ಆಗುವುದಿಲ್ಲ ಎಂದರು.

ಭಾರತದಲ್ಲಿ ನಮ್ಮ ಜನಸಂಖ್ಯೆ ಸಿಖ್ ಜನಾಂಗಕ್ಕಿಂತಲೂ 2 ಪಟ್ಟು ಹೆಚ್ಚಿದೆ. ಆದರೆ ಸಾಮಾಜಿಕ ಕಳಕಳಿ, ಆರ್ಥಿಕ ಹಾಗೂ ರಾಜಕೀಯ ಶಕ್ತಿ ವಿಚಾರದಲ್ಲಿ ಅವರಲ್ಲಿ ಒಂದು ನೂರು ರೂಪಾಯಿ ಇದ್ದರೆ, ನಮ್ಮಲ್ಲಿ ಕೇವಲ ಒಂದು ರೂಪಾಯಿ ಇದೆ. ಇದಕ್ಕೆ ಕಾರಣ ಏನೆಂದು ಆತ್ಮಶೋಧನೆ ಮಾಡಿಕೊಳ್ಳಬೇಕು. ಲಿಂಗಾಯತರು ಅಥವಾ ವೀರಶೈವರು ಎಂದರೆ ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಇದಕ್ಕೆ ಕಾರಣ ನಮ್ಮಲ್ಲಿರುವ ಒಡಕು ಎಂದರು. ಮೈಸೂರು ಮಾದರಿಯಲ್ಲಿ ಬಸವ ಜಯಂತಿಯನ್ನು ಒಗ್ಗಟ್ಟಿನಿಂದ ಆಚರಣೆ ಮಾಡುವಂತೆ ರಾಜ್ಯ ವಿವಿಧೆಡೆ ಪ್ರವಾಸಕ್ಕೆ ಹೋದಾಗ ಎಲ್ಲರಲ್ಲಿ ಮನವಿ ಮಾಡುವುದಾಗಿ ತಿಳಿಸಿದರು.

ಇದೇ ವೇಳೆ ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಬೆಂಗಳೂರು ಸುಮಂಗಲಿ ಸೇವಾಶ್ರಮದ ಪದ್ಮಶ್ರೀ ಪುರಸ್ಕೃತ ಡಾ.ಎಸ್.ಜಿ.ಸುಶೀಲಮ್ಮ, ಮೈಸೂರು ಎಡಿಸಿ ಡಾ.ಪಿ.ಶಿವರಾಜು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ರೈತಪರ ಹೋರಾಟಗಾರ ಕುರುಬೂರು ಶಾಂತಕುಮಾರ್, ಶಿಕ್ಷಣ ತಜ್ಞ ಎನ್.ಸಚ್ಚಿದಾನಂದಮೂರ್ತಿ ಹಾಗೂ ಪ್ರಗತಿಪರ ಕೃಷಿಕ ಚಿನ್ನಸ್ವಾಮಿ ವಡ್ಡಗೆರೆ ಅವರನ್ನು ಅಭಿನಂದಿಸಲಾಯಿತು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸಿದ್ಧಗಂಗಾ ಮಠದ ಉತ್ತರಾಧಿಕಾರಿ ಶ್ರೀ ಶಿವಸಿದ್ಧೇಶ್ವರ ಸ್ವಾಮೀಜಿ, ದೇವನೂರು ಮಹಾಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ರಾಜ್ಯಾಧ್ಯಕ್ಷ ಡಾ.ಸಿ.ಸೋಮಶೇಖರ್, ಮಾಜಿ ಎಂಎಲ್‌ಸಿಗಳಾದ ತೋಂಟದಾರ್ಯ, ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಮಾಜಿ ಶಾಸಕ ಸಿ.ಎನ್.ನಿರಂಜನ್‌ಕುಮಾರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು, ಎಂ.ಚಂದ್ರಶೇಖರ್, ಕೆ.ವಿ.ಮಲ್ಲೇಶ್, ಆಯರಹಳ್ಳಿ ವಿ.ವಿರೂಪಾಕ್ಷ ಮತ್ತಿತರರು ಹಾಜರಿದ್ದರು.



ಬಸವ ಜಯಂತಿ ಸಮಾರೋಪ ಸಮಾರಂಭದಲ್ಲಿ ವಿವಿಧ ಕ್ಷೇತ್ರದ ಗಣ್ಯರು, ಸಾಧಕರನ್ನು ಅಭಿನಂದಿಸಲಾಯಿತು.

ವೀರಶೈವ-ಲಿಂಗಾಯತ ಎರಡೂ ಒಂದೇ ಎಂದು ಶ್ರೀ ಶಿವಕುಮಾರ ಶ್ರೀಗಳೇ ಹೇಳಿದ್ದಾರೆ

ಮೈಸೂರು: ಕೆಲವರು ವೀರಶೈವರು ಮತ್ತು ಲಿಂಗಾಯತರು ಬೇರೆ ಬೇರೆ ಎಂಬ ತತ್ವ ಮುಂದಿಡುತ್ತಿದ್ದಾರೆ. ಆದರೆ ಈ ಎರಡೂ ಒಂದೇ ಎಂದು ಶ್ರೀ ಶಿವಕುಮಾರ ಸ್ವಾಮೀಜಿಯವರೇ ಸ್ಪಷ್ಟವಾಗಿ ಹೇಳಿದ್ದು, ಇದಕ್ಕಿಂತ ನಮಗೆ ಬೇರೆ ಏನೂ ಬೇಕಿಲ್ಲವೆಂದು ಶಂಕರ ಮಹದೇವ ಬಿದರಿ ಹೇಳಿದರು.

ನಮ್ಮ ಸಮಾಜ ಉದ್ಧರಿಸಲು ಯಾವುದಾದರೂ ಶಕ್ತಿ ಉದಯಿಸಿದ್ದರೆ, ಅದು ಶ್ರೀ ಶಿವಕುಮಾರ ಸ್ವಾಮೀಜಿಯವರು. ಅವರು ಸ್ಪಷ್ಟವಾಗಿ ವೀರಶೈವ, ಲಿಂಗಾಯತ ಎರಡೂ ಒಂದೇ ಎಂದು ಹೇಳಿದ್ದಾರೆ. ಅವರ (ವೀರಶೈವ) ತತ್ವಗಳು ಸಂಸ್ಕೃತದಲ್ಲಿದ್ದರೆ, ನಮ್ಮ ವಚನಗಳು ಕನ್ನಡದಲ್ಲಿವೆ. ಅವರು ಪರಮಾತ್ಮನಿಂದಲೇ ನಮಗೆ ಧರ್ಮ ಬೋಧನೆಯಾಯಿತು ಎನ್ನುತ್ತಾರೆ. ನಾವು ಬಸವಾದಿ ಶರಣರಿಂದ ಧರ್ಮ ಬೋಧನೆಯಾಯಿತು ಎನ್ನಬಹುದು. ಅವರು ಬಸವಣ್ಣನವರು ಧರ್ಮ ಸ್ಥಾಪಕರಲ್ಲ. ಬದಲಿಗೆ ಧರ್ಮ ಸುಧಾರಕರು ಎಂದು ಹೇಳಬಹುದು. ಆದರೆ ಎರಡರಲ್ಲಿಯೂ ಅಷ್ಟವರ್ಣ, ಇಷ್ಟಲಿಂಗ ಇತ್ಯಾದಿಯಲ್ಲಿ ಸಾಮ್ಯತೆ ಇದ್ದು, ಐಕ್ಯವಾದರೆ ಸಮಾಧಿ ಎರಡರಲ್ಲೂ ಇದೆ. ಆದ್ದರಿಂದ ಎಲ್ಲರೂ ಒಂದೇ ಎಂದರು. ಸಂಕುಚಿತ ಭಾವನೆ ಬಿಡಬೇಕು. 'ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ...' ಎಂದು ಬಸವಣ್ಣನವರು ಹೇಳುವಂತೆ ನಾವು ನಮ್ಮವರಾಗಿರುವವರನ್ನೇ ಬೇರೆ ಎಂದು ಹೇಳಿದರೆ ನಾವು ಯಾವ ರೀತಿಯ ಲಿಂಗಾಯತರು ಎಂದು ಆಲೋಚನೆ ಮಾಡಬೇಕು. ಆದ್ದರಿಂದ ಎಲ್ಲರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವಂತಹ ಮನೋಭಾವ ನಮ್ಮಲ್ಲಿ ಬರಬೇಕು. ಸಮಾಜದ ಎಲ್ಲಾ ವರ್ಗ, ಎಲ್ಲಾ ವೃತ್ತಿ ಮಾಡುವವರನ್ನು ನಾವು ಜೊತೆಗೆ ಕರೆದುಕೊಂಡು ಹೋಗಬೇಕು ಎಂದರು.

ಹುಟ್ಟುಹಬ್ಬದ ಶುಭಾಶಯ...



ಸಮಾಜ ಕಲ್ಯಾಣ ಖಾತೆ ಸಚಿವರೂ ಆದ ಮೈಸೂರು ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರಿಗೆ ಸಿಹಿ ತಿನ್ನಿಸಿ, ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ವಕೀಲ ತಿಮ್ಮಯ್ಯ, ಎ.ಆರ್.ಕಾಂತರಾಜ್, ಡಿಸಿಸಿ ಕಿಸಾನ್ ಘಟಕದ ಅಧ್ಯಕ್ಷ ಜಿ. ಮಹದೇವ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ನಗರಾಧ್ಯಕ್ಷ ಜೆ.ಪ್ರಭು ಶುಭಾಶಯ ಕೋರಿದರು.

ಬೆಂಗಳೂರಿನ 50 ಮಹಿಳಾ ಅಧಿಕಾರಿಗಳಿಗೆ ಕಿರುಕುಳ; ಉದ್ಯಮಿ ಬಂಧನ

ಬೆಂಗಳೂರು: ಕಸ್ಟಮ್ಸ್ ಮಹಿಳಾ ಅಧಿಕಾರಿಗೆ ಬ್ಲ್ಯಾಕ್‌ಮೇಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಕೃಪಾಲನಿ ಬಂಧಿಸಿದ್ದು, ಪ್ರೀತಿ, ಮದುವೆ ಹೆಸರಲ್ಲಿ ದೈಹಿಕ ಸಂಪರ್ಕ ಬೆಳೆಸಿ 50 ಮಂದಿಗೆ ವಂಚಿಸಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಇಂದಿರಾನಗರದ ನಿವಾಸಿಯಾಗಿರುವ ಆರೋಪಿ ಎಂ. ಕೃಪಲಾನಿ ಎಲೆಕ್ಟ್ರಾನಿಕ್ಸ್ ವ್ಯವಹಾರ ನಡೆಸುತ್ತಿದ್ದು, ಸರಕುಗಳನ್ನು ಆಮದು ಮಾಡಿಕೊಳ್ಳುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾನೆ. ಕಸ್ಟಮ್ಸ್ ಮಹಿಳಾ ಅಧಿಕಾರಿಗೆ ಬ್ಲ್ಯಾಕ್‌ಮೇಲ್ ಕೇಸಲ್ಲಿ ಪುಲಕೇಶಿ ನಗರ ಪೊಲೀಸರು ಕೃಪಾಲನಿಯನ್ನು ಬಂಧಿಸಿದ್ದಾರೆ.

ಕೃಪಲಾನಿ ಆರಂಭದಲ್ಲಿ ವಿಚಾರಣೆಯ ಸಮಯದಲ್ಲಿ ಸಹಕರಿಸಲಿಲ್ಲ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದಾಗ್ಯೂ, ಅವರ ಫೋನ್ ಮತ್ತು ಇತರ ಡೇಟಾ ಸೇರಿದಂತೆ ತಾಂತ್ರಿಕ ಪುರಾವೆಗಳಿಂದ ಅನೇಕ ಮಹಿಳೆಯರು ಈತನ ಪಾಶಕ್ಕೆ ಬಲಿಯಾಗಿದ್ದರು ಎಂಬುದು ತಿಳಿದುಬಂದಿದೆ.

ಕೆಲಸದ ನೆಪದಲ್ಲಿ ಅವರು ಮಹಿಳಾ ಅಧಿಕಾರಿಗಳನ್ನು ಸಂಪರ್ಕಿಸುತ್ತಿದ್ದ, ಅವರ ವಿಶ್ವಾಸ ಗಳಿಸಿದ ನಂತರ ಅವರನ್ನು ಭೋಜನಕ್ಕೆ ಆಹ್ವಾನಿಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಇದು ನಂತರ ನಿಕಟ ಸಂಬಂಧಗಳಾಗಿ ಬೆಳೆದು, ಈ ಸಮಯದಲ್ಲಿ ಆತ ದೈಹಿಕ ಸಂಬಂಧ ಹೊಂದಲು ಮದುವೆಯ ಭರವಸೆ ನೀಡುತ್ತಿದ್ದ ಎಂದು ಆರೋಪಿಸಲಾಗಿದೆ.

ತನ್ನ ಬೇಡಿಕೆ ಈಡೇರಿಸದಿದ್ದರೆ ಅವರ ಖಾಸಗಿ ಫೋಟೋಗಳು ಅಥವಾ ವೀಡಿಯೊಗಳನ್ನು ಬಿಡುಗಡೆ ಮಾಡುವುದಾಗಿ ಬೆದರಿಕೆ ಹಾಕುವ ಮೂಲಕ ಅವರನ್ನು ಬಳಸಿಕೊಳ್ಳುತ್ತಿದ್ದ. ಈತನ ಟಾರ್ಗೆಟ್ ಜಿಎಸ್ಟಿ ಮತ್ತು ಕಸ್ಟಮ್ಸ್ ಅಧಿಕಾರಿಗಳಾಗಿದ್ದರು. ಸುಮಾರು 50 ಮಹಿಳಾ ಅಧಿಕಾರಿಗಳಿಗೆ ಕಿರುಕುಳ ನೀಡಿದ್ದ ಎಂದು ತಿಳಿದು ಬಂದಿದೆ. ಕೃಪಲಾನಿ ವೈದ್ಯಕೀಯ ತಪಾಸಣೆಯ ಸಮಯದಲ್ಲಿ ಎರಡು ಬಾರಿ ಪೊಲೀಸ್ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿದ್ದ. ಆತನನ್ನು ವೈದ್ಯಕೀಯ ಪರೀಕ್ಷೆಗಾಗಿ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಕರೆತಂದ ವೇಳೆ ಗಲಾಟೆ ಮಾಡಿದ್ದ. ಪೊಲೀಸ್ ಅಧಿಕಾರಿಯಿಂದ ಮೊಬೈಲ್ ಫೋನ್ ಕಸಿದುಕೊಂಡು ಅವರ ಮೇಲೆ ಹಲ್ಲೆ ನಡೆಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಘಟನೆಗಳ ನಂತರ, ಕಮರ್ಷಿಯಲ್ ಸ್ಟ್ರೀಟ್ ಮತ್ತು ವಿವಿ ಪುರಂ ಪೊಲೀಸ್ ಠಾಣೆಗಳಲ್ಲಿ ಸರ್ಕಾರಿ ಅಧಿಕಾರಿಯ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ್ದಕ್ಕಾಗಿ ಮತ್ತು ಹಲ್ಲೆಗಾಗಿ ಆತನ ವಿರುದ್ಧ ಎರಡು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ.

ಬಸವ ಜಯಂತಿ



ಚಿತ್ರನಟ ಜೈ ಪ್ರಕಾಶ್ (ಜೆಪಿ) ಅವರ ನೇತೃತ್ವದಲ್ಲಿ ಬಸವ ಜಯಂತಿಯನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ ಕಟ್ಟಡ ನಿರ್ಮಾಣ ಸಮಿತಿ ನಿರ್ದೇಶಕ ಕಾಮನಕೆರೆಹುಂಡಿ ಹೆಚ್.ಗಿರೀಶ್‌ಗೌಡ, ಲಿಂಗಯ್ಯ ಚಂದು, ಶಿವ ದರ್ಶನ್, ಹೇಮಂತ್, ರಾಘು, ಸುಂದರ ಮತ್ತಿತರರಿದ್ದರು.

ಮಹಿಳಾ ಆಟೋ ಚಾಲಕಿಯರಿಗೆ ಉಚಿತ ದಿನಸಿ ಕಿಟ್ ವಿತರಣೆ

ಮೈಸೂರು, ಏ.20– ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆ, ಆಟೋ ಗ್ಯಾಸ್ ಸಿಗದೆ ಸಂಕಷ್ಟದಲ್ಲಿರುವ ಮಹಿಳಾ ಆಟೋ ಚಾಲಕಿಯರಿಗೆ ಉಚಿತ ಆಹಾರ ಕಿಟ್ ನೀಡಲು ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ವೈಭವಿ ಸಿಲ್ಕ್ ಅಂಡ್ ಸ್ಯಾರಿಸ್ ಸಂಸ್ಥೆಯ ಮಾಲೀಕರಾದ ಶ್ರೀಮತಿ ಭಾರತಿ ಹಾಗೂ ಅವರ ಪುತ್ರಿ ಅಂಜಲಿ ಅವರು ಮುಂದಾಗಿದ್ದಾರೆ. ಆಹಾರ ಕಿಟ್ ಪಡೆಯಲು ಇಚ್ಛಿಸುವ ಮಹಿಳಾ ಆಟೋ ಚಾಲಕಿಯರು ಮೊ: 9844163411, 9187073721 ಸಂಪರ್ಕಿಸುವಂತೆ ವೈಭವಿ ಸಿಲ್ಕ್ ಅಂಡ್ ಸ್ಯಾರಿಸ್ ಸಂಸ್ಥೆ ಪ್ರಕಟಣೆ ತಿಳಿಸಿದೆ.

ಚಾಮರಾಜನಗರ ಆಕ್ಸಿಜನ್ ದುರಂತ: 21 ಮಂದಿಗೆ ಸರ್ಕಾರಿ ಉದ್ಯೋಗ!

ಬೆಂಗಳೂರು: ಕೊರೊನಾ ವೇಳೆ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ ಸಂತ್ರಸ್ತರ ಕುಟುಂಬಗಳ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಿದೆ. ಐದು ವರ್ಷಗಳ ಬಳಿಕ 21 ಮಂದಿಗೆ ಸರ್ಕಾರಿ ಕೆಲಸ ಘೋಷಣೆ ಮಾಡಲಾಗಿದ್ದು, ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಕಾತಿ ಆದೇಶ ಪತ್ರ ವಿತರಿಸಲಿದ್ದಾರೆ.

ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಕೊರೋನಾ ಸಮಯದಲ್ಲಿ ಸಂಭವಿಸಿದ ಆಕ್ಸಿಜನ್ ದುರಂತ ಇಡೀ ದೇಶವನ್ನೇ ಬೆಚ್ಚಿಬೀಳಿಸಿತ್ತು. ಈ ವೇಳೆ 36 ಜನ ಆಕ್ಸಿಜನ್ ಕೊರತೆಯಿಂದ ಮೃತಪಟ್ಟಿದ್ದರು. ಅಂದು ಉಂಟಾದ ಆಘಾತ ಮತ್ತು ನೋವು ಇನ್ನೂ ಕುಟುಂಬಗಳನ್ನು ಕಾಡುತ್ತಿದ್ದು, ಜೀವನೋಪಾಯಕ್ಕಾಗಿ ಅವರು ಕಳೆದ ಐದು ವರ್ಷಗಳಿಂದ ಕಷ್ಟಗಳನ್ನು ಎದುರಿಸುತ್ತಿದ್ದರು.

ಮೂರನೇ ಪುಟದಿಂದ

ಬಸವಣ್ಣನವರ ಜಯಂತಿ ಅದ್ಧೂರಿ ಆಚರಣೆ

ಬುದ್ಧ, ಬಸವ, ಅಂಬೇಡ್ಕರ್ ಅವರು ಪ್ರಜಾಪ್ರಭುತ್ವದ ಮಹಾನ್ ಹೋರಾಟಗಾರರು. ಅಂತಹ ಪ್ರಜಾಪ್ರಭುತ್ವಕ್ಕೆ ಬುನಾದಿ ಆದವರು ಬಸವಣ್ಣನವರು .ಕತ್ತಲಿನಿಂದ ಬೆಳಕಿಗೆ ನಡೆಸುವ ಬಸವ ಜಯಂತಿಯನ್ನು ಆಚರಿಸುತ್ತಿರುವುದು ನಮಗೆ ಬಹಳ ಸಂತೋಷವಾಗಿದೆ. ಮುಂದಿನ ವರ್ಷಗಳಲ್ಲಿ ಬಸವ ಭವನ ನಿರ್ಮಾಣ ಮಾಡಿ ಬಸವಣ್ಣನವರ ಜಯಂತಿ ಅಲ್ಲಿ ಆಚರಿಸೋಣ.
- ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ಮಾನವ ಘನತೆಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿದು, ಜಾತಿ–ಭೇದವನ್ನು ಕಿತ್ತೊಗೆದು ಸರ್ವ ಸಮಾಜಕ್ಕೂ ಸಮಾನ ಅವಕಾಶ ನೀಡಿ ಕಲ್ಯಾಣ ರಾಜ್ಯವನ್ನು ಸ್ಥಾಪಿಸಿದ ಬಸವಣ್ಣನವರು, ದೇಹವನ್ನೇ ದೇಗುಲ ಮಾಡಿ ಅಂಗೈ ಮೇಲೆ ಇಷ್ಟಲಿಂಗ ಇರಿಸಿ ಜೀವಾತ್ಮನು, ಪರಮಾತ್ಮನು ಕೂಡುವ ಸ್ಥಳವನ್ನು ಸಂಗಮ ಸ್ಥಳವನ್ನಾಗಿ ಮಾಡಿದರು. ಮಡಿ–ಮೈಲಿಗೆಗಳಂತಹ ಮೌಢ್ಯತೆ ತೊಡೆದು ಹಾಕಿ ಇಷ್ಟ ಲಿಂಗ ಪೂಜೆಯನ್ನು ಸಮಾಜಕ್ಕೆ ಸಾರಿದವರು, ಬಸವೇಶ್ವರ ದೇವರು.
- ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಮನುಷ್ಯರಾಗುವವರೆಗೆ ಜಾತಿ ವ್ಯವಸ್ಥೆ ಹೋಗುವುದಿಲ್ಲ. ಎಲ್ಲರಿಗೂ ಹಿಂದಿನಿಂದಲೇ ಅಕ್ಷರ ಕಲಿ ಯುವ ಅವಕಾಶ ಸಿಕ್ಕಿದ್ದರೆ ಅಸಮಾನತೆಯ ಸಮಾಜ ನಿರ್ಮಾಣ ಆಗುತ್ತಿರಲಿಲ್ಲ. ಸಮಾನತೆಯ ಸಮಾಜ ವನ್ನು ಬಸವಾದಿ ಶರಣರು ಹುಟ್ಟು ಹಾಕಿದರು. ಅದರಂತೆ ಸಮಾಜದ ಬದಲಾವಣೆಗೆ ನಿರಂತರ ಪ್ರಯತ್ನ ನಡೆಯು ತ್ತಿದ್ದು, ಬಸವಣ್ಣನವರ ಕನಸಾಗಿದ್ದ ಸಮ–ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರು ಶ್ರಮಿಸಬೇಕು. ಉತ್ಪಾದನೆ ಹಂಚಿಕೆ ಸಮರ್ಪಕವಾಗಿ, ಸಮಾನವಾಗಿ ಆಗಬೇಕು ಎಂಬುದನ್ನು ಬಸವಾದಿ ಶರಣರು ಕೊಟ್ಟ ಕೊಡುಗೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಬಸವಣ್ಣನವರ ಅನುಯಾಯಿ: ಇಂದಿಗೂ ವೈಜ್ಞಾನಿಕ ಮತ್ತು ವೈಚಾರಿಕ ಶಿಕ್ಷಣ ಎಲ್ಲರಿಗೂ ಸಿಗುತ್ತಿಲ್ಲ. ಇದರ ಪರಿಣಾಮ ವ್ಯವಸ್ಥೆಯ ಜೊತೆ ರಾಜೀ ಮಾಡಿಕೊಂಡು ಹೋಗುವ ಪರಿಸ್ಥಿತಿ ಇದೆ. ವಿದ್ಯಾವಂತರೇ ಮೂಢ ನಂಬಿಕೆಗೆ ಬಲಿಯಾಗುತ್ತಿದ್ದಾರೆ. ಮನುವಾದಿಗಳು ಮೂಢ ನಂಬಿಕೆಯನ್ನೇ ನಂಬುವಂತೆ ಮಾಡುತ್ತಿದ್ದಾರೆ. ಹಾಗಾಗಿ ನಮ್ಮ ಸರ್ಕಾರ ಬಸವಣ್ಣನವರ ವಿಚಾರ ಧಾರೆಗಳನ್ನು ಅನುಸರಿಸುತ್ತಿದೆ ಎಂದರಲ್ಲದೆ ನಾನು ದೇವರಿಲ್ಲ ಎಂದು ಹೇಳುವುದಿಲ್ಲ. ಎಲ್ಲಾ ಕಡೆ ದೇವರಿದ್ದಾನೆ. ದೇವನೊಬ್ಬ ನಾಮ ಹಲವು. ನಾನು ಸಹ ಪ್ರಾಮಾಣಿಕವಾಗಿ ಬಸವಣ್ಣನವರ ಅನುಯಾಯಿ ಆಗಿದ್ದೇನೆ ಎಂದು ಹೇಳಿದರು.

ಬಸವಣ್ಣನವರ ವಿಚಾರಗಳನ್ನು ತಿಳಿಸುವ ಪ್ರಯತ್ನ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿಮಹದೇವಪ್ಪ ಮಾತ ನಾಡಿ, ಕಲ್ಯಾಣದಲ್ಲಿ ಬಸವಣ್ಣನವರು ನಡೆಸಿದ ಸಮಾನತೆಯ ಕ್ರಾಂತಿಯ ವಿಚಾರ ಧಾರೆಗಳನ್ನು ಜನ ಸಾಮಾನ್ಯರಿಗೆ ತಿಳಿಸುವ ಒಂದು ಪ್ರಯತ್ನ ಇದಾಗಿದೆ. ಈ ಕಾರ್ಯಕ್ರಮದ ಮೂಲಕ ಬಸವಣ್ಣನವರ ವಿಚಾರಗಳು ಎಲ್ಲರ ಮನೆ ಬಾಗಿಲಿಗೆ ತಲುಪಬೇಕು ಎಂದು ಹೇಳಿದರು.

ಕರ್ನಾಟಕ ಸರ್ಕಾರ ಬಸವ ತತ್ವದಡಿಯಲ್ಲಿ ನಡೆಯುತ್ತಿದೆ...

ಕರ್ನಾಟಕ ಸರ್ಕಾರವು ಬಸವ ತತ್ವದಡಿಯಲ್ಲಿ ನಡೆಯುತ್ತಿದ್ದು, ಪ್ರತಿಯೊಬ್ಬರು ಒಪ್ಪುವಂತಹ ಗ್ಯಾರಂಟಿಗಳನ್ನು ಎಲ್ಲಾ ಸಮುದಾಯಕ್ಕೆ ರಾಜ್ಯ ಸರ್ಕಾರ ಕೊಟ್ಟಿದೆ ಎಂದು 2025–26ನೇ ಸಾಲಿನ ಬಸವ ರಾಷ್ಟ್ರೀಯ ಪುರಸ್ಕಾರ ಪಡೆದ ಬಸವ ತತ್ವ ಪ್ರಚಾರಕರಾದ ಡಾ.ಸಿದ್ದರಾಮ ಬೆಲ್ದಾಳ ಮೆಚ್ಚುಗೆ ವ್ಯಕ್ತಪಡಿಸಿದರು.

ಬಸವಣ್ಣನವರ ಸರ್ವಸಮಾನತೆಯ ತತ್ವದಿಂದ ಭಾರತ ಒಂದಾಗಿ ಸಾಗುತ್ತಿದೆ. ವಿಶ್ವವೇ ಒಂದು ಮನೆ, ಒಂದು ಕುಟುಂಬ ಎಂಬುದನ್ನು ಮನವರಿಕೆ ಮಾಡಿಕೊಂಡರೆ ಮಾತ್ರ ಮನುಕುಲ ಉಳಿಯುತ್ತದೆ. ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಸಾಮಾಜಿಕ ನ್ಯಾಯದ ಪರವಾಗಿದೆ. ಅನುಭವ ಮಂಟಪದ ಮರು ಸ್ಥಾಪನೆಗೆ ಬೆಂಬಲ ನೀಡಿದೆ ಎಂದರು.

ಕಾಯಕವೇ ಕೈಲಾಸ: ಬಸವಣ್ಣನವರು ತಮ್ಮ 8ನೇ ವಯಸ್ಸಿನಲ್ಲಿ ಲಿಂಗ ತಾರತಮ್ಯದ ಬಗ್ಗೆ ತಮ್ಮ ಕುಟುಂಬದ ವಿರುದ್ಧವೇ ನಿಂತರು. ಲಿಂಗ ಧಾರಣೆ ಎಲ್ಲರೂ ಮಾಡಿ ದೇಹವೇ ದೇಗುಲ, ಕಾಯಕವೇ ಕೈಲಾಸ ಎಂದು ಸಾರಿದರು. ತೆರಿಗೆ ಹಣವನ್ನು ಜನರ ಅಭಿವೃದ್ಧಿಗೆ ಮಾತ್ರ ಬಳಸಬೇಕು ಎಂಬ ನಿಲುವು ಹೊಂದಿದ್ದ ಅವರು, ವರ್ಣಾಶ್ರಮವನ್ನು ವಿರೋಧಿಸಿ ಅಂತರ್ಜಾತಿಯ ವಿವಾಹವನ್ನು ಪ್ರೋತ್ಸಾಹಿಸಿದರು. ಬುದ್ಧರ ನಂತರ ಸಮ–ಸಮಾಜ ನಿರ್ಮಾಣದ ಬಗ್ಗೆ ಜನ ಸಾಮಾನ್ಯರಿಗೆ ವಚನಗಳ ಮೂಲಕ ತಿಳಿಸಿದ ಮಹಾನ್ ವ್ಯಕ್ತಿ ಬಸವಣ್ಣನವರು ಎಂದು ಸ್ಮರಿಸಿದರು.

ಕಾರ್ಯರೂಪಕ್ಕೆ ತರುವ ಕೆಲಸ ಮಾಡುತ್ತಿದೆ!: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶಿವರಾಜ್ ತಂಗಡಗಿ ಮಾತನಾಡಿ, ಪ್ರಜಾಪ್ರಭುತ್ವಕ್ಕೆ ಅಡಿಪಾಯ ಹಾಕಿದ ಮಹಾನ್ ಕ್ರಾಂತಿಕಾರಿ, ಸಮಾನತೆಯ ಹರಿಕಾರ ಬಸವಣ್ಣನವರ ಜಯಂತಿಯನ್ನು ರಾಜ್ಯಮಟ್ಟದ ಕಾರ್ಯಕ್ರಮವನ್ನಾಗಿ ಪರಿವರ್ತಿಸಿ, ವೈಭವವನ್ನು ನೀಡಲಾಗುತ್ತಿದೆ. ಮೊದಲಿಗೆ ವಿಧಾನ ಸೌಧದಲ್ಲಿ, ನಂತರ ಕೂಡಲ ಸಂಗಮದಲ್ಲಿ, ಈ ಬಾರಿ ಮೈಸೂರಿನಲ್ಲಿ ಬಸವ ಜಯಂತಿ ಆಚರಣೆಯಾಗಿದೆ. ಬಸವಣ್ಣನವರ ಬಗ್ಗೆ ಭಾಷಣ ಮಾಡುವುದು ಸುಲಭ, ಆದರೆ, ಅವರನ್ನು ಆಡಳಿತದಲ್ಲಿ ಮತ್ತು ನೈಜ ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ, ಬಸವಣ್ಣನವರನ್ನು ಭಾಷಣಕ್ಕೆ ಸೀಮಿತವಾಗಿಸಿದೆ, ಕಾರ್ಯರೂಪಕ್ಕೆ ತರುವ ಕೆಲಸವನ್ನು ಮಾಡುತ್ತಿದೆ ಎಂದರು.

ಇದೇ ವೇಳೆ ಸಾಂಸ್ಕೃತಿಕ ನಾಯಕ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ತನ್ವೀರ್ ಸೇಠ್, ವಿಜಯಾನಂದ ಕಾಶಪ್ಪನವರ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಡಾ.ಯತೀಂದ್ರ, ಕೆ.ಶಿವಕುಮಾರ್, ಸಂಸದ ಸುನೀಲ್ ಬೋಸ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಕರ್ನಾಟಕ ಬೋವಿ ನಿಗಮದ ಅಧ್ಯಕ್ಷ ರಾಮಪ್ಪ, ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಡಾ.ಬಿ.ಎಸ್.ಮಂಜುನಾಥ್ ಸ್ವಾಮಿ, ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಸುದರ್ಶನ್, ಮೈಸೂರು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕೋಶಾಧ್ಯಕ್ಷ ಜಿ.ಎಂ. ಜೈಶಂಕರ್ ಜೀಮಾರಹಳ್ಳಿ, ಪ್ರಧಾನ ಕಾರ್ಯದರ್ಶಿ ಆಯರಹಳ್ಳಿ ಪಿ.ವಿರೂಪಾಕ್ಷ, ಕಾರ್ಯಕ್ರಮ ಸಮಿತಿ ಅಧ್ಯಕ್ಷ ಎಸ್.ಪುಟ್ಟರಾಜಪ್ಪ, ಪ್ರಧಾನ ಸಂಚಾಲಕ ದೇವರಾಜು ಪಿ.ಚಿಕ್ಕಹಳ್ಳಿ ಸೇರಿದಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮನೆ, ಕಚೇರಿ ಸೇರಿ 17 ಕಡೆ ಇಡಿ ದಾಳಿ

ಖಾತೆಗೆ ಹಾಕಿದ್ದ ಯಶೋಧಾ ಅವರಿಗೆ ಹಣ ಮತ್ತು ಲಾಭ ನೀಡದೆ ವಂಚಿಸಿದ್ದ ಗ್ಯಾಂಗ್ ವಿರುದ್ಧ ದೂರು ಸಲ್ಲಿಸಿದ್ದರು. ಈ ಪ್ರಕರಣದ ತನಿಖೆ ವೇಳೆ ನಲಪಾಡ್ ಹೆಸರು ಪತ್ತೆಯಾಗಿತ್ತು, ಹೀಗೆ ವ್ಯವಸ್ಥಿತವಾಗಿ ಬಿಟ್ ಕಾಯಿನ್ ಹ್ಯಾಕಿಂಗ್ ಮಾಡುತ್ತಿತ್ತು ಗ್ಯಾಂಗ್. ಪ್ರಕರಣದ ತನಿಖೆ ವೇಳೆ ನಲಪಡ್ ಹೆಸರು ಕೇಳಿಬಂದಿತ್ತು, ಈ ಬಗ್ಗೆ ರಾಜ್ಯ ಸರ್ಕಾರ ಎಸ್‌ಐಟಿ ಮೂಲಕ ತನಿಖೆ ನಡೆಸಿತ್ತು.

ಬಿಟ್ ಕಾಯಿನ್ ಹ್ಯಾಕಿಂಗ್ ಮತ್ತು ಕ್ರಿಪ್ಟೋ ಕರೆನ್ಸಿ ವಂಚನೆಗಳ ಗ್ಯಾಂಗ್ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬ ಆರೋಪದ ಮೇಲೆ ಇ.ಡಿ. ಈ ದಾಳಿ ನಡೆಸಿದೆ ಎನ್ನಲಾಗಿದೆ. ಆರೋಪಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವೆಬ್‌ಸೈಟ್‌ಗಳ ಹ್ಯಾಕಿಂಗ್, ಬಿಟ್‌ಕಾಯಿನ್ ಕಳವು, ದಬ್ಬಾಳಿಕೆ ಹಾಗೂ 1985 ಉಲ್ಲಂಘನೆಗಳಿಗೆ ಸಂಬಂಧಿಸಿದೆ. ಪಿಎಮ್‌ಎಲ್‌ಎ, 2002 ಅಡಿಯಲ್ಲಿ ನಡೆದ ತನಿಖೆಯಲ್ಲಿ ಆರೋಪಿತರ ಕಾರ್ಯವಿಧಾನದಲ್ಲಿ ವೆಬ್‌ಸೈಟ್‌ಗಳು/ವಾಲೆಟ್‌ಗಳನ್ನು ಹ್ಯಾಕ್ ಮಾಡಿ ವರ್ಚುವಲ್ ಡಿಜಿಟಲ್ ಆಸ್ತಿಗಳನ್ನು ಕಳವು ಮಾಡಿರುವ ಅಪರಾಧ.

ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿ ಡೇಟಾ/ಹಣ ಕಳವು ಮಾಡುವುದು, ಕ್ರಿಪ್ಟೋ ಟ್ರೇಡಿಂಗ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಮಾರಾಟ ಮಾಡುವುದು. ಮಾರಾಟದಿಂದ ಬಂದ ಹಣವನ್ನು ಬ್ಯಾಂಕ್ ಖಾತೆಗಳ ಮೂಲಕ ವರ್ಗಾವಣೆ ಮಾಡಿದ ಆರೋಪ ಸೇರಿದೆ. ಬೆಳಗ್ಗೆ ಆರೂವರೆಗೆ ದಾಳಿ ನಡೆಯಿತು. ನಾಲ್ಕು ವಾಹನದಲ್ಲಿ ಇ.ಡಿ. ಅಧಿಕಾರಿಗಳು ಆಗಮಿಸಿ ದಾಳಿ ನಡೆಸಿದಾಗ ಹ್ಯಾರಿಸ್ ಸಹ ಮನೆಯಲ್ಲೇ ಇದ್ದರು, ಗರುಡ ಮಾಲ್ ಹಿಂಭಾಗದಲ್ಲಿ ಈ ನಿವಾಸ ಇದೆ. 2024 ಜೂನ್‌ನಲ್ಲಿ ಸಿಐಡಿ ಮತ್ತು ಎಸ್‌ಐಟಿ ನಲಪಾಡ್ ವಿಚಾರಣೆ ನಡೆಸಿತ್ತು. ಇಡಿ ಅಧಿಕಾರಿಗಳು 2021ರಲ್ಲಿ ಸಿಬಿಐನಿಂದ ಮಾಹಿತಿ ಪಡೆದಿದ್ದರು. ಅಧಿಕೃತ ಕೇಸ್ ಫೈಲ್‌ಗಳನ್ನೂ ಪಡೆಯಲಾಗಿತ್ತು. ಈ ಪ್ರಕರಣದ ತನಿಖೆ ಕರ್ನಾಟಕ ಪೊಲೀಸ್ ದಾಖಲಿಸಿದ ಅನೇಕ ಎಫ್‌ಐಆರ್‌ಗಳು ಮತ್ತು ಚಾರ್ಜ್‌ಶೀಟ್‌ಗಳ ಆಧಾರದ ಮೇಲೆ ಪ್ರಾರಂಭವಾಗಿದೆ. ಮಹಮದ್ ನಲಪಾಡ್ ಸಹೋದರ ಉಮರ್ ನಲಪಾಡ್ ವಿರುದ್ಧವೂ ತನಿಖೆ ನಡೆದಿದೆ. ಉಮರ್ ನಲಪಾಡ್‌ಗೆ ಸಂಬಂಧಿಸಿದ ಸ್ಥಳದಲ್ಲಿ ಸಹ ದಾಳಿ ನಡೆಸಲಾಗಿದೆ, 20216 ರಿಂದ 2017 ರಲ್ಲಿ ಮೊದಲು ಇವರುಗಳ ನಡುವೆ ವ್ಯವಹಾರ ನಡೆದಿತ್ತು.

ನಲಪಾಡ್ ಗ್ರೂಪ್ ಮತ್ತು ಬ್ಲಾಂಕ್ ದಿ ಕಾಫಿ ಪ್ಲೇಸ್‌ನಂತಹ ಉದ್ಯಮಗಳಲ್ಲಿ ತೊಡಗಿಸಿಕೊಂಡಿರುವ ಆರೋಪವಿದೆ. ಜೂನ್ 2024 ಮತ್ತು ಫೆಬ್ರವರಿ 2025 ನಲಪಾಡ್ ಸಹೋದರರನ್ನು ಸಿಐಡಿಯು ವಿಚಾರಣೆ ನಡೆಸಿತ್ತು, ಹ್ಯಾಕರ್ ಶ್ರೀಕಿ ಕೊಟ್ಟಿರುವ ಹಣದ ಬಗ್ಗೆ ಒಮರ್ ಮತ್ತು ಅವರ ಸಹೋದರ ಮೊಹಮ್ಮದ್ ನಲಪಾಡ್ ಅವರನ್ನು ಸಿಐಡಿ–ಎಸ್‌ಐಟಿ ಪ್ರಶ್ನಿಸಿತ್ತು.

ಮಾಜಿ ಕೇಂದ್ರ ಸಚಿವ ರೆಹಮಾನ್ ಖಾನ್ ಮೊಮ್ಮಗ ಭಾಗಿ: ಮಾಜಿ ಕೇಂದ್ರ ಸಚಿವ ಕೆ.ರೆಹಮಾನ್ ಖಾನ್ ಮೊಮ್ಮಗ ಹಾಕಿಬ್ ಖಾನ್, ಈತನ ಬ್ಯಾಂಕ್ ಖಾತೆಗಳು ಹಣ ವರ್ಗಾವಣೆಯಲ್ಲಿ ಭಾಗಿಯಾಗಿತ್ತು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಅವರ ಮನೆ ಮೇಲು ಇ.ಡಿ. ದಾಳಿ ನಡೆಸಿದೆ. ಬೆಂಗಳೂರಿನಲ್ಲಿ ಮಹಮದ್ ಹ್ಯಾರೀಸ್ ನಿವಾಸ, ಮಹಮದ್ ನಲಪಾಡ್ ನಿವಾಸ, ಒಮರ್ ಫಾರೂಕ್ ನಲಪಾಡ್ ಕಚೇರಿ, ನಲಪಾಡ್‌ಗೆ ಸೇರಿದ ನಾಲ್ಕು ಕಚೇರಿ, ರೆಹಮಾನ್ ಖಾನ್ ಮೊಮ್ಮಗ ಹಕೀಬ್ ಮನೆ, ಚಿಪ್ಸನ್ ಏವಿಯೇಷನ್ ಕಂಪನಿ, ಇನ್ ಪೀಜಿ ಐಟಿ ಸೆಲ್ಯುಲೋಸ್, ಹೋರೋಸ್ ಕ್ರಿಪ್ಟೋ ಕಂಪನಿ ಮೇಲೆ ಇಡಿ ದಾಳಿ ನಡೆಸಿದ ಸ್ಥಳಗಳಾಗಿವೆ.

ನಾಳೆಯಿಂದ ಸಿಇಟಿ: ವಸ್ತ್ರಸಂಹಿತೆ ಕಡ್ಡಾಯ

(ಜೇಬುಗಳು ಇಲ್ಲದಿರುವ/ ಕಮ್ಮಿ ಜೇಬುಗಳಿರುವ) ಪುರುಷ ಅಭ್ಯರ್ಥಿಗಳಿಗೆ ಆದ್ಯತೆಯ ಡ್ರೆಸ್ ಕೋಡ್ ಆಗಿದೆ. ಕುರ್ತಾ ಪೈಜಾಮವನ್ನು, ಜೀನ್ಸ್ ಪ್ಯಾಂಟ್ ಅನುಮತಿಸುವುದಿಲ್ಲ. ಪುರುಷ ಅಭ್ಯರ್ಥಿಗಳು ಧರಿಸುವ ಬಟ್ಟೆಗಳು ಹಗುರವಾಗಿರಬೇಕು ಅಂದರೆ ಜಿಪ್ ಪಾಕೆಟ್‌ಗಳು, ದೊಡ್ಡ ಬಟನ್‌ಗಳು ಮತ್ತು ವಿಸ್ತಾರವಾದ ಕಸೂತಿ ಇರುವ ಬಟ್ಟೆಗಳು ಇರಬಾರದು. ಪರೀಕ್ಷಾ ಹಾಲ್ ಒಳಗೆ ಶೂಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಅಭ್ಯರ್ಥಿಗಳು ಸ್ಯಾಂಡಲ್ ಅಥವಾ ತೆಳುವಾದ ಅಡಿಭಾಗ ಇರುವ ಚಪ್ಪಲಿಗಳನ್ನು ಧರಿಸುವುದು. ಅಭ್ಯರ್ಥಿಗಳು ಕುತ್ತಿಗೆಯ ಸುತ್ತ ಯಾವುದೇ ಲೋಹದ ಆಭರಣಗಳನ್ನು ಧರಿಸುವುದು ಅಥವಾ ಕಿವಿಯೋಲೆಗಳು, ಉಂಗುರಗಳು ಮತ್ತು ಕಡಗಗಳನ್ನು ಧರಿಸುವುದು ನಿಷೇಧಿಸಲಾಗಿದೆ.

ಮಹಿಳಾ ಅಭ್ಯರ್ಥಿಗಳ ವಸ್ತ್ರಸಂಹಿತೆ: ಮಹಿಳಾ ಅಭ್ಯರ್ಥಿಗಳು ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್‌ಗಳು ಅಥವಾ ಬಟನ್‌ಗಳು ಹೊಂದಿರುವ ಬಟ್ಟೆಗಳನ್ನು ಧರಿಸುವುದು ನಿಷೇಧಿಸಲಾಗಿದೆ. ಪರೀಕ್ಷೆಯ ದಿನದಂದು ಪೂರ್ಣ ತೋಳಿನ ಬಟ್ಟೆಗಳನ್ನು/ ಜೀನ್ಸ್ ಪ್ಯಾಂಟ್ ಧರಿಸಬಾರದು. ಅದರ ಬದಲಾಗಿ ಅರ್ಧ ತೋಳಿನ ಬಟ್ಟೆಗಳನ್ನು ಮುಜುಗರವಾಗದಂತೆ ಮತ್ತು ಮೇಲೆ ಉಲ್ಲೇಖಿಸಿರುವ ಬಗೆಯಲ್ಲಿ ನಿಯಮದಂತೆ ಧರಿಸುವಂತೆ ನಿರ್ದೇಶಿಸಲಾಗಿದೆ. ಎತ್ತರವಾದ ಹಿಮ್ಮಡಿಯ ಶೂಗಳನ್ನು/ ಚಪ್ಪಲಿಗಳನ್ನು ಮತ್ತು ದಪ್ಪವಾದ ಅಡಿಭಾಗ ಹೊಂದಿರುವ ಶೂಗಳನ್ನಾಗಲಿ/ ಚಪ್ಪಲಿಗಳನ್ನಾಗಲಿ ಧರಿಸಬಾರದು, ತೆಳುವಾದ ಅಡಿಭಾಗ ಹೊಂದಿರುವ ಚಪ್ಪಲಿಗಳು ಧರಿಸುವುದು ಕಡ್ಡಾಯವಾಗಿದೆ. ಮಹಿಳಾ ಅಭ್ಯರ್ಥಿಗಳು ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸುವುದನ್ನು ನಿಷೇಧಿಸಿದೆ. (ಮಂಗಳಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ).

ನಿಷೇಧಿತ ವಸ್ತುಗಳ ಪಟ್ಟಿ: ಎಲೆಕ್ಟ್ರಾನಿಕ್ ವಸ್ತುಗಳು, ಮೊಬೈಲ್ ಫೋನ್‌ಗಳು, ಪೆನ್ ಡ್ರೈವ್‌ಗಳು, ಇಯರ್ ಫೋನ್‌ಗಳು, ಮೈಕ್ರೋಫೋನ್‌ಗಳು, ಬ್ಲೂಟೂಥ್ ಸಾಧನಗಳು ಮತ್ತು ಕೈಗಡಿಯಾರಗಳನ್ನು ಪರೀಕ್ಷಾ ಕೊಠಡಿಯೊಳಗೆ ಅನುಮತಿಸಲಾಗುವುದಿಲ್ಲ. ತಿನ್ನಬಹುದಾದ ಪದಾರ್ಥಗಳನ್ನು ಪರೀಕ್ಷಾ ಕೊಠಡಿಯೊಳಗೆ ತರುವುದನ್ನು ಹಾಗೂ ತಿನ್ನುವುದನ್ನು ನಿಷೇಧಿಸಲಾಗಿದೆ. ಬಣ್ಣದ ಹಾಗೂ ಲೋಹದ ಕುಡಿಯುವ ನೀರಿನ ಬಾಟಲಿಗೂ ಸಹ ಅನುಮತಿ ಇರುವುದಿಲ್ಲ. ಪರೀಕ್ಷಾ ಕೇಂದ್ರದಲ್ಲಿಯೇ ಕುಡಿಯುವ ನೀರಿಗೆ ವ್ಯವಸ್ಥೆ ಕಲ್ಪಿಸಿಕೊಡಲಾಗುವುದು. ಪೆನ್ಸಿಲ್, ಪೇಪರ್, ಎರೇಸರ್, ಜಾಮಿಟ್ರಿ ಬಾಕ್ಸ್‌ಗಳು ಮತ್ತು ಲಾಗ್ ಟೇಬಲ್‌ಗಳನ್ನು ಪರೀಕ್ಷಾ ಕೇಂದ್ರದೊಳಗೆ ತರುವಂತಿಲ್ಲ. ತಲೆಯ ಮೇಲೆ ಟೋಪಿ/ ಹ್ಯಾಟ್ ಧರಿಸುವಂತಿಲ್ಲ. ಯಾವುದೇ ರೀತಿಯ ಮುಖ ಮುಚ್ಚುವಂತ ಮಾಸ್ಕನ್ನು ಧರಿಸುವಂತಿಲ್ಲ.

ಪರೀಕ್ಷೆಯ ದಿನದಂದು ಈ ಕೆಳಗಿನ ವಸ್ತುಗಳನ್ನು ಮಾತ್ರ ತರಲು ಅನುಮತಿಸಲಾಗಿದೆ: ಪ್ರವೇಶ ಪತ್ರವನ್ನು ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ತರುವುದು. ಸರ್ಕಾರದಿಂದ ಮಾನ್ಯವಾದ ಫೋಟೋ ಗುರುತಿನ ಚೀಟಿಯನ್ನು ತರುವುದು ಕಡ್ಡಾಯಗೊಳಿಸಲಾಗಿದೆ. ಪರೀಕ್ಷೆಯ ಕೊನೆಯ ಬೆಲ್ ಆಗುವವರೆಗೂ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಿಂದ ಹೊರಗೆ ಹೋಗಲು ಅನುಮತಿ ಇರುವುದಿಲ್ಲ. ಮೇಲೆ ನಿಗದಿಪಡಿಸಲಾದ ವಸ್ತ್ರಸಂಹಿತೆಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು. ಇಲ್ಲವಾದಲ್ಲಿ ನಿಯಮಾನುಸಾರ ಅಭ್ಯರ್ಥಿಗಳ ಮೇಲೆ ಕಠಿಣ ಕ್ರಮವನ್ನು ಜರುಗಿಸಲಾಗುವುದು.

ಸಂಘಟನೆಗಳ ಪತ್ರ

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯ ಟಿಕೆಟ್ ಹಂಚಿಕೆ ಹಾಗೂ ಮತದಾನದ ಬಳಿಕ ಕಾಂಗ್ರೆಸ್ ನಡೆದುಕೊಂಡಿರುವ ರೀತಿಯಿಂದ ಮುಸ್ಲಿಂ ಸಮುದಾಯಕ್ಕೆ ತೀವ್ರ ಆಘಾತವಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ನ್ಯಾಯವಾಗಿ ನೀಡಲೇಬೇಕಾಗಿದ್ದ ಟಿಕೆಟ್ ನಿರಾಕರಿಸಲಾಯಿತು. ಸಮುದಾಯದ ನ್ಯಾಯಯುತ ಬೇಡಿಕೆಯನ್ನು ಕಡೆಗಣಿಸಲಾಯಿತು. ಟಿಕೆಟ್ ಕೇಳಿದ್ದೇ ಅಪರಾಧ ಎಂಬಂತೆ ಪಕ್ಷದ ವರಿಷ್ಠರು ನಡೆದುಕೊಂಡರು. ಇಷ್ಟು ಸಾಲದು ಎಂಬಂತೆ ಮತದಾನ ಮುಗಿದ ಕೂಡಲೇ ಸೂಕ್ತ ಕಾರಣ ನೀಡದೆ, ವಿವರಣೆಗೆ ಅವಕಾಶವನ್ನೂ ನೀಡದೆ ಸಮು ದಾಯದ ನಾಯಕರನ್ನು ಏಕಾಏಕಿ ಪಕ್ಷದಿಂದ ವಜಾ ಮಾಡಲಾಯಿತು ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಮುಸಲ್ಮಾನರಿಗೆ ಕಾಂಗ್ರೆಸ್ ಕೊಟ್ಟಷ್ಟು ರಕ್ಷಣೆ ಬೇರೆ ಯಾವುದೇ ಪಕ್ಷ ಕೊಟ್ಟಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಅವರು ಹೇಳಿರುವುದು ಖಂಡನೀಯ. ಸರ್ಕಾರ ಮತ್ತು ಪಕ್ಷ ಕೂಡಲೇ ಗಮನಹರಿಸಿ ಮುಸ್ಲಿಂ ಸಮುದಾಯದ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ತನ್ನ ತಪ್ಪುಗಳನ್ನು ತಿದ್ದಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಹನುಮಂತರಾಯ ನಿಧನ



ಮೈಸೂರು, ಏ.20– ಮೈಸೂರು ಮಹಾನಗರ ಪಾಲಿಕೆ ನೌಕರ, ಮಂಡಿ ಮೊಹಲ್ಲಾ ಚಿಕ್ಕವೀರಣ್ಣ ರಸ್ತೆ ನಿವಾಸಿ ಹನುಮಂತರಾಯ (59) ಅವರು ಸೋಮವಾರ ನಿಧನರಾದರು. ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬನ್ನಿಮಂಟಪ ಜೋಡಿ ತೆಂಗಿನ ಮರದ ಸ್ಮಶಾನದಲ್ಲಿ ಮಂಗಳವಾರ(ಏ.21) ಮಧ್ಯಾಹ್ನ 2 ಗಂಟೆಗೆ ಅಂತ್ಯ ಸಂಸ್ಕಾರ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಪುಷ್ಪಾರ್ಚನೆ....



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚುಂಚರಾಯನಹುಂಡಿ ಗ್ರಾಮದಲ್ಲಿ ಬಸವ ಜಯಂತಿ ಪ್ರಯುಕ್ತ ಏರ್ಪಡಿಸಿದ್ದ ಮೆರವಣಿಗೆಗೆ ಶಾಸಕ ಜಿ.ಟಿ.ದೇವೇಗೌಡರು ಬಸವಣ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ಈ ವೇಳೆ ಗ್ರಾಮದ ಗೌಡರಾದ ಬಸವಣ್ಣ, ಮುಖಂಡರಾದ ಮಂಜು, ಮಹದೇವಸ್ವಾಮಿ, ನಂಜುಂಡಸ್ವಾಮಿ, ಮಲ್ಲಪ್ಪ, ಕುಮಾರ್, ಮಹದೇವಸ್ವಾಮಿ, ಸೋಮಶೇಖರ್, ಮೂರ್ತಿ, ನಂಜುಂಡ, ಸಿದ್ದಯ್ಯ, ಮಹಾದೇವಯ್ಯ, ತಾಪಂ ಮಾಜಿ ಉಪಾಧ್ಯಕ್ಷ ಜವರನಾಯ್ಕ, ದಾರೀಪುರ ಬಸವಣ್ಣ, ಬರಡನಪುರ ಬಸವಣ್ಣ, ಕೆಂಡಗಣ್ಣ ಇತರರಿದ್ದರು.

12ನೇ ಶತಮಾನದ ಶ್ರೇಷ್ಠ ವಚನಕಾರ ಬಸವಣ್ಣ

ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಬಣ್ಣನೆ

ನಂಜನಗೂಡು, ಏ.20– ಬಸವಣ್ಣನವರು ತಮ್ಮ ವಚನಗಳ ಮೂಲಕ ಜಾತಿ ವ್ಯವಸ್ಥೆ ಹೋಗಲಾಡಿಸಿ ಸಮಾಜದಲ್ಲಿ ಪರಿವರ್ತನೆ ತರಲು ಪ್ರಯತ್ನಿಸಿದವರು. ಬಸವಣ್ಣನವರ ತತ್ವ ಸಿದ್ಧಾಂತವನ್ನು ನಾವೆಲ್ಲರೂ ಪಾಲಿಸಿದಾಗ ಮಾತ್ರ ಎಲ್ಲರೂ ಒಗ್ಗಟ್ಟಿನಿಂದ ಜೀವನ ನಡೆಸಲು ಸಾಧ್ಯ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ತಾಲೂಕು ಕಚೇರಿ ಎದುರು ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ವಿಶ್ವಗುರು ಬಸವಣ್ಣನವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವಗುರು ಬಸವಣ್ಣನವರು 12ನೇ ಶತಮಾನದ ಅತಿ ಶ್ರೇಷ್ಠ ವಚನಕಾರರು. ತಮ್ಮ ವಚನಗಳ ಮೂಲಕ ಜಾತಿ ವ್ಯವಸ್ಥೆ, ಅಸಮಾನತೆ ಮತ್ತು ಮೂಢ ನಂಬಿಕೆಗಳ ವಿರುದ್ಧ ಹೋರಾಡಿದ ಮಹಾನ್ ಸಮಾಜ ಸುಧಾರಕರು. ಅವರು ಕಾಯಕವೇ ಕೈಲಾಸ ಎಂಬ ಸಂದೇಶದ ಮೂಲಕ ದುಡಿಮೆಯ ಮಹತ್ವ ಸಾರಿದರಲ್ಲದೆ, ದಾಸೋಹ ತತ್ವದ ಮೂಲಕ ಆರ್ಥಿಕವಾಗಿ ಹಿಂದುಳಿದವರಿಗೆ ಹಂಚಿಕೊಳ್ಳುವ ಸಂಸ್ಕೃತಿ ಉತ್ತೇಜಿಸಿದರು. ಅಲ್ಲದೆ ಬಸವೇಶ್ವರರು ತಮ್ಮ ಅನುಭವ ಮಂಟಪದ ಮೂಲಕ ಸಮಾನತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಾರಿದರು. ಬಸವಣ್ಣನವರ ಚಿಂತನೆಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ. ಬಸವಣ್ಣನವರು ತಮ್ಮ ವಚನಗಳ ಮೂಲಕ ಇಂದಿಗೂ ಜೀವಂತವಾಗಿದ್ದಾರೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ರಂಗಸ್ವಾಮಿ, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ಪ್ರಧಾನ ಕಾರ್ಯದರ್ಶಿ ಶಿವಪ್ಪದೇವರು, ಮುಖಂಡರಾದ ದೊರೆಸ್ವಾಮಿ ನಾಯಕ, ಅಶೋಕ್, ಕೆ.ಎಂ.ಬಸವರಾಜು, ಅಕ್ರಮ ಸಕ್ರಮ ಸಮಿತಿ ಸದಸ್ಯ ಜೈರಾಮ್, ಮುಖ್ಯ ಭಾಷಣಕಾರರಾದ ಸಿದ್ದರಾಜಪ್ಪ, ತಹಸೀಲ್ದಾರ್ ಸ್ಮಿತಾ ರಾಮು, ತಾಪಂ ಇಓ ಜೆರಾಲ್ಡ್ ರಾಜೇಶ್, ಆರ್‌ಐಗಳಾದ ರಾಜು, ಹರೀಶ್ ಇದ್ದರು.



ಬಸವ ಜಯಂತಿ ಕಾರ್ಯಕ್ರಮವನ್ನು ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

ಮೂರು ಗಂಟೆಗೂ ಹೆಚ್ಚು ಕಾಲ ಬಾನಂಗಳದಲ್ಲೇ ವಿಮಾನ ಹಾರಾಟ

● ಭಯದಿಂದ ಚೀರಾಡಿ, ದೇವರ ಪ್ರಾರ್ಥಿಸಿದ ಪ್ರಯಾಣಿಕರ ವೀಡಿಯೋ ವೈರಲ್ ● ಹೈದರಾಬಾದ್‌ನಿಂದ ಹೊರಟಿದ್ದ ವಿಮಾನ ಹುಬ್ಬಳ್ಳಿ ಬದಲಿಗೆ ಬೆಂಗಳೂರಲ್ಲಿ ಲ್ಯಾಂಡ್

ಹುಬ್ಬಳ್ಳಿ: ಹೈದ್ರಾಬಾದ್‌ನಿಂದ ಹುಬ್ಬಳ್ಳಿಗೆ ಹೊರಟಿದ್ದ ಫ್ಲೈ91 ವಿಮಾನವು ಹವಾಮಾನ ವೈಪರಿತ್ಯದಿಂದ ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಇಳಿಯಲು ಸಾಧ್ಯವಾಗದೆ ಬಾನಂಗಳದಲ್ಲಿಯೇ ಮೂರು ಗಂಟೆಗೂ ಹೆಚ್ಚುಕಾಲ ಹಾರಾಟ ನಡೆಸಿದ್ದರಿಂದ ಪ್ರಯಾಣಿಕರು ಆತಂಕದಿಂದ ಚೀರಾಡಿದ ಘಟನೆ ಭಾನುವಾರ ಮಧ್ಯಾಹ್ನ ನಡೆದಿದೆ.

ಭಾನುವಾರ ಮಧ್ಯಾಹ್ನ 3 ಗಂಟೆಗೆ ಹೈದರಾಬಾದ್‌ನಿಂದ ಹೊರಟಿದ್ದ ಫ್ಲೈ91 ಐಸಿ 3401 ವಿಮಾನ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಸಂಜೆ 4.30ಕ್ಕೆ ತಲುಪಬೇಕಿತ್ತು. ಆದರೆ, ಹವಾಮಾನ ವೈಪರಿತ್ಯದಿಂದಾಗಿ ಹುಬ್ಬಳ್ಳಿಯಲ್ಲಿ ಇಳಿಯಲು ಸಾಧ್ಯವಾಗದೆ ಆಗಸದಲ್ಲೇ ಹಾರಾಡಿದೆ. ಹಳಿಯಾಳ, ಮುಂಡಗೋಡ, ಶಿವಮೊಗ್ಗ ಭಾಗದಲ್ಲಿ ಸುತ್ತಾಡಿ ರಾತ್ರಿ 8ರ ವೇಳೆಗೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಲ್ಯಾಂಡ್ ಆಗಿದೆ. ಈ ವೇಳೆ ವಿಮಾನದಲ್ಲಿದ್ದ ಪ್ರಯಾಣಿಕರು ತೀವ್ರ ಆತಂಕಗೊಂಡಿದ್ದರು. ಜೀವಭಯದಿಂದ ದೇವರ ಮೊರೆ ಹೋಗಿದ್ದು ಹಾಗೂ ಚೀರಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿದೆ.

ಪ್ರಯಾಣಿಕರ ಸುರಕ್ಷತೆ ಬಗ್ಗೆ ವಿಮಾನ ಸಿಬ್ಬಂದಿ ನಿರ್ಲಕ್ಷ್ಯ ವಹಿಸಿದ್ದಾರೆ. ಪ್ರಯಾಣಿಕರನ್ನು ಬೆಂಗಳೂರಿಗೆ ಕರೆದೊಯ್ದು, ಹುಬ್ಬಳ್ಳಿಗೆ ತಲುಪಲು ಯಾವುದೇ ವ್ಯವಸ್ಥೆ ಮಾಡಿಲ್ಲ. ವಿಮಾನದಲ್ಲಿ ಕಂಡುಬಂದ ತಾಂತ್ರಿಕ ದೋಷವೇ ಇದಕ್ಕೆ ಕಾರಣ ಎಂದು ವಿಮಾನ ಪ್ರಯಾಣಿಕರೊಬ್ಬರ ಸಂಬಂಧಿ ಆರೋಪಿಸಿದ್ದಾರೆ.

ಹುಬ್ಬಳ್ಳಿ ಸಮೀಪ ವಿಮಾನ ಬಂದಾಗ ದುರ್ಬಲ ಹವಾಮಾನ ಪರಿಸ್ಥಿತಿ ಎದುರಾಗಿತ್ತು. ವಿಮಾನ ನಿಯಂತ್ರಣಾಧಿಕಾರಿ ಸೂಚನೆಯಂತೆ ಬೆಂಗಳೂರಿನಲ್ಲಿ ವಿಮಾನವನ್ನು ಸುರಕ್ಷಿತವಾಗಿ ಇಳಿಸಲಾಗಿದೆ. ವಿಮಾನಯಾನದಲ್ಲಿ ಇದು ಸಾಮಾನ್ಯ. ವಿಮಾನದಲ್ಲಿ ಯಾವುದೇ ತಾಂತ್ರಿಕ ದೋಷಗಳು ಕಂಡು ಬಂದಿರಲಿಲ್ಲ. ಈ ಪ್ರಾದೇಶಿಕ ವಿಮಾನ ಸಂಸ್ಥೆಗೆ ಅತ್ಯುತ್ತಮ ಸುರಕ್ಷತಾ ದಾಖಲೆ ಇದೆ ಎಂದು ಫ್ಲೈ91 ಸಾರ್ವಜನಿಕ ಸಂಪರ್ಕಾಧಿಕಾರಿ ಕಲ್ಪೇಶ್ ಕುಬಲ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್‌ಸಿಎಂ ಹುಟ್ಟುಹಬ್ಬ ಹಿನ್ನೆಲೆ ಮಾದಪ್ಪನಿಗೆ ವಿಶೇಷ ಪೂಜೆ: ಬಡವರಿಗೆ ಆಹಾರ ಕಿಟ್ ವಿತರಣೆ



ಪುಟ್ಟೀರಮ್ಮನ ದೊಡ್ಡಿಯಲ್ಲಿ ಬಡ ಕುಟುಂಬಗಳಿಗೆ ಆಹಾರ ಕಿಟ್ ವಿತರಿಸಲಾಯಿತು.

ಮೈಸೂರು, ಏ.20– ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಹುಟ್ಟುಹಬ್ಬದ ಪ್ರಯುಕ್ತ ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದಿಂದ ಸೋಮವಾರ ಮಲೆ ಮಹದೇಶ್ವರ ಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.


ಇದೇ ವೇಳೆ ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಪುಟ್ಟೀರಮ್ಮನದೊಡ್ಡಿ ಗ್ರಾಮದ 110 ಬಡ ಕುಟುಂಬಗಳಿಗೆ 1.11 ಲಕ್ಷ ರೂ. ವೆಚ್ಚದ ಆಹಾರ ಕಿಟ್‌ಗಳನ್ನು ಬಳಗದ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ ವಿತರಿಸಿದರು. ಅಲ್ಲದೇ ಗ್ರಾಮದಲ್ಲಿ ಬಳಗದಿಂದ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ರಾಜ್ಯ ಸಮಿತಿ ಕಾರ್ಯಾಧ್ಯಕ್ಷ ಡಾ.ಬಸವರಾಜು, ಉಪಾಧ್ಯಕ್ಷ ಭರತ್, ಪ್ರಧಾನ ಕಾರ್ಯದರ್ಶಿ ನಾಗರಾಜು, ಮಾಧ್ಯಮ ಸಲಹೆಗಾರ ಮಂಜುನಾಥ್, ಖಜಾಂಚಿ ಮಹದೇವ, ಕಾರ್ಯದರ್ಶಿ ಮಹೇಶ್, ನಿರ್ದೇಶಕರಾದ ನಾಗೇಶ್, ಹರೀಶ್, ಸವಿತಿಂಯು ತಾಲೂಕು ಅಧ್ಯಕ್ಷ ರುದ್ರ ನಾಗರಾಜು ಮೂರ್ತಿ, ಹನೂರು ತಾಲೂಕು ಅಧ್ಯಕ್ಷ ಸಂಪತ್ ಇನ್ನಿತರರು ಉಪಸ್ಥಿತರಿದ್ದರು.

ಸನ್ಮಾನ....




ಮೈಸೂರಿನ ಕೆ.ಜಿ.ಕೊಪ್ಪಲಿನ ಪೈಲ್ವಾನ್ ಬಸವಯ್ಯ ವೃತ್ತದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನಕ್ಕೆ ಮೂರು ಲಕ್ಷ ರೂ. ವೆಚ್ಚದಲ್ಲಿ ಬೆಳ್ಳಿಯ ತ್ರಿಶೂಲವನ್ನು ಕೊಡುಗೆಯಾಗಿ ನೀಡಿದ ಇಂಡಿಯನ್ ಟಿವಿ ಮಾಲೀಕ ಎಸ್.ವೆಂಕಟೇಶ್ ಕುಮಾರ್ ಅವರನ್ನು ದೇವಸ್ಥಾನದ ಪದಾಧಿಕಾರಿಗಳು ಸನ್ಮಾನಿಸಿದರು.

ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ...



ಮೈಸೂರು ತಾಲೂಕಿನ ಹುಯಿಲಾಳು ಗ್ರಾಮದ ಶ್ರೀಮನೆ ಮಾಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಬಸವ ಜಯಂತಿ ಪ್ರಯುಕ್ತ ಗನ್‌ಹೌಸ್ ಬಳಿಯ ಶ್ರೀ ಬಸವೇಶ್ವರ ಪ್ರತಿಮೆಗೆ ಸೋಮವಾರ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಮಾಲಾರ್ಪಣೆ ಮಾಡಿದರು. ಈ ವೇಳೆ ಯುವ ಮುಖಂಡ ಹುಯಿಲಾಳು ಮಂಜುನಾಥ್ ಪ್ರಸಾದ್, ಬಿ.ಎಸ್.ರಾಜು, ಸವಿತಾ ಸಮಾಜದ ನಗರಾಧ್ಯಕ್ಷ ಹರೀಶ್‌ರೆಡ್ಡಿ ಇದ್ದರು.

ಹುಟ್ಟುಹಬ್ಬದ ಶುಭಾಶಯ...



ಸಮಾಜ ಕಲ್ಯಾಣ ಸಚಿವ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಿನಕಲ್ ಮಂಜು, ಮುಖಂಡರಾದ ಬೋಮ್ಮೇನಹಳ್ಳಿ ಶಿವರಾಜು ಇದ್ದರು.

ಮೂತ್ರಜನಕಾಂಗ ಕಲ್ಲುಗಳ ಉಚಿತ ತಪಾಸಣೆ ಶಿಬಿರ

ಮೈಸೂರು: ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಏ.20ರಿಂದ 25ರವರೆಗೆ ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಮೂತ್ರಜನಕಾಂಗದ ಕಲ್ಲುಗಳ ತೊಂದರೆಯಿಂದ ಬಳಲುತ್ತಿರುವವರು, ಮೂತ್ರವಿಸರ್ಜನೆ ವೇಳೆ ಉರಿ ಅಥವಾ ನೋವು, ಬೆನ್ನು ಅಥವಾ ಪಕ್ಕೆಯ ಭಾಗದಲ್ಲಿ ಪದೇ ಪದೇ ನೋವು, ಮೂತ್ರನಾಳದಲ್ಲಿ ಸೋಂಕು ಹೊಂದಿರುವವರು, ಕುಟುಂಬದಲ್ಲಿ ಮೂತ್ರದಲ್ಲಿ ಕಲ್ಲುಗಳ ಸಮಸ್ಯೆ ಇರುವವರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಮಾಹಿತಿಗಾಗಿ 0821–2533600, 99863 99862 ಸಂಪರ್ಕಿಸಿ.

ಏ.26 ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಸಮ್ಮೇಳನ

ಮೈಸೂರು, ಏ.20(ಜಿಎ)–ಧಾರವಾಡದ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ಏ.26ರಂದು ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಸಮ್ಮೇಳನ ನಡೆಯಲಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಸ್ಕೃತಿ ಮತ್ತು ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷೆ ಡಾ.ಕೆ.ಲಕ್ಷ್ಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ರಾಜ್ಯದ ವಿವಿಧೆಡೆಯಿಂದ ಸುಮಾರು ಸಾವಿರ ಮಂದಿ ಸರ್ಕಾರಿ ನೌಕರರು ಪಾಲ್ಗೊಂಡು ತಮ್ಮ ಪ್ರತಿಭೆ ಪ್ರದರ್ಶಿಸಲಿದ್ದಾರೆ. ಈ ವೇಳೆ ನೂತನ ಪದಾಧಿಕಾರಿಗಳ ಪದಗ್ರಹಣ, ಸಾಧಕ ಸರ್ಕಾರಿ ನೌಕರರಿಗೆ ಸನ್ಮಾನ ಸಹ ನಡೆಯಲಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಬಿ.ಎನ್.ಪಲ್ಲವಿ ಮಾತನಾಡಿ, ಸರ್ಕಾರಿ ನೌಕರರಲ್ಲಿನ ಪ್ರತಿಭೆ ಅನಾವರಣಕ್ಕೆ ಇದು ಸೂಕ್ತ ವೇದಿಕೆ. ನೌಕರರು ಎದುರಿಸುತ್ತಿರುವ ಒತ್ತಡ ನಿವಾರಣೆಗೆ ಅವಕಾಶ ಕಲ್ಪಿಸುವ ಉದ್ದೇಶವಿದೆ. ಸಾಹಿತ್ಯಾಸಕ್ತರನ್ನು ಒಂದೆಡೆ ಸೇರಿಸುವ ಪ್ರಯತ್ನ ಇದಾಗಿದೆ ಎಂದರು.

ಹಿರಿಯ ಉಪಾಧ್ಯಕ್ಷೆ ಮಮತಾ ಮಾತನಾಡಿ, ಇಂದು ಬಹಳಷ್ಟು ಮಂದಿ ತಮ್ಮ ಮಕ್ಕಳನ್ನು ಶಾಲಾ ಕಾಲೇಜಿಗೆ ಸೇರಿಸಿದರೆ ತಮ್ಮ ಕೆಲಸ ಮುಗಿಯಿತು ಎಂದುಕೊಳ್ಳುತ್ತಾರೆ. ಆದರೆ ಮಕ್ಕಳಿಗೆ ನಾಡು, ನುಡಿ, ಸಂಸ್ಕೃತಿಯ ಅರಿವು ಮೂಡಿಸುವ ಕೆಲಸವನ್ನು ಸಹಾ ತಮ್ಮ ಸಂಘ ಮಾಡುತ್ತಿದೆ. ಕನ್ನಡ ಜಾಗೃತಿ ಅಭಿಯಾನ ಸಹಾ ಹಮ್ಮಿಕೊಂಡಿದೆ. ಕನ್ನಡದ ಅಸ್ಮಿತೆಗೆ ಧಕ್ಕೆ ಬಂದಾಗ ಅದರ ವಿರುದ್ಧ ಧ್ವನಿಯೆತ್ತುತ್ತಿದೆ ಎಂದರು. ಗೋಷ್ಠಿಯಲ್ಲಿ ಗಣೇಶ್ ನಿಲುವಾಗಿಲು, ರಾಘವೇಂದ್ರ ಉಪಸ್ಥಿತರಿದ್ದರು.

ಚೋರನಹಳ್ಳಿಯಲ್ಲಿ ಸರ್ಕಾರಿ ಭೂಮಿ ಕಬಳಿಕೆ ಯತ್ನ

ಈ ಪ್ರಕ್ರಿಯೆ ಬಿಡದಿದ್ದರೆ ತೀವ್ರ ಹೋರಾಟ

ಮೈಸೂರು, ಏ.20(ಜಿಎ)–ಮೈಸೂರು ತಾಲೂಕಿನ ವರುಣ ಹೋಬಳಿ ಚೋರನಹಳ್ಳಿ ಸರ್ವೆ ನಂ.27ರ ಜಮೀನಿನಲ್ಲಿ ರೈತರ ಭೂಮಿ ಕಸಿಯುವ ಯತ್ನ ನಡೆಸಲಾಗುತ್ತಿದೆ. ಈ ಪ್ರಕ್ರಿಯೆ ಕೈಬಿಡದಿದ್ದರೆ ಸಾಮೂಹಿಕ ನಾಯಕತ್ವದ ರೈತ ಸಂಘ ತೀವ್ರ ಹೋರಾಟ ನಡೆಸಲಿದೆ ಎಂದು ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯ ಮಂಜು ಕಿರಣ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸರ್ವೆ ನಂಬರ್‌ನಲ್ಲಿ ಈಗಾಗಲೇ ಸುಮಾರು 9 ಎಕರೆ ಭೂಮಿಯನ್ನು 1950ರಲ್ಲಿಯೇ 6 ಕುಟುಂಬಗಳಿಗೆ ಮಂಜೂರು ಮಾಡಿ, ಕಿಮ್ಮತ್ತು ಸಹಾ ಕಟ್ಟಿಸಿಕೊಳ್ಳಲಾಗಿದೆ. ಹೀಗಿದ್ದರೂ ಈಗ ಇದು ಸರ್ಕಾರಿ ಜಾಗ ಎಂದು ಹೇಳಿಕೊಂಡು ಇವರಿಂದ ಭೂಮಿ ಕಬಳಿಸುವ ಯತ್ನ ನಡೆಸಲಾಗುತ್ತಿದೆ ಎಂದು ಆರೋಪಿಸಿದರು.

1950ರಿಂದಲೂ ಈ ಜಮೀನಿನಲ್ಲಿ ಈ ಕುಟುಂಬಗಳು ಜೀವನ ಕಟ್ಟಿಕೊಂಡಿವೆ. ಒಂದು ವೇಳೆ ಯಾವುದಾದರೂ ಸರ್ಕಾರಿ ಯೋಜನೆ ಜಾರಿಗೊಳಿಸಬೇಕಾದಲ್ಲಿ ಅದೇ ಸರ್ವೆ ನಂಬರ್‌ನಲ್ಲಿರುವ ಇತರೆ 17 ಎಕರೆ ಭೂಮಿ ಬಳಸಿಕೊಳ್ಳಬಹುದಾಗಿದೆ. ಹೀಗಿದ್ದರೂ ಸಹಾ ನಿತ್ಯ ಒಬ್ಬರಲ್ಲ ಮತ್ತೊಬ್ಬರು ಜೆಸಿಬಿ ಮೊದಲಾದವುಗಳೊಡನೆ ಆಗಮಿಸಿ, ಏನಾದರೂ ಕಾಮಗಾರಿಗೆ ಮುಂದಾಗುತ್ತಿದ್ದಾರೆ. ಇವರನ್ನು ವಾಪಸ್ಸು ಕಳಿಸುವುದೇ ದೊಡ್ಡ ಕೆಲಸವಾಗಿಬಿಟ್ಟಿದೆ. ಇದಕ್ಕಾಗಿಯೇ ಹಲವರು ಜಮೀನು ಬಳಿ ಟೆಂಟ್ ಹಾಕಿಕೊಂಡು ಕಾಯಬೇಕಾಗಿ ಬಂದಿದೆ ಎಂದರು.

ತಮಗೆ ಬಂದಿರುವ ಈ ಜಮೀನು ಕಸಿಯುವ ಯತ್ನದ ವಿರುದ್ಧ ಈ ಹಿಂದೆಯೇ ಇವರು ನ್ಯಾಯಾಲಯದ ಮೊರೆ ಹೋದಾಗ ನ್ಯಾಯಾಲಯ ಸಹಾ ಇವರ ಪರವಾಗಿ ಆದೇಶ ನೀಡಿದೆ. ಈ ಎಲ್ಲ ದಾಖಲಾತಿಗಳನ್ನು ಪ್ರಾದೇಶಿಕ ಆಯುಕ್ತರಿಗೆ ನೀಡಿದ್ದು, ಅವರು ವರದಿ ಸಲ್ಲಿಸುವಂತೆ ತಹಶೀಲ್ದಾರರಿಗೆ ಸೂಚಿಸಿದ್ದಾರೆ. ಒಂದು ವೇಳೆ ವರದಿ ವ್ಯತಿರಿಕ್ತವಾಗಿ ಬಂದಲ್ಲಿ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಗ್ರಾಮದ ಚಂದ್ರಮ್ಮ, ಮಹದೇವಸ್ವಾಮಿ, ಮಹದೇವಪ್ಪ, ಮಂಜು ಉಪಸ್ಥಿತರಿದ್ದರು.

ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ ಸಭೆ...



ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ ಸಭೆಯಲ್ಲಿ ಆಕಾಶವಾಣಿ ಕಲಾವಿದೆ ಕಣ್ಣೂರು ಭಾಗ್ಯಲಕ್ಷ್ಮಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಭೆಯಲ್ಲಿ ಸಮಾಜದ ಸದಸ್ಯರಿಗೆ ಅರ್ಥಪೂರ್ಣವಾದ ಹಾಡುಗಳನ್ನು ಹೇಳಿಕೊಟ್ಟು ಅವರು ಕೂಡ ಸುಶ್ರಾವ್ಯವಾಗಿ ಲಾವಣಿ ಹಾಡುಗಳನ್ನು ಹಾಡಿ ಮನರಂಜಿಸಿದರು. ಭಾಗ್ಯಲಕ್ಷ್ಮಿ ಅವರಿಗೆ ಸಮಾಜದ ವತಿಯಿಂದ ಕಿರು ಸನ್ಮಾನ ಮಾಡಲಾಯಿತು. ಉಪಾಧ್ಯಕ್ಷೆ ವಿಜಯ ಮಂಜುನಾಥ, ಪದಾಧಿಕಾರಿಗಳಾದ ಮಂಗಳ ಮಂಜುನಾಥ್, ಚಾಂದಿನಿ, ಸುವರ್ಣ ಗಣೇಶ್, ಇಂದಿರಾ, ಜಯಶ್ರೀ ರಮೇಶ್, ಶಾರದ, ಚಂದ್ರಕಲಾ, ಮಮತಾ ಮಾಲತಿ, ಉಪಸ್ಥಿತರಿದ್ದರು.

ಶಾಸಕ ಸತೀಶ್ ಸೈಲ್ ಪುತ್ರಿ ಈಗ 'ಮಿಸ್ ಇಂಡಿಯಾ'



ಬೆಂಗಳೂರು: ಕಾರವಾರ ಶಾಸಕ ಸತೀಶ್ ಸೈಲ್ ಪುತ್ರಿ ಸಾಧ್ವಿ ಸತೀಶ್ ಸೈಲ್ 'ಮಿಸ್ ಇಂಡಿಯಾ' ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

ಒಡಿಶಾದ ಭುವನೇಶ್ವರದಲ್ಲಿರುವ ಕಳಿಂಗ ಇನ್ಸಿಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿಯಲ್ಲಿ ನಡೆದ 61ನೇ ಫೆಮಿನಾ ಮಿಸ್ ಇಂಡಿಯಾ ಗ್ರ್ಯಾಂಡ್ ಫಿನಾಲೆಯಲ್ಲಿ ಗೋವಾವನ್ನು ಪ್ರತಿನಿಧಿಸಿದ್ದ ಸಾಧ್ವಿ ಸತೀಶ್ ಸೈಲ್ ವಿಜೇತರಾಗಿದ್ದಾರೆ.

ಅಂತಿಮ ಸುತ್ತಿಗೆ ತಲುಪಿದ್ದ ಮೂವರು ಸ್ಪರ್ಧಿಗಳಲ್ಲಿ ಸಾಧ್ವಿ ಸತೀಶ್ ಸೈಲ್ ವಿಜೇತರಾದರು. ಇವರು ಮಾಡೆಲ್ ಮಾತ್ರವಲ್ಲದೇ ಸಾಮಾಜಿಕ ಕಾರ್ಯಗಳಲ್ಲಿಯೂ ತೊಡಗಿಸಿಕೊಂಡಿದ್ದಾರೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಮಿಸ್ ಇಂಡಿಯಾ ಕಿರೀಟದೊಂದಿಗೆ ಆಗಮಿಸಿದ ಸಾಧ್ವಿಗೆ ತವರಿನಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಕಳೆದ ಆವೃತ್ತಿಯ ಫೆಮಿನಾ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ನಿಕಿತಾ ಪೋರ್ವಾಲ್ ಅವರು 60ನೇ ಫೆಮಿನಾ ಮಿಸ್ ಇಂಡಿಯಾ ಕಿರೀಟ ಧರಿಸಿದ್ದರು. ಸದ್ಯ ಇವರು 2027ರ ಮಿಸ್ ವರ್ಲ್ಡ್ ಸ್ಪರ್ಧೆಗೆ ಸಿದ್ಧತೆ ನಡೆಸುತ್ತಿದ್ದು, ಭಾರತ ಪ್ರತಿನಿಧಿಸಲು ತಯಾರಾಗುತ್ತಿದ್ದಾರೆ.

ಕಾಂಗ್ರೆಸ್‌ನವರು ಹಣ ಲೂಟಿ ಮಾಡಿ ವಿದೇಶದಲ್ಲಿ ಹೂಡಿಕೆ ಮಾಡುತ್ತಾರೆ



ಬೆಂಗಳೂರು, ಏ.20(ಕೆಎಂಶಿ)–ರಾಜಕಾರಣಿಗಳು, ಅದರಲ್ಲೂ ವಿಶೇಷವಾಗಿ ಕೆಲವು ಕಾಂಗ್ರೆಸ್ ನಾಯಕರು ಬಿಟ್ ಕಾಯಿನ್ ಮೂಲಕ ವಿದೇಶಗಳಲ್ಲಿ ಹೂಡಿಕೆ ಮಾಡಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಇಂದಿಲ್ಲಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಡಿಎ ಅಧ್ಯಕ್ಷ ಹಾಗೂ ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್ ಸೇರಿದಂತೆ ಕೆಲವು ಕಾಂಗ್ರೆಸ್ ನಾಯಕರ ಮನೆ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ.) ದಾಳಿ ನಡೆಸಿದೆ, ಕಾಂಗ್ರೆಸ್‌ನವರು ಆರ್ಥಿಕ ಅಪರಾಧ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಬಿಟ್ ಕಾಯಿನ್ ಹೂಡಿಕೆ ಸಹ ಆರ್ಥಿಕ ಅಪರಾಧ, ಕೆಲವು ಸುಳಿವು ಆಧರಿಸಿ ದಾಳಿ ನಡೆದಿದೆ, ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕು, ನಿಖರ ಮಾಹಿತಿ ಇಲ್ಲದೆ ದಾಳಿ ನಡೆಯದು ಎಂದರು.

ದಲಿತರಿಗೆ ಒಳ ಮೀಸಲಾತಿ ಸಂಬಂಧ ಮಹತ್ವದ ನಿರ್ಧಾರಕ್ಕೆ ಏ.24ಕ್ಕೆ ವಿಶೇಷ ಸಂಪುಟ ಸಭೆ

ಬೆಂಗಳೂರು, ಏ.20(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಸವಾಲಾಗಿರುವ ದಲಿತರಿಗೆ ಒಳ ಮೀಸಲಾತಿ ಕಲ್ಪಿಸುವ ವಿಚಾರದಲ್ಲಿ ಮಹತ್ವದ ತೀರ್ಮಾನ ಕೈಗೊಳ್ಳಲು ಏಪ್ರಿಲ್ 24ರಂದು ವಿಶೇಷ ಸಚಿವ ಸಂಪುಟ ಸಭೆ ನಡೆಯಲಿದೆ.

ಮೀಸಲಾತಿ ಪ್ರಮಾಣ ಶೇಕಡ 50 ಮೀರದಂತೆ, ಅದರ ವ್ಯಾಪ್ತಿಯೊಳಗೆ ದಲಿತರಿಗೆ ಒಳ ಮೀಸಲಾತಿ ಕಲ್ಪಿಸಲು ಸರ್ಕಾರ ಮುಂದಾಗಿದೆ.

ಎಡಗೈ ಗುಂಪು ತಮಗೆ ಶೇಕಡ 6ರಷ್ಟು ಒಳಮೀಸಲಾತಿ ಕಲ್ಪಿಸಬೇಕೆಂದು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ನೇತೃತ್ವದಲ್ಲಿ ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಒಳಗೊಂಡಂತೆ ತಜ್ಞರ ತಂಡ ರಚಿಸಲಾಗಿತ್ತು.

ಈ ತಂಡದ ವರದಿ ಆಧಾರವಾಗಿಟ್ಟುಕೊಂಡು ಎಡಗೈ–ಬಲಗೈ ಸೇರಿದಂತೆ ದಲಿತ ಸಮುದಾಯದ 101 ಉಪಜಾತಿಗಳಿಗೆ ಶೇಕಡಾ 15 ಮೀಸಲಾತಿಯಲ್ಲೇ ಹಂಚಿಕೆ ಮಾಡಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಇದರನ್ವಯ ಎಡಗೈ ಮತ್ತು ಬಲಗೈ ಸಮುದಾಯಕ್ಕೆ ತಲಾ ಶೇ.5.29, ಬೋವಿ, ಲಂಬಾಣಿ, ಕೊರವ, ಕೊರಮ ಸಮಾಜದವರಿಗೆ ಶೇ.4.42 ಮೀಸಲಾತಿ ನಿಗದಿಪಡಿಸಿದೆ. ವರದಿ ಆಧಾರದ ಮೇಲೆ ವಿಶೇಷ ಸಂಪುಟ ಸಭೆ ಚರ್ಚೆ ನಡೆಸಿ ಅನುಷ್ಠಾನಕ್ಕೆ ತರಲು ಸಿದ್ದರಾಮಯ್ಯ ಮುಂದಾಗಿದ್ದಾರೆ.

ನಿರುದ್ಯೋಗ ಸಮಸ್ಯೆ ನಿವಾರಣೆಯಲ್ಲಿ ಸರ್ಕಾರ ವಿಫಲವಾಗಿದೆ ಎಂಬುದಾಗಿ ಯುವಜನರು ಪ್ರತಿಭಟನೆ ನಡೆಸಿದ ವೇಳೆ, 56,432 ಹುದ್ದೆಗಳನ್ನು ಮೊದಲ ಹಂತದಲ್ಲಿ ಭರ್ತಿ ಮಾಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದರು.

ಒಳ ಮೀಸಲಾತಿ ಸಮಸ್ಯೆ ಬಗೆಹರಿಯದೆ ನೇಮಕಾತಿ ಹಾಗೂ ಬಡ್ತಿ ಹಾಗೆಯೇ ಉಳಿದಿತ್ತು.

ಕಳೆದ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಸಂಬಂಧ ಸುದೀರ್ಘ ಚರ್ಚೆ ನಡೆಸಲಾಯಿತಾದರೂ ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಹಿನ್ನೆಲೆಯಲ್ಲಿ ಯಾವುದೇ ನಿರ್ಧಾರ ಕೈಗೊಂಡಿರಲಿಲ್ಲ.

ಎಡ ಸಮುದಾಯದ ಪಟ್ಟು: ಅಂದಿನ ಸಭೆಯಲ್ಲಿ ಎಡಗೈ ಸಮುದಾಯಕ್ಕೆ ಸೇರಿದ ಸಚಿವ ಮುನಿಯಪ್ಪ, ಸರ್ಕಾರ ಮೊದಲು ಒಳ ಮೀಸಲಾತಿ ಬಗ್ಗೆ ನಿರ್ಧರಿಸಲಿ, ನಮ್ಮ ಸಮುದಾಯಕ್ಕೆ ಎಷ್ಟು ಮೀಸಲಾತಿ ನೀಡುವಿರೋ ಅಷ್ಟು ನಿಗದಿಪಡಿಸಿ ಆದೇಶ ಮಾಡಿ.

ಈ ಸಮಸ್ಯೆ ಬಗೆಹರಿಯದೆ ನೇಮಕಾತಿ ಮತ್ತು ಬಡ್ತಿ ವಿಚಾರದಲ್ಲಿ ತೀರ್ಮಾನ ಕೈಗೊಳ್ಳಲಾಗುತ್ತಿಲ್ಲ, ಎಲ್ಲದಕ್ಕೂ ಮಿಗಿಲಾಗಿ ನಮ್ಮ ಸಮುದಾಯದವರು ತೀರ್ಮಾನ ಕೈಗೊಳ್ಳಲಾಗದಿದ್ದರೆ, ಸರ್ಕಾರದಿಂದ ಹೊರಬನ್ನಿ ಎಂಬ ಪಟ್ಟು ಹಿಡಿದಿದ್ದಾರೆ.

ಮುಖ್ಯಮಂತ್ರಿ ಅವರು, ತಕ್ಷಣ ಒಂದು ತೀರ್ಮಾನ ಕೈಗೊಂಡು ಸರ್ಕಾರದ ನಿಲುವು ಪ್ರಕಟಿಸಬೇಕು ಎಂಬುದಾಗಿ ಸಭೆಯಲ್ಲಿ ಆಗ್ರಹಿಸಿದಾಗ, ಉಪಚುನಾವಣೆ ನಂತರ ವಿಶೇಷ ಸಂಪುಟ ಸಭೆ ಕರೆದು ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು.

ಸುಪ್ರೀಂಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ದಲಿತರಿಗೆ ಒಳ ಮೀಸಲಾತಿ ಕಲ್ಪಿಸಲು ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಸಮಿತಿ ರಚಿಸಲಾಗಿತ್ತು, ಅದು ಮೀಸಲಾತಿಯನ್ನು ಶೇಕಡ 56ಕ್ಕೆ ಹೆಚ್ಚಿಸಿ ದಲಿತರಿಗೆ ಶೇ.17ರಷ್ಟು ಕಲ್ಪಿಸುವಂತೆ ಶಿಫಾರಸು ಮಾಡಿತು.

ಮೀಸಲಾತಿ ಪ್ರಮಾಣ ಶೇ.50 ಮೀರದಂತೆ ತೀರ್ಮಾನ ಕೈಗೊಳ್ಳಬೇಕು ಎಂಬ ಆದೇಶದ ಹಿನ್ನೆಲೆಯಲ್ಲಿ ಸರ್ಕಾರ ಮತ್ತೆ ಕಸರತ್ತು ನಡೆಸಿದೆ.

ಮೈಸೂರು ಮಿತ್ರ ಮಂಗಳವಾರ 21 ಏಪ್ರಿಲ್ 2026

ಕೆರೆಯಲ್ಲಿ ಸ್ನಾನ ಮಾಡಲು ಹೋಗಿ ಕಾರ್ಮಿಕನ ಸಾವು

ವಿರಾಜಪೇಟೆ: ಬಿಸಿಲಿನ ತಾಪಕ್ಕೆ ಕಾರ್ಮಿಕನೋರ್ವ ಕೆರೆಯಲ್ಲಿ ಸ್ನಾನ ಮಾಡಲು ಹೋಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ತಾಲೂಕಿನ ವಿ ಬಾಡಗ ಗ್ರಾಮದ ತೋಟದ ಲೈನ್‌ಮನೆಯೊಂದರಲ್ಲಿ ಕೆಲ ದಿನಗಳಿಂದ ವಾಸವಿದ್ದ ಗಾರೆ ಕೆಲಸಗಾರ ಎರವರ ಮುತ್ತ (38) ಎಂಬುವರೆ ಮೃತಪಟ್ಟವರಾಗಿದ್ದಾರೆ.

ಕಳೆದ ಭಾನುವಾರ ಬೆಳಿಗ್ಗೆ 11-30ರ ಸಮಯದಲ್ಲಿ ಮನೆಯ ಪಕ್ಕದಲ್ಲಿರುವ ಕೆ.ರವಿ ಎಂಬುವರಿಗೆ ಸೇರಿದ ಕೆರೆ ಯೊಂದರಲ್ಲಿ ಸ್ನಾನ ಮಾಡಲು ಹೋಗಿದ್ದಾರೆ. ನೀರಿಗೆ ಇಳಿದ ಕೆಲ ಕ್ಷಣಗಳಲ್ಲೇ ಮುಳುಗಿದ್ದರಿಂದ ಮೇಲೆ ಬರಲು ಸಾಧ್ಯ ವಾಗಿಲ್ಲ. ಅಕ್ಕಪಕ್ಕದವರಿಗೆ ಈ ವಿಷಯ ಗಮನಕ್ಕೆ ಬಂದ ಕೂಡಲೇ ಪೊಲೀಸರ ಸಹಕಾರದೊಂದಿಗೆ ಮುಳುಗು ತಜ್ಞರನ್ನು ಕರೆಸಿದರೂ ಪ್ರಯೋಜನವಾಗಿಲ್ಲ. ನಂತರ ಅಗ್ನಿ ಶಾಮಕದಳದ ಸಿಬ್ಬಂದಿ ಬಂದು ಹುಡುಕಾಟ ನಡೆಸಿದರೂ ಮೃತದೇಹ ಪತ್ತೆಯಾಗಿಲ್ಲ. ಮರುದಿನ ಇಂದು ಬೆಳಿಗ್ಗೆ ಕೆರೆಯಲ್ಲಿ ಎರವರ ಮುತ್ತನ ಮೃತದೇಹ ನೀರಿನಲ್ಲಿ ತೇಲುತ್ತಿರುವುದು ಕಂಡು ಬಂದಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮೃತನ ಪತ್ನಿ ಮಂಜುಳ ನೀಡಿದ ದೂರನ್ನು ದಾಖಲಿಸಿದ ಪೊಲೀಸರು ಅಗ್ನಿಶಾಮಕದಳ ಸಿಬ್ಬಂದಿಗಳ ಸಹಕಾರದೊಂದಿಗೆ ಮೃತದೇಹವನ್ನು ನೀರಿನಿಂದ ಹೊರತೆಗೆದು ಸರಕಾರಿ ಆಸ್ಪತ್ರೆಯಲ್ಲಿ ಶವ ಪರಿಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಬಿಸಿಲಿನ ಬೇಗೆಗೆ ಕ್ಷೀಣಗೊಂಡ ಕಾವೇರಿ ನೀರಿನ ಹರಿವು

ದುಬಾರೆಯಲ್ಲಿ ರ್‍ಯಾಫ್ಟಿಂಗ್ ಜಲಕ್ರೀಡೆ ಸ್ಥಗಿತ

ಮಡಿಕೇರಿ,ಏ.20–ಕೊಡಗಿನ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾದ ದುಬಾರೆಯಲ್ಲಿ ಕಾವೇರಿ ನದಿ ನೀರಿನ ಹರಿವು ಕ್ಷೀಣಿಸಿರುವ ಹಿನ್ನೆಲೆಯಲ್ಲಿ ರಿವರ್ ರ್‍ಯಾಫ್ಟಿಂಗ್ ಕ್ರೀಡೆಯನ್ನು ಸ್ಥಗಿತಗೊಳಿಸಲಾಗಿದೆ. ಪ್ರವಾಸಿಗರ ಮನಕ್ಕೆ ಮುದ ನೀಡುತ್ತಿದ್ದ ರ್‍ಯಾಫ್ಟಿಂಗ್, ಜಲಕ್ರೀಡೆ ಸ್ಥಗಿತಗೊಂಡಿರುವ ಕಾರಣ ರ್‍ಯಾಫ್ಟಿಂಗ್ ಬೋಟ್‌ಗಳು ದಡ ಸೇರಿದ್ದು, ಪ್ರವಾಸಿಗರನ್ನು ನಿರಾಸೆಗೊಳಿಸಿದೆ.



ನದಿದಡದಲ್ಲಿ ವಿಶ್ರಾಂತಿ ಪಡೆಯುತ್ತಿರುವ ರ್‍ಯಾಫ್ಟಿಂಗ್ ಬೋಟ್‌ಗಳು

ಪ್ರವಾಸಿಗರು ಅತ್ಯಧಿಕ ಸಂಖ್ಯೆಯಲ್ಲಿ ದುಬಾರೆಗೆ ಭೇಟಿ ನೀಡುತ್ತಾರೆ. ಕಾವೇರಿಯಲ್ಲಿ ನೀರಿದ್ದರೆ ಮಾತ್ರ ದುಬಾರೆ ನೋಡಲು ಚೆಂದವಾಗಿ ಕಾಣುತ್ತದೆ. ಆದರೆ ಸುಡುವ ಬಿಸಿಲಿಗೆ ನೀರಿನ ಹರಿವು ಕ್ಷೀಣವಾಗಿರುವುದರಿಂದ ಪ್ರವಾಸಿಗರ ಸಂಖ್ಯೆಯೂ ಕುಸಿತಗೊಂಡಿದೆ. ಈ ಹಿನ್ನೆಲೆಯಲ್ಲಿ ವ್ಯಾಪಾರೋದ್ಯಮವೂ ಕುಂಠಿತವಾಗಿದೆ. ದುಬಾರೆ ರಿವರ್ ರ್‍ಯಾಫ್ಟಿಂಗ್ ಅನ್ನು ನಂಬಿಕೊಂಡೇ ಸುಮಾರು 50ಕ್ಕೂ ಅಧಿಕ ಮಂದಿ ರಿವರ್ ರ್‍ಯಾಫ್ಟಿಂಗ್ ಮಾಲೀಕರು, 80 ಮಂದಿ ಆಪರೇಟರ್ಸ್ ಹಾಗೂ ವಿವಿಧ ಬಗೆಯ ತಿನಿಸುಗಳು, ಹಣ್ಣು ಹಂಪಲು, ತಂಪು ಪಾನೀಯ ಅಂಗಡಿಗಳನ್ನಿಟ್ಟುಕೊಂಡು ಸುಮಾರು 50ರಿಂದ 60 ಮಂದಿ ಜೀವನ ಸಾಗಿಸುತ್ತಿದ್ದರು.

ಜೀವ ಕಳೆಯಿಂದ ಮೈದುಂಬಿರುತ್ತಿದ್ದ ಕಾವೇರಿ ನದಿಯ ಒಡಲು ನೀರಿನ ಕೊರತೆಯಿಂದ ಬತ್ತಿ ಹೋಗುತ್ತಿದ್ದು, ಬಂಡೆಕಲ್ಲುಗಳು ಗೋಚರಿಸುತ್ತಿವೆ. ಪ್ರವಾಸಿಗರು ಕೂಡ ಬೋಟ್ ಸಹಾಯವಿಲ್ಲದೆ ನದಿಯ ಮತ್ತೊಂದು ದಡದಲ್ಲಿರುವ ಸಾಕಾನೆ ಶಿಬಿರಕ್ಕೆ ನದಿ ದಾಟಿಕೊಂಡು ಸಾಗುತ್ತಿದ್ದಾರೆ. ಏಪ್ರಿಲ್ ತಿಂಗಳಾಂತ್ಯ ಮತ್ತು ಮೇ ತಿಂಗಳಲ್ಲಿ ಮತ್ತಷ್ಟು ಬಿಸಿಲು ಕಂಡು ಬಂದಲ್ಲಿ ಕಾವೇರಿ ನದಿಯ ಹರಿವು ಸಂಪೂರ್ಣ ಸ್ಥಗಿತವಾಗುವ ಲಕ್ಷಣಗಳೂ ಕಂಡು ಬರುತ್ತಿದೆ. ನಾಪೋಕ್ಲು ಭಾಗದಲ್ಲಿ ಒಂದಷ್ಟು ಉತ್ತಮ ಮಳೆಯಾಗುತ್ತಿರುವ ಕಾರಣ ಕಾವೇರಿ ನದಿಯಲ್ಲಿ ಅಲ್ಪ ಪ್ರಮಾಣದ ನೀರಿನ ಹರಿವು ಕಂಡು ಬರುತ್ತಿದೆ. ಏಪ್ರಿಲ್ ತಿಂಗಳ ಬಿಸಿಲಿನ ಝಳಕ್ಕೆ ದುಬಾರೆಯಲ್ಲಿ ನೀರಿನ ಪ್ರಮಾಣ ಕುಸಿತ ಕಂಡಿದ್ದು, ಮೇ ತಿಂಗಳಲ್ಲಿ ಮಳೆ ಬಾರದಿದ್ದಲ್ಲಿ ಕಾವೇರಿ ನದಿ ಬತ್ತುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿದೆ. ನದಿಯ ಆಳ ಪ್ರದೇಶದಲ್ಲಿ ನೀರು ಸಂಗ್ರಹವಾಗಿದ್ದು, ನೀರಿಗೆ ಇಳಿಯದಂತೆ ಅರಣ್ಯ ಇಲಾಖೆ ರಕ್ಷಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ

ಗ್ರಾಪಂ ಪೌರಕಾರ್ಮಿಕ ಆತ್ಮಹತ್ಯೆ

ನಾಪೋಕ್ಲು, ಏ.20–ಸ್ಥಳೀಯ ಗ್ರಾಮ ಪಂಚಾಯಿತಿಯ ಪೌರಕಾರ್ಮಿಕ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣವೊಂದು ನಡೆದಿದೆ.



ಗುರುವಾರ ತಡರಾತ್ರಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ವಿಶ್ವನಾಥ್(33) ಅವರನ್ನು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಸಂಜೆ ಮೃತಪಟ್ಟಿದ್ದಾರೆ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಮೂಲತಃ ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ನಿವಾಸಿಯಾದ ವಿಶ್ವನಾಥ್ ಹಲವು ವರ್ಷಗಳಿಂದ ಗ್ರಾಪಂ ನಿರ್ಮಿಸಿಕೊಟ್ಟ ಮನೆಯಲ್ಲಿ ಪತ್ನಿ ಹಾಗೂ ಎರಡು ಮಕ್ಕಳೊಂದಿಗೆ ವಾಸವಿದ್ದು, ಗ್ರಾಪಂನಲ್ಲಿ ತ್ಯಾಜ್ಯ ಸಾಗಾಟ ಮಾಡುವ ಟ್ರ್ಯಾಕ್ಟರ್ ಚಾಲಕನಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಮೃತರ ಅಂತಿಮ ಸಂಸ್ಕಾರ ಅವರ ಹುಟ್ಟೂರಾದ ಮಿರ್ಲೆ ಗ್ರಾಮದಲ್ಲಿ ಸೋಮವಾರ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಈ ಬಗ್ಗೆ ಇಲ್ಲಿಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಕಾನೂನಿನ ಕ್ರಮ ಕೈಗೊಂಡಿದ್ದಾರೆ

ನಾಪತ್ತೆಯಾಗಿದ್ದ ಪ್ರವಾಸಿಗನ ಶವ ಪತ್ತೆ

ಮಡಿಕೇರಿ, ಏ.20–ಉಡುಪಿ ಜಿಲ್ಲೆಯ ಕುಂದಾಪುರದಿಂದ ಸಂಬಂಧಿಕರೊಂದಿಗೆ ದರ್ಗಾ ಪ್ರವಾಸಕ್ಕೆಂದು ತೆರಳಿ ನಾಪೋಕ್ಲು ಬಳಿಯ ಎಮ್ಮೆಮಾಡು ದರ್ಗಾದಲ್ಲಿ ನಾಪತ್ತೆಯಾಗಿದ್ದ ವ್ಯಕ್ತಿಯ ಮೃತದೇಹ ಗ್ರಾಮದ ಕಾವೇರಿ ನದಿಯ ದಡದಲ್ಲಿ ಪತ್ತೆಯಾಗಿದೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮಾವಿನಕಟ್ಟೆ ಕುರ್ಕಂಜೆ ಗ್ರಾಮದ ನಿವಾಸಿ ಹಸೈನಾರ್ ಸಾಹೇಬ್(65) ಮೃತ ದುರ್ದೈವಿಯಾಗಿದ್ದಾರೆ. ಮೃತ ಹಸೈನಾರ್ ಏ. 13ರಂದು ಕುಂದಾಪುರದಿಂದ ಸಂಬಂಧಿಕರೊಂದಿಗೆ ದರ್ಗಾ ಪ್ರವಾಸಕ್ಕೆ ತೆರಳಿದ್ದರು. ಏ.15ರಂದು ರಾತ್ರಿ 11.30ಗಂಟೆಗೆ ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ಎಮ್ಮೆಮಾಡು ಗ್ರಾಮಕ್ಕೆ ತಲುಪಿದ್ದರು.ಅಲ್ಲಿ ರೂಮ್ ಸಿಗದ ಕಾರಣ ಮಸೀದಿಯ ಆವರಣದಲ್ಲಿ ಹಸೈನಾರ್ ಮಲಗಿದ್ದರು. ರಾತ್ರಿ ಮಲಗಿದ್ದ ಜಾಗದಲ್ಲಿ ಹಸೈನಾರ್ ಕಾಣದಿದ್ದಾಗ ಸಂಬಂಧಿಕರು ಹುಡುಕಾಡಿ, ಮಸೀದಿಯ ಸಿಸಿ ಕ್ಯಾಮೆರಾವನ್ನು ಪರಿಶೀಲಿಸಿದಾಗ ಮುಖ್ಯ ದ್ವಾರದ ಗೇಟಿನ ಮುಖಾಂತರ ಹಸೈನಾರ್ ಹೊರ ತೆರಳುವ ದೃಶ್ಯ ಸೆರೆಯಾಗಿತ್ತು.

ಮಾನಸಿಕ ಅಸ್ವಸ್ಥರಂತೆ ವರ್ತಿಸುತ್ತಿದ್ದ ಹಸೈನಾರ್ ಪತ್ತೆಗೆ ಎಮ್ಮೆಮಾಡು ಗ್ರಾಮಸ್ಥರು ಸುತ್ತಮುತ್ತಲಿನ ಪ್ರದೇಶದಲ್ಲಿ ಹುಡುಕಾಡಿದರೂ ಪತ್ತೆಯಾಗಿರಲಿಲ್ಲ. ಏ.16ರಂದು ಸಂಬಂಧಿಕರು ನಾಪೋಕ್ಲು ಠಾಣೆಗೆ ಕಾಣೆಯಾಗಿರುವ ಬಗ್ಗೆ ದೂರು ನೀಡಿದ್ದರು. ಪೊಲೀಸರು ನಾಪತ್ತೆ ಪ್ರಕರಣ ದಾಖಲಿಸಿ ಹೈಸೈನಾರ್ ಪತ್ತೆಗೆ ಶೋಧ ಕಾರ್ಯ ಕೈಗೊಂಡಿದ್ದರು. ಅದರಂತೆ ಎಮ್ಮೆಮಾಡು ಗ್ರಾಮಸ್ಥರು ಹಾಗೂ ಪೊಲೀಸರು ನಡೆಸಿದ ಶೋಧ ಕಾರ್ಯದಲ್ಲಿ ಗ್ರಾಮದ ಕಾವೇರಿ ನದಿ ದಡದ ಪೊದೆಯಲ್ಲಿ ಹಸೈನಾರ್ ಮೃತಪಟ್ಟ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ಘಟನೆ ಸಂಬಂಧ ನಾಪೋಕ್ಲು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ತಂಡಕ್ಕೆ ಪ್ರಥಮ ಬಹುಮಾನ

ನಾಪೋಕ್ಲು, ಏ.20– ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ತಂಡ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪಡೆದುಕೊಂಡಿದೆ.

ಅರೆಭಾಷೆ ಗೌಡ ಸ್ಪೋರ್ಟ್ಸ್ ಅಕಾಡೆಮಿ ವತಿಯಿಂದ ಹತ್ತು ಕುಟುಂಬ ಹದಿನೆಂಟು ಗೋತ್ರದ ಅರೆಭಾಷೆ ಗೌಡ ಜನಾಂಗ ಬಾಂಧವರಿಗಾಗಿ ಮಡಿಕೇರಿ ನಗರದ ಗಾಂಧಿ ಮೈದಾನದಲ್ಲಿ ಕ್ರೀಡಾ ಹಬ್ಬವನ್ನು ಆಯೋಜಿಸಲಾಗಿತ್ತು.



ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪಡೆದುಕೊಂಡ ಚೇರಂಬಾಣೆ ಗೌಡ ಮಹಿಳಾ ಒಕ್ಕೂಟ

ಈ ಕ್ರೀಡಾಕೂಟದಲ್ಲಿ ಮಹಿಳೆಯರ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ತಂಡ ಪ್ರಥಮ ಬಹುಮಾನವನ್ನು ಮುಡಿಗೇರಿಸಿಕೊಂಡು ಆಕರ್ಷಕ ಟ್ರೋಫಿಯೊಂದಿಗೆ ಹದಿನೈದು ಸಾವಿರ ರೂಪಾಯಿ ನಗದು ಬಹುಮಾನವನ್ನು ತಂಡ ಪಡೆದುಕೊಂಡಿತು.

ಉಪ ಕಾರಾಗೃಹದ ಒಳಗೆ ಗಾಂಜಾ, ಮೊಬೈಲ್ ಎಸೆದು ಪರಾರಿ

ಜೈಲಾಧಿಕಾರಿಯಿಂದ ಪಶ್ಚಿಮ ಠಾಣೆ ಪೊಲೀಸರಿಗೆ ದೂರು

ಮಂಡ್ಯ,ಏ.20– ಮಂಡ್ಯ ಉಪಕಾರಾಗೃಹದಲ್ಲಿ ಗಾಂಜಾ ಹಾಗೂ ಮೊಬೈಲ್ ಸಿಕ್ಕಿದ್ದು, ಅಪರಿಚಿತ ದುಷ್ಕರ್ಮಿಗಳು ಜೈಲಿನ ಹೊರ ಭಾಗದಿಂದ ಒಳಾವರಣಕ್ಕೆ ಎಸೆದು ಹೋಗಿದ್ದಾರೆ ಎಂದು ಜೈಲಾಧಿಕಾರಿಗಳು ಪೊಲೀಸರಿಗೆ ದೂರು ನೀಡಿದ್ದಾರೆ.

ಚಾಮುಂಡೇಶ್ವರಿ ನಗರದ ಬಡಾವಣೆಯ ಉಪಕಾರಾಗೃಹದಲ್ಲಿ ಶನಿವಾರ ಬೆಳಿಗ್ಗೆ 8.40ರಿಂದ 9ರ ಸಮಯದಲ್ಲಿ ಅಪರಿಚಿತ ದುಷ್ಕರ್ಮಿಗಳಿಬ್ಬರು ಬೈಕ್‌ನಲ್ಲಿ ಬಂದು ಕಾರಾಗೃಹದ ಮುಖ್ಯಗೋಡೆ ಒಳಭಾಗಕ್ಕೆ ವಸ್ತುಗಳನ್ನು ಎಸೆದು ಹೋಗಿದ್ದಾರೆ.

ಜೈಲಿನ ಆವರಣಕ್ಕೆ ವಸ್ತು ಬಂದು ಬಿದ್ದಿದ್ದನ್ನು ಸಿಸಿ ಟಿವಿ ದೃಶ್ಯಾವಳಿಗಳಲ್ಲಿ ಪರಿಶೀಲನೆ ನಡೆಸಿದಾಗ ಆ ವಸ್ತುವನ್ನು ಸೆಲ್ ನಂ.4ರಲ್ಲಿರುವ ನಾಗ ಆಲಿಯಾಸ್ ಹಂದಿ ನಾಗ ಬಂದು ತೆಗೆದುಕೊಂಡು ಹೋಗುತ್ತಿರುವುದು ಸಿಸಿ ಟಿವಿ ದೃಶ್ಯಗಳಲ್ಲಿ ಕಂಡು ಬಂದಿದೆ. ತಕ್ಷಣ ಕಾರ್ಯಪ್ರವೃತ್ತರಾದ ಜೈಲಿನ ಅಧಿಕಾರಿ ಮತ್ತು ಸಿಬ್ಬಂದಿ ನಾಗ ಆಲಿಯಾಸ್ ಹಂದಿ ನಾಗ ಇರುವ ಸೆಲ್ ನಂ.4ಕ್ಕೆ ಹೋಗಿ ತಪಾಸಣೆ ಮಾಡಿದಾಗ ಕಪ್ಪು ಟೇಪ್‌ನಿಂದ ಸುತ್ತಿದ್ದ ಬಾಲ್ ದೊರೆತಿದೆ.

ಅದನ್ನು ತೆರೆದು ಪರಿಶೀಲಿಸಲಾಗಿ ಅದರಲ್ಲಿ ಕಪ್ಪು ಬಣ್ಣದ ಒಂದು ಮೊಬೈಲ್ ಮತ್ತು ಗಾಂಜಾ ರೀತಿಯ ವಸ್ತು ಸುಮಾರು 10 ಗ್ರಾಂ ಸಿಕ್ಕಿದೆ ಎಂದು ಜೈಲು ಅಧಿಕಾರಿ ಪರಿಮಾನಂದ ಹರವಾಳ ಅವರು ಪಶ್ಚಿಮ ಠಾಣೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ವಿಚಾರಣೆ ಆರಂಭಿಸಿದ್ದು, ಜೈಲಿನ ಒಳಭಾಗಕ್ಕೆ ಬಾಲ್ ರೀತಿಯಲ್ಲಿ ಸುತ್ತಿದ್ದ ಗಾಂಜಾ ಮತ್ತು ಮೊಬೈಲ್‌ನ್ನು ಯಾರು ತಲುಪಿಸಿದ್ದರು ಎಂಬುದರ ಬಗ್ಗೆ ತನಿಖೆ ಕೈಗೊಂಡಿದ್ದಾರೆ.

ವಿಶ್ವದ ಎಲ್ಲಾ ಸಮಸ್ಯೆಗಳಿಗೂ ಬಸವಣ್ಣನವರ ವಚನ ಸಂದೇಶಗಳು ಪರಿಹಾರ : ಡಿಸಿ

ಮಂಡ್ಯದಲ್ಲಿ ಜಿಲ್ಲಾಡಳಿತದಿಂದ ಬಸವೇಶ್ವರ ಜಯಂತಿ ಆಚರಣೆ

ಮಂಡ್ಯ,ಏ.20– ಪ್ರಸ್ತುತ ಸನ್ನಿವೇಶದಲ್ಲಿ ಬಸವಣ್ಣನವರ ವಚನ ಸಂದೇಶಗಳು ವಿಶ್ವದ ಎಲ್ಲ ಸಮಸ್ಯೆಗಳಿಗೂ ಪರಿಹಾರ ಸೂಚಿಸುವಂತಿವೆ. ಹಾಗಾಗಿ ಎಲ್ಲರೂ ಬಸವಣ್ಣನವರನ್ನು ಆರಾಧಿಸುವುದಕ್ಕಿಂತ ಅವರ ವಚನ ಸಂದೇಶಗಳನ್ನು ಪಾಲಿಸುವುದು ಇಂದಿನ ದಿನಗಳಲ್ಲಿ ಅತ್ಯಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದ ಕಲಾಮಂದಿರದಲ್ಲಿ ಆಯೋಜಿಸಿದ್ದ ವಿಶ್ವಗುರು ಬಸವೇಶ್ವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಜಗತ್ತಿಗೇ ಜ್ಞಾನದ ಜ್ಯೋತಿ ಬೆಳಗಿಸಿದ ಬಸವಣ್ಣನವರನ್ನು ಪೂಜಿಸುವುದರಿಂದ ಅವರ ಸಂದೇಶವನ್ನೇ ಮರೆಮಾಚಿದಂತಾಗುತ್ತದೆ. ಹಾಗಾಗಿ ಬಸವಣ್ಣನವರ ಆರಾಧನೆಗಿಂತ ಅವರು ತಮ್ಮ ವಚನಗಳ ಮೂಲಕ ನೀಡಿರುವ ಸಂದೇಶಗಳನ್ನು ಅರಿತುಕೊಳ್ಳುವುದು ಮುಖ್ಯ ಎಂದರು.



ಬಸವೇಶ್ವರ ಜಯಂತಿ ಉದ್ಘಾಟಿಸುತ್ತಿರುವ ಶ್ರೀಗಳು, ಗಣ್ಯರು

ಮುಂದಿನ ಪೀಳಿಗೆಯ ಸಮ ಸಮಾಜದಲ್ಲಿ ನೆಮ್ಮದಿಯಿಂದಿರಬೇಕಾದರೆ, ಮಕ್ಕಳಿಗೆ ಬಸವ ತತ್ವಗಳ ಸಾರವನ್ನು ತಿಳಿಸಬೇಕಿದೆ. ಮಕ್ಕಳಿಗೆ ತಿಳಿಸಬೇಕೆಂದರೆ ಮೊದಲು ನಾವು ವಚನಗಳ ಆಶಯಗಳನ್ನು ಅರಿತುಕೊಳ್ಳಬೇಕು, ಬಳಿಕ ಮಕ್ಕಳಿಗೆ ಮನಮುಟ್ಟುವಂತೆ ತಿಳಿಸಿದರೆ ಅವರು ಗ್ರಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಬಸವಣ್ಣನವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವಚನಗಳ ಮೂಲಕ ಅಪೂರ್ವವಾದ ಕೊಡುಗೆ ನೀಡಿದ್ದಾರೆ. ಬಸವಣ್ಣನವರ ಸುಮಾರು 1500ಕ್ಕೂ ಹೆಚ್ಚು ವಚನಗಳನ್ನು ಸಂಗ್ರಹ ಮಾಡಲಾಗಿದೆ. ಸಮಾನತೆ ಇರಬೇಕು ಎಂದು ಬಯಸಿದ್ದ ಬಸವಣ್ಣ ತಮ್ಮ ಕಾವ್ಯದ ಮೂಲಕ ಸಾಮಾಜಿಕ ಜಾಗೃತಿಯನ್ನು ಹರಡಿದರು ಎಂದರು.

ಮುಖ್ಯವಾಗಿ ಲಿಂಗ ಅಥವಾ ಸಾಮಾಜಿಕ ತಾರತಮ್ಯ, ಮೂಢ ನಂಬಿಕೆಗಳು ಮತ್ತು ಆಚರಣೆಗಳನ್ನು ತಿರಸ್ಕರಿಸಿದ್ದರು. ದೇವರು ಬೇರೆ ಎಲ್ಲಿಯೂ ಇಲ್ಲ ಅವನು ನಮ್ಮೊಳಗೆ ಇದ್ದಾನೆ ಎಂದು ಬಸವಣ್ಣ ನಂಬಿದ್ದರು ಎಂದು ಹೇಳಿದರು.

ಬೇಬಿ ಬೆಟ್ಟದ ಶ್ರೀರಾಮಯೋಗೀಶ್ವರ ಮಠದ ಪೀಠಾಧ್ಯಕ್ಷ ಶಿವಬಸವ ಸ್ವಾಮೀಜಿ ಅವರು ಮಾತನಾಡಿ ಯುದ್ಧ ರಹಿತ ಸಮಾಜಕ್ಕೆ ಬಸವ ತತ್ವ ಅನಿವಾರ್ಯ, ಮೌಢ್ಯತೆಯ ವಿರುದ್ಧ 12ನೇ ಶತಮಾನದಲ್ಲೇ ಸಾಮಾಜಿಕ ಕ್ರಾಂತಿಯನ್ನು ಮಾಡಿದ ವಿಶ್ವಗುರು ಬಸವಣ್ಣನವರ ಆದರ್ಶ ಅನುಕರಣೀಯ. ಭವಿಷ್ಯತ್ತಿನಲ್ಲಿ ಯುದ್ಧ ರಹಿತ ಸಮಾಜ ನಿರ್ಮಾಣ ಮಾಡಲು ಬಸವ ತತ್ವ ಅನಿವಾರ್ಯವಾಗಿದೆ ಎಂದರು.

ಬಳಿಕ ವಿಶೇಷ ಉಪನ್ಯಾಸ ನೀಡಿದ ಉಪನ್ಯಾಸಕರಾದ ಡಾ.ಎಂ.ಎಸ್.ಅನಿತಾ ಅವರು ವಿಶ್ವದ ಇಂದಿನ ಎಲ್ಲ ಸಮಸ್ಯೆಗಳಿಗೆ ಬಸವಣ್ಣನವರ ವಚನಗಳಲ್ಲಿ ಪರಿಹಾರ ಇದೆ. ಆಧುನಿಕ ವಿಜ್ಞಾನದ ಕೃತಕ ಬುದ್ಧಿಮತ್ತೆ (ಎಐ)ಯನ್ನು ಅವಲಂಬಿಸಿಕೊಂಡು ಮನುಷ್ಯ ತನ್ನ ಅವನತಿಯನ್ನು ತಾನೇ ತಂದು ಕೊಳ್ಳುತ್ತಿದ್ದಾನೆಂದು ಆತಂಕ ವ್ಯಕ್ತಪಡಿಸಿದ ಅವರು, ಇಂತಹ ಸನ್ನಿವೇಶದಲ್ಲಿ ಬಸವ ತತ್ವವನ್ನು ಅಳವಡಿಸಿಕೊಳ್ಳದಿದ್ದರೆ ಜೀವ ಸಂಕುಲ ಉಳಿಯಲು ಸಾಧ್ಯವೇ ಇಲ್ಲ ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ.ಶೋಭಾರಾಣಿ, ಕಾಯಕಯೋಗಿ ಫೌಂಡೇಶನ್ ಅಧ್ಯಕ್ಷ ಎಂ.ಶಿವಕುಮಾರ್, ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್.ಸಂದೇಶ್, ಮುಖಂಡರಾದ ಸುಂಡಹಳ್ಳಿ ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ವಿ.ನಂದೀಶ್ ಮತ್ತಿತರರಿದ್ದರು.

ಮೆರವಣಿಗೆಗೆ ಚಾಲನೆ: ಶ್ರೀವಿಶ್ವಗುರು ಬಸವೇಶ್ವರ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಬಸವೇಶ್ವರರ ಅಲಂಕೃತ ಭಾವಚಿತ್ರವನ್ನಿರಿಸಿದ್ದ ಬೆಳ್ಳಿ ರಥದಲ್ಲಿ ಜಿಲ್ಲಾಧಿಕಾರಿಗಳು ಬಸವೇಶ್ವರರಿಗೆ ಪೂಜೆ ಸಲ್ಲಿಸಿದರು. ಬಳಿಕ ಮೆರವಣಿಗೆಗೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ವಿ.ಜೆ.ಶೋಭಾರಾಣಿ ಚಾಲನೆ ನೀಡಲಾಯಿತು.

ಬಳಿಕ ವಿವಿಧ ಜನಪದ ಕಲಾ ತಂಡಗಳೊಂದಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ತೆರಳಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಸಂಪನ್ನಗೊಂಡಿತು.

ಈ ವೇಳೆ ಅರ್ಚಕ ಶಿವಲಿಂಗಪ್ಪ ಬೆಟ್ಟಹಳ್ಳಿ ಮಂಜುನಾಥ್, ಕಾಯಕಯೋಗಿ ಪ್ರತಿಷ್ಠಾನದ ಅಧ್ಯಕ್ಷ ಎಂ.ಶಿವಕುಮಾರ್, ವಕೀಲ ಎಂ.ಗುರು ಪ್ರಸಾದ್, ಎಲ್.ಸಂದೇಶ್, ನಾರಾಯಣಸ್ವಾಮಿ, ರತ್ನಮ್ಮ, ಸಮಾಜದ ಮಳವಳ್ಳಿ ತಾಲ್ಲೂಕು ಅಧ್ಯಕ್ಷ ಶಿವಾನಂದ, ಕಾರ್ಯದರ್ಶಿ ಕೆಂಪರಾಜು ಮತ್ತಿತರರಿದ್ದರು.

ಇಂಡಿಯಾ ಒಕ್ಕೂಟ ಮಹಿಳಾ ವಿರೋಧಿ: ಸಚ್ಚಿದಾನಂದ ಆಕ್ರೋಶ

ಮಂಡ್ಯ,ಏ.20– ಮುಂದಿನ ಲೋಕಸಭಾ ಚುನಾವಣೆಯಿಂದ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ ಅಂಗೀಕಾರವಾಗುವುದನ್ನು ಇಂಡಿಯಾ ಒಕ್ಕೂಟ ತಡೆದಿದೆ. ಈ ಮೂಲಕ ತಾವು ಮಹಿಳಾ ವಿರೋಧಿ ಎನ್ನುವುದನ್ನು ಸಾಬೀತು ಪಡಿಸಿದೆ ಎಂದು ಶ್ರೀರಂಗಪಟ್ಟಣ ಕ್ಷೇತ್ರದ ಬಿಜೆಪಿ ಯುವ ನಾಯಕ ಇಂಡುವಾಳು ಸಚ್ಚಿದಾನಂದ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಸಚ್ಚಿದಾನಂದ

ಕೇಂದ್ರ ಸರ್ಕಾರ ಮಂಡಿಸಿದ ಮೀಸಲು ಮಸೂದೆ ಬೆಂಬಲಿಸದ ವಿಪಕ್ಷಗಳು ಮಹಿಳೆಯರನ್ನು ಅವಮಾನಿಸಿವೆ. ಈ ಮೂಲಕ ಮಹಿಳೆಯರ ಶಕ್ತಿ, ಸಾಮರ್ಥ್ಯವನ್ನು ಲಘುವಾಗಿ ಪರಿಗಣಿಸಿವೆ. ಆದರೆ ಕಾಂಗ್ರೆಸ್ ಸೇರಿದಂತೆ ಇಂಡಿಯಾ ಒಕ್ಕೂಟದ ನಡೆಯನ್ನು ದೇಶದ ಮಹಿಳೆಯರು ಗಮನಿಸುತ್ತಿದ್ದಾರೆ. ಮಹಿಳಾ ವಿರೋಧಿ ಧೋರಣೆಯ ಬಗ್ಗೆ ಸೂಕ್ಷ್ಮವಾಗಿ ತಿಳಿದುಕೊಳ್ಳುತ್ತಿದ್ದಾರೆ. ಇಂತಹ ನಡೆಗೆ ಮುಂದಿನ ದಿನದಲ್ಲಿ ಇಂಡಿಯಾ ಒಕ್ಕೂಟಕ್ಕೆ ನಾರಿಯರು ತಮ್ಮ ಶಕ್ತಿ ತೋರಿಸಲಿದ್ದಾರೆ ಎಂದು ಪತ್ರಿಕಾಹೇಳಿಕೆಯಲ್ಲಿ ಎಚ್ಚರಿಕೆ ನೀಡಿದರು.

ಮಹಿಳೆಯರು ಸಬಲರಾಗುವುದನ್ನು ಇಂಡಿಯಾ ಒಕ್ಕೂಟ ಸಹಿಸುತ್ತಿಲ್ಲ. ಜತೆಗೆ ಮುಂದಿನ ದಿನದಲ್ಲಿ ತಮ್ಮ ನಾಯಕತ್ವಕ್ಕೆ ಧಕ್ಕೆಯಾಗಬಹುದೆನ್ನುವ ಆತಂಕ ಎದುರಾಗಿದೆ. ಈ ನಿಟ್ಟಿನಲ್ಲಿ ಮಸೂದೆ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಇನ್ನು ಮಸೂದೆಗೆ ಸೋಲಾಗಿರುವುದಕ್ಕೆ ರಾಜ್ಯ ಕಾಂಗ್ರೆಸ್ ನಾಯಕರು ಅತೀವ ಸಂತೋಷ ಪಡುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಮಹಿಳೆಯರಿಂದಲೇ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ ಎನ್ನುವುದನ್ನು ಮರೆತಂತಿದೆ. ಆದ್ದರಿಂದ ಮಹಿಳಾ ವಿರೋಧಿ ನೀತಿಗೆ ರಾಜ್ಯದಲ್ಲಿಯೂ ಕಾಂಗ್ರೆಸ್ ಪಾಠ ಕಲಿಯಲಿದೆ ಎಂದಿದ್ದಾರೆ.

ಜಿಲ್ಲಾಡಳಿತದಿಂದ ಶ್ರೀ ಬಸವೇಶ್ವರರ ಜಯಂತಿ

ಜೀವನ ಸಾರ್ಥಕತೆಗೆ ಬಸವಣ್ಣನವರ ವಚನಾಮೃತಗಳನ್ನು ಅಳವಡಿಸಿಕೊಳ್ಳಿ

ಚಾಮರಾಜನಗರ, ಏ.20– ಮಾನವ ಬದುಕಿನ ಜೀವನ ಸಾರ್ಥಕತೆಗೆ ಬಸವಣ್ಣನವರ ವಚನಾಮೃತಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ವಿಶ್ವಗುರು ಶ್ರೀ ಬಸವೇಶ್ವರರ 893ನೇ ಜಯಂತಿ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಸವಣ್ಣನವರು 12ನೇ ಶತಮಾನದ ಪ್ರಮುಖ ವಚನಕಾರರು. ವಚನ ಸಾಹಿತ್ಯ ಮೌಲ್ಯವನ್ನು ಹೆಚ್ಚಿಸಿದವರು. ಕಳಬೇಡ, ಕೊಲಬೇಡ, ಹುಸಿಯ ನುಡಿಯಬೇಡ ಎಂದು ಸರಳ ಕನ್ನಡದಲ್ಲಿ ವಚನಗಳನ್ನು ರಚಿಸಿ ಜನಸಾಮಾನ್ಯರಿಗೆ ವಚನಾಮೃತವನ್ನು ಉಣಬಡಿಸಿದರು. ಅನುಭವ ಮಂಟಪದಲ್ಲಿ ಎಲ್ಲಾ ವರ್ಗದ ಜನರನ್ನೂ ಒಗ್ಗೂಡಿಸಿ ಸಾಮಾಜಿಕ, ಸಾಂಸ್ಕೃತಿಕ ಚಿಂತನೆ, ವಿಚಾರಧಾರೆಗಳ ಮೂಲಕ ಸಮಾಜ ಸುಧಾರಣೆಗೆ ಮುಂದಾದರು. ಇದನ್ನು ಮನಗಂಡ ಸರ್ಕಾರವು ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕರೆಂದು ಘೋಷಿಸಿ ಗೌರವ ಸಲ್ಲಿಸಿದೆ ಎಂದು ಶಾಸಕರಾದ ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ಗುಂಡ್ಲುಪೇಟೆ ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಅನುಭವಮಂಟಪ ಸ್ಥಾಪಿಸಿ ಎಲ್ಲರಿಗೂ ವಿಚಾರ ಧಾರೆಗಳನ್ನು ಪ್ರಸ್ತುತಪಡಿಸಲು ಸಮಾನ ಅವಕಾಶಗಳನ್ನು ನೀಡಿದ ಬಸವಣ್ಣನವರ ಮೌಲ್ಯಯುತ ತತ್ವಗಳನ್ನು ಎಲ್ಲರೂ ಪಾಲಿಸಬೇಕು. ಸಮಾಜದಲ್ಲಿ ಎಲ್ಲರೂ ಸುಖ, ಶಾಂತಿ, ನೆಮ್ಮದಿ ಬದುಕು ಸಾಗಿಸಲು ಬಸವಣ್ಣನವರ ವಚನಗಳ ಸಾರ–ಸಂದೇಶಗಳು ದಾರಿದೀಪವಾಗಿದೆ ಎಂದರು.



ಬಸವೇಶ್ವರರ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡುತ್ತಿರುವುದು.

ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ ಮಾತನಾಡಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವಸ್ವಾಮೀಜಿ ಆಶೀರ್ವಚನ ನೀಡಿದರು. ಹರವೆ ವಿರಕ್ತ ಮಠದ ಸರ್ಪಭೂಷಣಸ್ವಾಮಿಗಳು ಕಾರ್ಯಕ್ರಮದಲ್ಲಿ ದಿವ್ಯಸಾನಿಧ್ಯ ವಹಿಸಿದ್ದರು. ಸಂಸ್ಕೃತಿ ಚಿಂತಕರಾದ ಪೃಥ್ವಿರಾಜ್ ಹಾಲಹಳ್ಳಿ ಹಾಗೂ ಬಸವತತ್ವ ಪ್ರಚಾರಕರಾದ ಎಲ್. ಬಸಪ್ಪ ಬೊಮ್ಮಲಾಪುರ ಬಸವಣ್ಣ ಅವರು ಮುಖ್ಯ ಭಾಷಣ ಮಾಡಿ ಬಸವಣ್ಣನವರ ಚಿಂತನೆಗಳನ್ನು ಪ್ರಸ್ತುತಪಡಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್. ಶಶಿಧರ್, ನಗರಸಭೆ ಪೌರಾಯುಕ್ತರಾದ ಪರಶುರಾವ್ ಛಲವಾದಿ, ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರಾದ ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಸಹಾಯಕ ನಿರ್ದೇಶಕ ರಾಜು, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾದ ಮುಡ್ಲುಪುರ ನಂದೀಶ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಬಸವೇಶ್ವರ ಪುತ್ಥಳಿಗೆ ಗಣ್ಯರು ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು. ವೇದಿಕೆಯಲ್ಲಿ ಭಜನಾ ಕಲಾತಂಡಗಳಿಂದ ವಚನಗಾಯನ ಏರ್ಪಡಿಸಲಾಗಿತ್ತು.

ಅಪರಾಧ ಚಟುವಟಿಕೆಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದ ಬಾತ್ಮೀದಾರನ ಕೊಲೆ

ಹಳೇ ವೈಷಮ್ಯದಿಂದಾಗಿ ಕೊಂದು ಪೊಲೀಸರಿಗೆ ಶರಣಾದ ಆರೋಪಿ

ಕೊಳ್ಳೇಗಾಲ: ಕುಣಗಳ್ಳಿ, ಸುರಾಪುರ ಸೇರಿದಂತೆ ಹಲವು ಗ್ರಾಮಗಳಲ್ಲಿನ ಅಪರಾಧಗಳ ಕುರಿತು ಪೊಲೀಸರಿಗೆ ಮಾಹಿತಿ ನೀಡುತ್ತಿದ್ದ ಬಾತ್ಮೀದಾರನೋರ್ವನನ್ನು ಸ್ನೇಹಿತನೇ ಕೊಲೆ ಮಾಡಿರುವ ಘಟನೆ ತಾಲೂಕಿನ ಸುರಾಪುರ ಗ್ರಾಮದಲ್ಲಿ ಜಮೀನುವೊಂದರಲ್ಲಿ ಸಂಭವಿಸಿದೆ.

ಕುಣಗಳ್ಳಿ ಗ್ರಾಮದ ರಾಮಕೃಷ್ಣ(50) ಕೊಲೆಯಾದ ವ್ಯಕ್ತಿ. ಅದೇ ಗ್ರಾಮದ ಜೆಸಿಬಿ ಚಾಲಕ ಮಲ್ಲಿಕಾರ್ಜುನ ಕೊಲೆಗೈದು ಪೊಲೀಸರ ಮುಂದೆ ತಪ್ಪೊಪ್ಪಿಕೊಂಡು ನಾನೇ ರಾಡಿನಿಂದ ಹೊಡೆದು ಕೊಂದಿದ್ದೇನೆ ಎಂದು ಶರಣಾಗಿರುವ ಆರೋಪಿ.



ಮಲ್ಲಿಕಾರ್ಜುನ



ರಾಮಕೃಷ್ಣ

ಮಲ್ಲಿಕಾರ್ಜುನ ಮತ್ತು ರಾಮಕೃಷ್ಣ ಸ್ನೇಹಿತರಾಗಿದ್ದು, ರಾಮಕೃಷ್ಣ ಹಣಕ್ಕಾಗಿ ಪೀಡಿಸುತ್ತಿದ್ದ, ಅಲ್ಲದೇ ಹಿಂದೊಮ್ಮೆ ನಾಡಬಂದೂಕು ಇರಿಸಿಕೊಂಡಿದ್ದ ವಿಷಯವನ್ನು ಪೊಲೀಸರಿಗೆ ಮಾಹಿತಿ ನೀಡಿ ಆತನ ಬಂಧನಕ್ಕೂ ಕಾರಣವಾಗಿದ್ದ. ಮಾತ್ರವಲ್ಲದೇ, ಅನೇಕ ಅಪರಾಧ ಪ್ರಕ ರಣಗಳ ಬಗ್ಗೆಯೂ ಸಹಾ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದ ಎಂದು ಹೇಳಲಾಗಿದೆ. ಅಲ್ಲದೆ ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ನಾನೇ ಆತನ ಬಂಧನಕ್ಕೂ ಕಾರಣವಾಗಿದ್ದೆ ಎಂದು ಹೇಳಿದ್ದ ನೆನ್ನಲಾಗಿದೆ

ಈ ಮದ್ಯೆ ಇಬ್ಬರಿಗೂ ವೈಮಷಮ್ಯ ಉಂಟಾಗಿತ್ತು. ಆದರೆ ಕಳೆದ ನಾಲ್ಕೈದು ದಿನಗಳಿಂದ ಇಬ್ಬರು ಪರಸ್ಪರ ಮಾತನಾಡಿಸಿಕೊಂಡಿದ್ದು ಭಾನುವಾರ ರಾತ್ರಿ ಸುರಾಪುರ ಗ್ರಾಮದ ಜಮೀನುವೊಂದಕ್ಕೆ ಇಬ್ಬರು ತೆರಳಿ ಮದ್ಯಸೇವನೆ ಮಾಡಿ ಊಟ ಮಾಡಿದ್ದಾರೆ, ಬಳಿಕ ಮಲ್ಲಿಕಾರ್ಜುನ ಮತ್ತು ರಾಮಕೃಷ್ಣ ನಡುವೆ ಮಾತಿನ ಚಕಮಕಿ ನಡೆದು ಮೊದಲೆ ಆತನ ಕೊನೆಗೆ ಪ್ಲಾನ್ ಮಾಡಿದ್ದ ಆರೋಪಿ ಕಬ್ಬಿಣದ ರಾಡಿನಿಂದ ರಾಮಕೃಷ್ಣನಿಗೆ ಹೊಡೆದು ಕೊಲೆ ಮಾಡಿ, ನಂತರ ಪೊಲೀಸ್ ಠಾಣೆಗೆ ತೆರಳಿ ರಾಡಿನಿಂದ ಹೊಡೆದು ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡು ಶರಣಾಗಿದ್ದಾನೆ.

ವಿಷಯ ತಿಳಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್, ಅಪಾರ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಉಪವಿಭಾಗ ಡಿವೈಎಸ್ಪಿ ಧರ್ಮೇಂದ್ರ, ಯಳಂದೂರು ಸಿಪಿಐ ಸುಬ್ರಮಣ್ಯ, ಅಗರ ಮಾಂಬಳ್ಳಿ ಪೊಲೀಸ್ ಠಾಣೆಯ ಎಸ್‌ಐ ಕರಿಬಸಪ್ಪ ಹಾಗೂ ಸಿಬ್ಬಂದಿ ಸ್ಥಳಕ್ಕೆ ಪರಿಶೀಲಿಸಿ, ಮೃತದೇಹವನ್ನು ಚಾ.ನಗರದ ಆಸ್ಪತ್ರೆಗೆ ರವಾನಿಸಿದರು.

ಅಗರ ಮಾಂಬಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಶವವನ್ನು ಮರ ಣೋತ್ತರ ಪರೀಕ್ಷೆ ನಡೆಸಿ ಬಳಿಕ ವಾರಸು ದಾರರಿಗೆ ಒಪ್ಪಿಸಿದರು ಆರೋಪಿಯೋ ರ್ವನೆ ಈತನನ್ನು ಕೊಂದನೆ ಅಥವಾ ಇನ್ನು ಕೆಲವರು ಈಪ್ರಕರಣದಲ್ಲಿ ಭಾಗಿಯಾಗಿದ್ದಾರಾ ಎಂಬಿತ್ಯಾದಿ ವಿಚಾರಗಳು ಪೊಲೀಸರ ತನಿಖೆಯಿಂದ ತಿಳಿಯ ಬೇಕಿದೆ.

110 ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ

ಚಾಮರಾಜನಗರ, ಏ.20– ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ 110 ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆಯನ್ನು ಏ.21ರಂದು ಬೆಳಿಗ್ಗೆ 11 ಗಂಟೆಗೆ ಗುಂಡ್ಲುಪೇಟೆ ಪಟ್ಟಣದ ಡಿ. ದೇವರಾಜ ಅರಸು ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಗುಂಡ್ಲುಪೇಟೆ ತಾಲೂಕಿನ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ 523.17 ಕೋಟಿ ರೂ. ಅನುದಾನದ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಕಾರ್ಯಕ್ರಮ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸುವರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಕೆ. ವೆಂಕಟೇಶ್, ಡಾ. ಹೆಚ್.ಸಿ. ಮಹದೇವಪ್ಪ, ದಿನೇಶ್ ಗುಂಡೂರಾವ್, ಸತೀಶ್ ಜಾರಕಿಹೊಳಿ, ಶಿವಾನಂದ ಎಸ್. ಪಾಟೀಲ, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ ಅವರು ಘನ ಉಪಸ್ಥಿತಿ ವಹಿಸುವರು.

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯ ಸುನೀಲ್ ಬೋಸ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ಚಂದ್ರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಎನ್‌ಡಿಎಗೆ ಅಗತ್ಯ ಬಹುಮತ ಇಲ್ಲದಿದ್ದರೂ ಮಹಿಳಾ ಮೀಸಲಾತಿ, ಕ್ಷೇತ್ರ ಮರು ವಿಂಗಡನೆ ವಿಧೇಯಕ ಮಂಡನೆ

ಮೈಸೂರಿನಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸಿಎಂ ಸಿದ್ದರಾಮಯ್ಯ ಕಿಡಿ

- ಮಹಿಳಾ ಮೀಸಲಾತಿಗೆ ನಮ್ಮ ವಿರೋಧವಿಲ್ಲ
- 2011 ಜನಗಣತಿ ಆಧಾರದ ಕ್ಷೇತ್ರ ಮರು ವಿಂಗಡಣೆಗೆ ವಿರೋಧ
- ಭೌಗೋಳಿಕ ವ್ಯಾಪ್ತಿ, ಜನಸಂಖ್ಯೆ ಆಧಾರದ ಮೇಲೆ ವಿಂಗಡಣೆ ಮಾಡಲಿ
- ಪಂಚರಾಜ್ಯದ ಚುನಾವಣೆಯಲ್ಲಿ ನಮ್ಮ ಗ್ಯಾರಂಟಿ ಕಾಪಿ



ಏರ್‌ಪೋರ್ಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಮಾಧ್ಯಮದವರೊಂದಿಗೆ ಮಾತನಾಡಿದರು

ಮೈಸೂರು, ಏ.20(ಬಿಎಲ್ ಯು)– ಬಹುಮತವಿಲ್ಲ ಎಂದು ಅರಿತಿದ್ದರೂ ರಾಜಕೀಯ ಕಾರಣಕ್ಕಾಗಿ ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಮರು ವಿಂಗಡಣೆ ವಿಧೇಯಕವನ್ನು ಮಂಡಿಸಿದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೂರನೇ ಎರಡರಷ್ಟು ಬಹುಮತವಿಲ್ಲ ಎಂದು ತಿಳಿದಿದ್ದರೂ ಎರಡು ವಿಧೇಯಕಗಳನ್ನು ಒಟ್ಟಿಗೆ ಮಂಡಿಸಿದರು. ಹಾಗಾಗಿ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗೆ ಸೋಲಾಯಿತು ಎಂದು ಹೇಳಿದರು.

ನಾವು ಮಹಿಳಾ ಮೀಸಲಾತಿಗೆ ವಿರುದ್ಧವಿಲ್ಲ. ಆದರೆ 2011ರ ಜನ ಗಣತಿ ಆಧಾರದ ಮೇಲೆ ಕ್ಷೇತ್ರ ಮರು ವಿಂಗಡಣೆ ಮಾಡುವುದಕ್ಕೆ ನಮ್ಮ ವಿರೋಧವಿದೆ. ವಾಸ್ತವತೆ ಹೀಗಿದ್ದರೂ ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಕಿಡಿಕಾರಿದರು.

ಅವೈಜ್ಞಾನಿಕವಾದ ಕ್ಷೇತ್ರ ಮರು ವಿಂಗಡಣೆ ಜೊತೆಗೆ ಮಹಿಳಾ ಮೀಸಲಾತಿಯನ್ನು ಏಕೆ ತಳಕು ಹಾಕಿದರು. ಮಹಿಳಾ ಮೀಸಲಾತಿ ಜೊತೆಗೆ ಕ್ಷೇತ್ರ ಮರು ವಿಂಗಡಣೆ ವಿಧೇಯಕವನ್ನು ಏಕೆ ಮಂಡನೆ ಮಾಡಿದರು ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಪಕ್ಷ ಸಂವಿಧಾನಕ್ಕೆ 73 ಮತ್ತು 74 ನೇ ತಿದ್ದುಪಡಿ ತಂದು ಸ್ಥಳಿಯ ಸಂಸ್ಥೆಗಳಲ್ಲಿ ಶೇಕಡ 50 ರಷ್ಟು ಮಹಿಳಾ ಮೀಸಲಾತಿ ತಂದಿತ್ತು. ಹೀಗಿರುವಾಗ ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿ ಹೇಗೆ ಆಗುತ್ತದೆ ಎಂದು ಮರು ಪ್ರಶ್ನಿಸಿದರು.

ಈ ಹಿಂದೆಯೇ ಮಹಿಳಾ ಮೀಸಲಾತಿ ಮಸೂದೆ ಮಂಡನೆಗೆ ಅಂಗೀಕಾರ ದೊರೆತಿತ್ತು. ಅಂದೇ ವಿಧೇಯಕ ಮಂಡಿಸದೆ ಇಲ್ಲಿವರೆಗೆ ಏಕೆ ಕಾದರು ಎಂದು ಪ್ರಶ್ನಿಸಿದ ಸಿದ್ದರಾಮಯ್ಯ ಅವರು, ನರೇಂದ್ರ ಮೋದಿ ಅವರು ಸಾಮಾಜಿಕ ನ್ಯಾಯದ ಪರವಾಗಿಲ್ಲ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ ಎಂದು ಆರೋಪಿಸಿದರು.

> ಶಾಸಕ ಎನ್.ಎ.ಹ್ಯಾರಿಸ್ ಮನೆ ಮೇಲೆ ಇಡಿ (ಜಾರಿ ನಿರ್ದೇಶನಾಲಯ) ಅಧಿಕಾರಿಗಳು ದಾಳಿ ಮಾಡಿರುವ ಬಗ್ಗೆ ನನಗೇನು ಗೊತ್ತಿಲ್ಲ. ಈ ಬಗ್ಗೆ ಮಾಹಿತಿ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರಿಸಿದರು.

ಜನ ಸಂಖ್ಯೆ ಆಧಾರದ ಮೇಲೆ ಕ್ಷೇತ್ರ ಮರು ವಿಂಗಡಣೆ ಮಾಡುವುದಾಗಿ ಕೇಂದ್ರ ಸರ್ಕಾರ ಹೇಳುತ್ತದೆ. ಆದರೆ ಉತ್ತರ ಭಾರತದಲ್ಲಿ ಅದರಲ್ಲೂ ಪ್ರಮುಖವಾಗಿ ಉತ್ತರ ಪ್ರದೇಶದಲ್ಲಿ ಈಗಿರುವ ಲೋಕಸಭಾ ಕ್ಷೇತ್ರಕ್ಕಿಂತ ಎರಡರಷ್ಟು ಹೆಚ್ಚಾಗುತ್ತದೆ. ಆದರೆ ಕರ್ನಾಟಕದಲ್ಲಿ ಈಗಿರುವ 28 ಸ್ಥಾನ ಕೇವಲ 42 ಆಗುತ್ತದೆ. ಈ ಮಾನದಂಡದಿಂದ ಕರ್ನಾಟಕ ಮಾತ್ರವಲ್ಲದೆ ದಕ್ಷಿಣ ರಾಜ್ಯಗಳಿಗೆ ಭಾರೀ ಅನ್ಯಾಯವಾಗಲಿದೆ ಎಂದು ಆಪಾದಿಸಿದರು.

ಭೌಗೋಳಿಕ ವ್ಯಾಪ್ತಿ ಮತ್ತು ಜನಸಂಖ್ಯೆ ಆಧಾರದ ಮೇಲೆ ಕ್ಷೇತ್ರ ಮರು ವಿಂಗಡಣೆ ಮಾಡಬೇಕು. ಉತ್ತರ ಭಾರತದ ಜನರು ಜನ ಸಂಖ್ಯೆ ನಿಯಂತ್ರಣ ಮಾಡಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಜನ ಸಂಖ್ಯೆ ನಿಯಂತ್ರಣ ಮಾಡಿದ್ದೇವೆ. ಹೀಗಿರುವಾಗ ಭೌಗೋಳಿಕ ವ್ಯಾಪ್ತಿ ಬಿಟ್ಟು ಜನಸಂಖ್ಯೆ ಆಧಾರದ ಮೇಲೆ ಕ್ಷೇತ್ರ ಮರು ವಿಂಗಡಣೆ ಮಾಡಿದರೆ ನಮಗೆ ಅನ್ಯಾಯವಾಗುವುದಿಲ್ಲವೆ ಎಂದು ಪ್ರಶ್ನೆ ಮಾಡಿದರು.

ತಮಿಳುನಾಡಿನ ಚುನಾವಣಾ ಪ್ರಚಾರಕ್ಕೆ ನಾವು ಹೋಗುವುದಿಲ್ಲ. ಆದರೆ ಅಲ್ಲಿ ಡಿಎಂಕೆ ಮೈತ್ರಿ ಕೂಟ ಗೆಲ್ಲಲಿದೆ. ಕೇರಳದಲ್ಲಿ ಕಾಂಗ್ರೆಸ್ ಗೆಲುವು ನಿಶ್ಚಿತ ಎಂದು ಇದೇ ವೇಳೆ ವಿಶ್ವಾಸ ವ್ಯಕ್ತಪಡಿಸಿದರು.

ನಾವು ಗ್ಯಾರಂಟಿ ಯೋಜನೆ ಜಾರಿಗೊಳಿಸಿದಾಗ ನರೇಂದ್ರ ಮೋದಿ ಸೇರಿದಂತೆ ಹಲವರು ಇದು ಆರ್ಥಿಕ ಅಧಃಪತನಕ್ಕೆ ದಾರಿ ಎಂದು ಟೀಕಿಸಿದರು. ಆದರೆ ಪಂಚ ರಾಜ್ಯ ಚುನಾವಣೆಯಲ್ಲಿ ನಮ್ಮ ಗ್ಯಾರಂಟಿಯನ್ನೆ ಅವರು ಅನುಸರಿಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಮಹಿಳಾ ಮೀಸಲಾತಿ ಬಗ್ಗೆ ನಿಮ್ಮ ನಿಲುವೇನು... ಮೋದಿ, ಸಿದ್ದರಾಮಯ್ಯ ಪಿಸು ಮಾತಿನ ಸೀಕ್ರೆಟ್ ಬಹಿರಂಗ

ಕಳೆದ ವಾರ ಪ್ರಧಾನಿ ನರೇಂದ್ರ ಮೋದಿ ಅವರು ಕರ್ನಾಟಕಕ್ಕೆ ಭೇಟಿ ನೀಡಿದ ವೇಳೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನರೇಂದ್ರ ಮೋದಿ ಹಾಗೂ ಸಿದ್ದರಾಮಯ್ಯ ಅವರ ಪಿಸು ಮಾತು ತೀವ್ರ ಕುತೂಹಲ ಮೂಡಿಸಿತ್ತು. ರಾಜಕೀಯ ವೈರಿಗಳಾದ ಇಬ್ಬರು ಏನು ಮಾತನಾಡಿರಬಹುದು ಎಂದು ಹಲವು ಪ್ರಶ್ನೆಗಳು ಎದುರಾಗಿತ್ತು.

ಮೈಸೂರು ವಿಮಾನ ನಿಲ್ದಾಣದಲ್ಲಿ ಮಾತಿಗೆ ಸಿಕ್ಕ ಸಿದ್ದರಾಮಯ್ಯ ಅವರನ್ನು ಮೋದಿ ಹಾಗೂ ನಿಮ್ಮ ನಡುವಿನ ಪಿಸು ಮಾತಿನ ಸೀಕ್ರೆಟ್ ಏನು ಎಂದು ಪತ್ರಕರ್ತರು ಪ್ರಶ್ನಿಸಿದರು. ಮಹಿಳಾ ಮೀಸಲಾತಿ ವಿಚಾರದಲ್ಲಿ ನಿಮ್ಮ ನಿಲುವೇನು ಎಂದು ಮೋದಿ ಅವರು ನನ್ನ ಕಿವಿಯಲ್ಲಿ ಕೇಳಿದರು. ಅದಕ್ಕೆ ನಾನು ಮಹಿಳಾ ಮೀಸಲಾತಿ ಪರವಾಗಿದ್ದೇನೆ ಎಂದು ಹೇಳಿದೆ ಎಂದರು.

ಆದರೆ ಸಿದ್ದರಾಮಯ್ಯ ಅವರು ಈ ಸ್ಪಷ್ಟನೆ ಬಗ್ಗೆ ಕೆಲವರಿಗೆ ಇನ್ನು ಅನುಮಾನವಿದೆ. ಮೋದಿ ಅವರು ಸಿದ್ದರಾಮಯ್ಯ ಅವರ ಜೊತೆ ಬೇರೆನೋ ಸೀಕ್ರೆಟ್ ಮಾತನಾಡಿರಬೇಕು ಎಂದು ಸಂಶಯ ಕಾಡುತ್ತಿದೆ. ಆದರೆ, ಸಿದ್ದರಾಮಯ್ಯ ಏನೋ ತೇಪೆ ಹಾಕಿದ್ದಾರೆ ಎಂಬುದು ಕೆಲವರ ಮಾತು.

ಸಂಸತ್ ಆವರಣದಲ್ಲಿ ಬಸವ ಜಯಂತಿ




ನವದೆಹಲಿ: ಇಂದು ಬಸವ ಜಯಂತಿ ಪ್ರಯುಕ್ತ ಸಂಸತ್ ಭವನದ ಆವರಣದ ಪ್ರೇರಣಾ ಸ್ಥಳದಲ್ಲಿ ಜಗಜ್ಯೋತಿ ಬಸವೇಶ್ವರರ ಪ್ರತಿಮೆಗೆ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ, ಕಿರಣ್ ರಿಜಿಜು ಹಾಗೂ ವಿ.ಸೋಮಣ್ಣ ಪುಷ್ಪನಮನ ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್.ಡಿ.ಕುಮಾರಸ್ವಾಮಿ, ಜಗಜ್ಯೋತಿ ಬಸವಣ್ಣನವರ ಸಂದೇಶಗಳು ಎಂದೆಂದಿಗೂ ಅನುಕರಣೀಯ ಮತ್ತು ಪ್ರೇರಣದಾಯಕ ಆಗಿವೆ ಎಂದರು.

12ನೇ ಶತಮಾನದಲ್ಲೇ ಪ್ರಜಾಪ್ರಭುತ್ವ ಹಾಗೂ ಜನರ ಆಡಳಿತದ ಬಗ್ಗೆ ಬಸವಣ್ಣನವರು ಆಲೋಚನೆ ಮಾಡಿದರು. ಆ ಸಂದರ್ಭದಲ್ಲೇ ಪುರುಷ, ಸ್ತ್ರೀ ಎಂಬ ಭೇದವಿಲ್ಲದೆ ಎಲ್ಲರಿಗೂ ಸಮಾನ ಸ್ಥಾನಮಾನಗಳನ್ನು ದೊರಕಿಸಿಕೊಡುವಲ್ಲಿ ಅವರು ಶ್ರಮಿಸಿದರು. ಅಂತಹ ಮಹಾನ್ ಚೇತನ ಬಿಟ್ಟು ಹೋದ ಸಂದೇಶಗಳು ಮತ್ತು ಆದರ್ಶಗಳು ನಮಗೆ ದೊಡ್ಡ ಆಸ್ತಿಯಾಗಿವೆ. ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವದ ಪರಿಕಲ್ಪನೆಗೆ ಬೀಜಾಂಕುರ ಮಾಡಿ, ಸರ್ವರ ಸಾಮರಸ್ಯವನ್ನು ಒತ್ತಿ ಹೇಳಿದ್ದರು. ಜೊತೆಗೆ ಎಲ್ಲ ಸಮಾಜಗಳಿಗೂ ಅನುಭವ ಮಂಟಪದಲ್ಲಿ ಸಮಾನ ಪ್ರಾತಿನಿಧ್ಯ ನೀಡಿದ್ದರು ಎಂದರು.

ರಾಷ್ಟ್ರದ ಸಂಸತ್ ಭವನದ ಆವರಣದಲ್ಲಿ ಸ್ಥಾಪಿಸಲಾಗಿರುವ ಬಸವಣ್ಣನವರ ಪ್ರತಿಮೆಗೆ ಪುಷ್ಪ ನಮನ ಅರ್ಪಿಸುವ ಅವಕಾಶ ಸಿಕ್ಕಿದ್ದು ನನ್ನ ಸುಕೃತ. ಈ ಕಾರ್ಯಕ್ರಮದಲ್ಲಿ ಸಚಿವರಾದ ಕಿರಣ್ ರಿಜಿಜು ಹಾಗೂ ಸೋಮಣ್ಣ ಅವರೊಂದಿಗೆ ಭಾಗವಹಿಸಿದ್ದು ಬಹಳ ಸಂತೋಷ ಉಂಟು ಮಾಡಿದೆ. ಅಲ್ಲದೆ ಅನೇಕ ಸ್ವಾಮೀಜಿಗಳು ಹಾಗೂ ವಿವಿಧ ಕಡೆಗಳಿಂದ ಬಂದಿದ್ದ ಬಸವ ಅನುಯಾಯಿಗಳನ್ನು ಭೇಟಿ ಮಾಡಿದ್ದು ನನಗೆ ಸಂತಸ ತಂದಿದೆ ಎಂದು ನುಡಿದರು.

ಬಸವಣ್ಣ ಪ್ರತಿಮೆಗೆ ಮಾಲಾರ್ಪಣೆ



ಬಸವ ಜಯಂತಿ ಪ್ರಯುಕ್ತ ನರಸಿಂಹರಾಜ ಕ್ಷೇತ್ರ ಬಿಜೆಪಿ ಘಟಕದ ವತಿಯಿಂದ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮುಖಂಡರಾದ ಸ್ಮಾರ್ಟ್ ಮಂಜು, ಮುರುಳೀಧರ್, ರಮೇಶ್, ಕಾರ್ತಿಕ್, ಲೋಹಿತ್, ಕೃಷ್ಣಮೂರ್ತಿ ಮುಂತಾದವರಿದ್ದರು.



ಬಸವ ಜಯಂತಿ ಪ್ರಯುಕ್ತ ವಕೀಲರಾದ ಅರುಣ್ ಕುಮಾರ್, ಮಾಳಪ್ಪ ಸುರೇಂದ್ರ ಚೇತನ್ ಮತ್ತು ಶೇಖರ್ ಮೈಸೂರಿನ ಜಗಜ್ಯೋತಿ ಬಸವಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.



ಬಸವ ಜಯಂತಿ ಅಂಗವಾಗಿ ಮೈಸೂರಿನ ಜೆಡಿಎಸ್ ಮುಖಂಡರು, ಮಾಜಿ ಮೇಯರ್ ಆರ್.ಲಿಂಗಪ್ಪನವರ ನೇತೃತ್ವದಲ್ಲಿ ಜೆಎಸ್‌ಎಸ್ ವಿದ್ಯಾಪೀಠದ ಬಳಿಯ ಬಸವಣ್ಣನವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಪಕ್ಷದ ಮುಖಂಡರಾದ ಗಾಂಧಿನಗರ ಸುರೇಶ್, ಮಂಜುನಾಥ್, ರಾಮು, ಪ್ರಕಾಶ್, ಜೆಡಿಎಸ್ ಮಹಿಳಾ ನಗರ ಘಟಕದ ಹೇಮಾವತಿ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಸಮಸಮಾಜಕ್ಕೆ ಅಡಿಗಲ್ಲು ಹಾಕಿದ ಸಾಮಾಜಿಕ ಸುಧಾರಕ ಬಸವಣ್ಣ

ಮಹಾರಾಣಿ ವಿಜ್ಞಾನ ಕಾಲೇಜು ಪ್ರಾಧ್ಯಾಪಕ ಡಾ. ತಿಪ್ಪೇಸ್ವಾಮಿ ಪ್ರತಿಪಾದನೆ



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಸಾಂಸ್ಕೃತಿಕ ಸಮಿತಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಡಾ. ಬಿ.ತಿಪ್ಪೇಸ್ವಾಮಿ ಮಾತನಾಡಿದರು.

ಮೈಸೂರು, ಏ.20(ಎಂಟಿವೈ)– ಅಸಮಾನತೆ, ಅಸಮತೋಲನ, ತಾರತಮ್ಯಗಳ ವಿರುದ್ಧ ಬಂಡೆದ್ದು ಸಮ ಸಮಾಜದ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ ಹರಿಕಾರ ಸಾಮಾಜಿಕ ಸುಧಾರಕ ಬಸವಣ್ಣ ಎಂದು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ರಾಸಾಯನ ಶಾಸ್ತ್ರದ ಪ್ರಾಧ್ಯಾಪಕ ಡಾ.ತಿಪ್ಪೇಸ್ವಾಮಿ ಬಣ್ಣಿಸಿದ್ದಾರೆ.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಕಾಲೇಜಿನ ಸಾಂಸ್ಕೃತಿಕ ಸಮಿತಿ ವತಿಯಿಂದ ಆಯೋಜಿಸಿದ್ದ ಸಮಾಜ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಈ ಹಿಂದೆ ಇದ್ದ ಲಿಂಗ ಭೇದ, ಜಾತೀಯತೆ ಹಾಗೂ ಇನ್ನಿತರ ತಾರತಮ್ಯಗಳ ವಿರುದ್ಧ ಸಮರ ಸಾರಿದ ನಿಜ ನಾಯಕ ಬಸವಣ್ಣ ಅನುಭವ ಮಂಟಪದ ಮೂಲಕ ಕ್ರಾಂತಿ ಮಾಡಿದರು. ಸಮಾಜದಲ್ಲಿ ಸಮಾನತೆ ನೆಲೆಸಬೇಕು ಎಂದು ಹೋರಾಟ ಮಾಡಿದರು. ಸಮ ಸಮಾಜದ ಕನಸನ್ನು ಕಂಡು ಅದನ್ನು ನಿಜವಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ ಮೂಲಪುರುಷ ಬಸವಣ್ಣ ಎಂದರು.

ಲಿಂಗ ಭೇದವಿಲ್ಲದ ಸಮಾಜದ ನಿರ್ಮಾಣಕ್ಕೆ ಅವರು ನಾಂದಿ ಹಾಡಿದರು. ಲಿಂಗ ತಾರತಮ್ಯ ಇರಬಾರದು. ಸ್ತ್ರೀ ಸಮಾನತೆ ಇರಬೇಕು. ಪುರುಷರಿಗೆ ಸಮಾನವಾಗಿ ಮಹಿಳೆ ಹಕ್ಕು ಇರಬೇಕು ಎಂಬುದು ಬಸವಣ್ಣನವರ ಆಶಯವಾಗಿತ್ತು. ಜಡತ್ವ ತೊಡೆದು ಹಾಕಲು ಕಾಯಕಕ್ಕೆ ಮಹತ್ವ ನೀಡಬೇಕು ಎಂದು ಸಂದೇಶ ಸಾರಿದರು. ಕಾಯಕ ಮಾಡುವ ಸಮಾಜ ನಿರ್ಮಾಣಕ್ಕೆ ವೇದಿಕೆ ಹಾಕಿಕೊಟ್ಟರು. ಹೀಗಾಗಿ ಬಸವಣ್ಣ ಅವರ ತತ್ವ, ಆದರ್ಶ ಪಾಲನೆ, ಬಸವನಿಗೆ ಸಲ್ಲಿಸುವ ಗೌರವ. ಅವರು ಒಂದು ಜಾತಿಗೆ ಸೀಮಿತವಾದವರಲ್ಲ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿನಿ ಮೇಘ ಹಡಪದ ಬಸವಣ್ಣನವರ ತತ್ವ ಮತ್ತು ಆದರ್ಶಗಳ ಕುರಿತು ಮಾತನಾಡಿದರು.

ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಬಿ.ಲಕ್ಷ್ಮಣ್ ಅಮರ ಬಸವಣ್ಣನವರ ಕುರಿತ ಗೀತೆಗಳನ್ನು ಹಾಡಿದರು. ಹಿರಿಯ ಅಧ್ಯಾಪಕ ಡಾ. ರೆಹಮದ್ ಉಲ್ಲಾ ಮಾತನಾಡಿದರು.


ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಭಾರ ಪ್ರಾಂಶುಪಾಲ ಡಾ. ವಾಸುದೇವ ಶೆಟ್ಟಿ ವಹಿಸಿದ್ದರು. ಈ ಸಂದರ್ಭದಲ್ಲಿ ಕಾಲೇಜಿನ ಸಾಂಸ್ಕೃತಿಕ ಸಮಿತಿ ಖಜಾಂಚಿ ಎನ್.ಬೃಂದಾ, ಸಂಚಾಲಕ ಗೋವಿಂದ ರಾಜು, ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಎ.ಬೃಂದಾ, ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಂಜನಾ ನಿರೂಪಿಸಿದರೆ, ಕನ್ನಡ ಸಂಪಾದಕಿ ನವ್ಯಶ್ರೀ ಸ್ವಾಗತಿಸಿದರು ಹಾಗೂ ತೇಜಸ್ವಿನಿ ವಂದಿಸಿದರು.

ಸಿಬಿಎಸ್‌ಸಿ ಪರೀಕ್ಷೆ: ಮನಿತ್ 572 ಅಂಕ



ಮೈಸೂರು: ಇಲ್ಲಿನ ವಿ.ವಿ.ಎಸ್ ಬಿಎಂಶ್ರೀ ವಿದ್ಯಾವರ್ಧಕ ಕೇಂದ್ರೀಯ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಮನಿತ್ ಸಿಬಿಎಸ್‌ಸಿ ಪರೀಕ್ಷೆಯಲ್ಲಿ 95.33% ಫಲಿತಾಂಶ ಪಡೆದುಕೊಂಡಿದ್ದಾರೆ. ಇಂಗ್ಲಿಷ್ –92, ಕನ್ನಡ–98, ಗಣಿತ–91, ವಿಜ್ಞಾನ–94, ಸಮಾಜ ಶಾಸ್ತ್ರ–98, ಮಾಹಿತಿ ತಂತ್ರಜ್ಞಾನ–99 ಒಟ್ಟು 572 ಅಂಕ ಗಳಿಸಿದ್ದಾರೆ. ಈತನನ್ನು ಕಾಲೇಜಿನ ಆಡಳಿತಾಧಿಕಾರಿ ಉಮಾ ಅಣ್ಣಯ್ಯ ಹಾಗೂ ಪ್ರಾಂಶುಪಾಲ ರಮೇಶ್ ಆತ್ಮೀಯವಾಗಿ ಅಭಿನಂದಿಸಿದರು. ಮನೀಶ್ ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕ್‌ಕುಮಾರ್, ಸುಮಾ ದಂಪತಿ ಪುತ್ರ.

ಹೆಚ್.ಸಿ.ಮಹದೇವಪ್ಪರವರಿಗೆ ಹುಟ್ಟುಹಬ್ಬದ ಶುಭಾಶಯ



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿ ದ್ರಾವಿಡ ಪೌರಕಾರ್ಮಿಕರ ಯುವಕರ ಅಭಿವೃದ್ಧಿ ಮಹಾ ಸಂಘದ ವತಿಯಿಂದ ಉಪಾಧ್ಯಕ್ಷ ಆರ್.ವೆಂಕಟೇಶ್ ಹುಟ್ಟುಹಬ್ಬದ ಶುಭಾಶಯ ಕೋರಿದರು.



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪನವರ ಹುಟ್ಟುಹಬ್ಬದ ಅಂಗವಾಗಿ ಮೈಸೂರು ಸಿಟಿ ಕಾಂಗ್ರೆಸ್ ಒಬಿಸಿ ಘಟಕದ ವತಿಯಿಂದ ಎನ್. ಆರ್.ನಾಗೇಶ್ ನೇತೃತ್ವದಲ್ಲಿ ಚೆಲುವಾಂಬ ಆಸ್ಪತ್ರೆಯಲ್ಲಿ ಹೆಣ್ಣು ಮಕ್ಕಳಿಗೆ ಹಣ್ಣು–ಹಂಪಲು ವಿತರಿಸಲಾಯಿತು. ಈ ವೇಳೆ ಒಬಿಸಿ ಘಟಕದ ಕಮಲ ಅನಂತರಾಮ್, ಹಿರಿಯ ಉಪಾಧ್ಯಕ್ಷ ಗೋಪಾಲ್, ಪ್ರಧಾನ ಕಾರ್ಯದರ್ಶಿ ಆರ್.ವಿನೋದ್ ಉಪ್ಪಾರ್, ಕಾರ್ಯದರ್ಶಿಗಳಾದ ಮಹೇಶ್, ರವಿಕುಮಾರ್, ಸಂಚಾಲಕ ಲಕ್ಷ್ಮಿ ನಾರಾಯಣ, ಸಂಘಟನೆ ಕಾರ್ಯದರ್ಶಿ ಶ್ರೀರಾಮ್ ಮಡಿವಾಳ್, ಕಾಂಗ್ರೆಸ್ ಪಕ್ಷದ ಮುಖಂಡರಾದ ರಾಜೇಶ್, ರಾಜಶೇಖರ್, ಲಕ್ಷ್ಮಿ, ಮೋಹನ್, ಜಯಲಕ್ಷ್ಮಿ, ವನಜ, ಸರಸ್ವತಿ ಇದ್ದರು.

ಗ್ರೀನ್‌ಫೀಲ್ಡ್ ಇಂಟಿಗ್ರೇಟೆಡ್ ಸಂಕೀರ್ಣದಲ್ಲಿ ಬೆಂಕಿ ಅವಘಡ



ರಾಜಸ್ಥಾನ: ಭಾರತದ ಮೊದಲ ಸಮಗ್ರ ಸಂಸ್ಕರಣಾಗಾರ–ಪೆಟ್ರೋಕೆಮಿಕಲ್ ಸಂಕೀರ್ಣದಲ್ಲಿ ಲೋಕಾರ್ಪಣೆ ಮುನ್ನವೇ ಬೆಂಕಿ ಅವಘಡ ಸಂಭವಿಸಿದೆ.

ಬಲೋತ್ರಾದಲ್ಲಿನ ಭಾರತದ ಮೊದಲ ಗ್ರೀನ್‌ಫೀಲ್ಡ್ ಇಂಟಿಗ್ರೇಟೆಡ್ ರಿಫೈನರಿ–ಕಮ್–ಪೆಟ್ರೋಕೆಮಿಕಲ್ ಸಂಕೀರ್ಣವನ್ನು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅನಾವರಣಗೊಳಿಸಬೇಕಿತ್ತು. ಇದಕ್ಕೂ ಮುನ್ನ ಬೆಂಕಿ ಕಾಣಿಸಿಕೊಂಡಿರುವುದರಿಂದ ಘಟಕದೊಳಗೆ ಸಾಕಷ್ಟು ಅವ್ಯವಸ್ಥೆ ಉಂಟಾಗಿದೆ.

ತೈಲ ಸಂಸ್ಕರಣಾಗಾರದ ಕಚ್ಚಾ ತೈಲ ಬಟ್ಟಿ ಇಳಿಸುವ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡು, ಕೆಲವೇ ಕ್ಷಣಗಳಲ್ಲಿ ತೀವ್ರಗೊಂಡಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಕೆಲವೇ ನಿಮಿಷಗಳಲ್ಲಿ ಸ್ಥಳಕ್ಕೆ ದಾವಿಸಿ, ಬೆಂಕಿ ನಂದಿಸಿದ್ದಾರೆ. ಘಟನೆಯಲ್ಲಿ ಯಾರಿಗೂ ತೊಂದರೆಯಾಗಿಲ್ಲ ಎನ್ನಲಾಗಿದೆ. ಈ ಯೋಜನೆಯು 79,450 ಕೋಟಿ ರೂ.ಗಿಂತ ಹೆಚ್ಚಿನ ಹೂಡಿಕೆಯನ್ನು ಒಳಗೊಂಡಿದ್ದು, ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಮತ್ತು ರಾಜಸ್ಥಾನ ಸರ್ಕಾರದ ಜಂಟಿ ಉದ್ಯಮವಾಗಿ ಅಭಿವೃದ್ಧಿಪಡಿಸಲಾಗಿದೆ. ಈ ಯೋಜನೆಯು ಭಾರತದ ಇಂಧನ ಮತ್ತು ಪೆಟ್ರೋಕೆಮಿಕಲ್ ವಲಯದಲ್ಲಿ ಮಹತ್ವದ ಮೈಲಿಗಲ್ಲಾಗಲಿದೆ.

ಬಸವಣ್ಣನವರ ವಚನಗಳಲ್ಲಿ ಎಲ್ಲರನ್ನು ಒಳಗೊಂಡ ಸಮಾಜ ಕಟ್ಟುವ ಉದ್ದೇಶವಿದೆ

- ನಿವೃತ್ತ ಪ್ರಾಧ್ಯಾಪಕ ಪ್ರೊ.ಎಂ.ಕೃಷ್ಣೇಗೌಡ ಅಭಿಮತ
- ಬಸವಣ್ಣನವರು ಪದವಿ ವ್ಯಾಮೋಹದಿಂದ ಬಹುದೂರ
- ಬಸವಣ್ಣನ ಕುರಿತಾದ ಎರಡು ಕೃತಿ ಬಿಡುಗಡೆ



ಸಂವಹನ ಪ್ರಕಾಶನ ಪ್ರಕಟಿತ 'ಬಸವ ವಚನ ಚಿಂತನ','ಅನುದಿನ ವಚನ' ಕೃತಿಗಳನ್ನು ಬಿಡುಗಡೆ ಗೊಳಿಸಲಾಯಿತು.

ಮೈಸೂರು,ಏ.20(ಎಸ್‌ಪಿಎನ್)– ಬಸವಣ್ಣನ ತತ್ವಗಳು ವಿಶ್ವದ ಎಲ್ಲಾ ವೇದಿಕೆಗಳಲ್ಲೂ ಪ್ರತಿಪಾದಿಸುವ, ಅನುಷ್ಠಾನಕ್ಕೆ ತರುವ ಸರಳ ತತ್ವಗಳಾಗಿವೆ ಎಂದು ಹಿರಿಯ ಸಾಹಿತಿ ಪ್ರೊ.ಎಂ. ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದಲ್ಲಿ ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಏರ್ಪಡಿಸಿದ್ದ 'ಬಹುಮುಖ ನೆಲೆಯಲ್ಲಿ ಬಸವಣ್ಣ' ಹಾಗೂ ಸಂವಹನ ಪ್ರಕಾಶನ ಪ್ರಕಟಿತ ಎರಡು ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು 'ಸಾಂಸ್ಕೃತಿಕ ನಾಯಕ ಬಸವಣ್ಣ' ವಿಷಯ ಕುರಿತು ಮಾತನಾಡಿದರು.

ಅಲ್ಲಮಪ್ರಭುವಿನ ವಚನಗಳು ನೇರ ನುಡಿಗಳಾಗಿವೆ. ಆದರೆ, ಬಸವಣ್ಣನವರ ವಚನಗಳು ವಿನಯ, ಸರಳತೆ, ಪದವಿ ವ್ಯಾಮೋಹ ಮುಕ್ತ ವಾತಾವರಣದಿಂದ ಕೂಡಿವೆ. ಬಸವಣ್ಣ ಎಲ್ಲರನ್ನೂ ಒಳಗೊಳ್ಳುವ ಸಮಾಜವನ್ನು ಕಟ್ಟುವ ಉದ್ದೇಶವನ್ನು ಅವರು ರಚಿಸಿದ ವಚನಗಳಿಂದ ತಿಳಿಯಬಹುದಾಗಿದೆ. ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ, ನಿಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ, ಕೂಡಲಸಂಗಮದೇವಾ ಎಂಬ ವಚನ ಪದವಿ ವ್ಯಾಮೋಹದಿಂದ ದೂರವಿರುವ ವ್ಯಕ್ತಿತ್ವವನ್ನು ತೋರುತ್ತವೆ ಎಂದರು.

ಸಾಮಾಜಿಕ ಬದ್ಧತೆಯನ್ನು ತೋರುವ ಬಸವಣ್ಣನವರ ವಚನ 'ಏನು ಬಂದಿರಿ ಹದುಳವಿದ್ದಿರೆ ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೇ?, ಕುಳ್ಳಿರೆಂದರೆ ನೆಲ ಕುಳಿಹೋಹುದೇ?, ಒಡನೆ ನುಡಿದರೆ ಶಿರ–ಹೊಟ್ಟೆಯೊಡೆವುದೇ?, ಕೊಡಲಿಲ್ಲದಿದ್ದರೊಂದು, ಗುಣವಿಲ್ಲದಿರ್ದಡೆ ಕೆಡಹಿ ಮೂಗಕೊಯ್ಯದೇ ಮಾಣ್ಬನೇ ಕೂಡಲಸಂಗಮದೇವಾ' ತಮ್ಮ ಸರಳ ವ್ಯಕ್ತಿತ್ವದ ಮೂಲಕ ಕಿರಿಯರನ್ನು ಗೌರವದಿಂದ ಕಾಣುವ ಮಾತುಗಳನ್ನು, ಈ ವಚನದ ಮೂಲಕದ ಇಡೀ ಮನುಕುಲಕ್ಕೆ ಸಾರಿದ್ದಾರೆ ಎಂದರು.

ಪೌರಾಣಿಕ ನಾಟಕಗಳಲ್ಲಿ ಪಾತ್ರಧಾರಿಗಳ ವೇಷಭೂಷಣ, ಡೈಲಾಗ್ ಎಲ್ಲವೂ ವಿಶೇಷದಿಂದ ಕೂಡಿರುತ್ತವೆ. ರಾಜನ ಪಾತ್ರಕ್ಕೆ ತಕ್ಕಂತೆ ಕಿರೀಟ, ಕೈಯಲ್ಲೊಂದು ಆಯುಧ ಹೀಗೆ ಎಲ್ಲವೂ ಇಂದಿನ ಮನುಷ್ಯನ ಜೀವನಶೈಲಿಗಿಂತ ವಿಭಿನ್ನವಾಗಿರುವುದನ್ನು ಪಾತ್ರಗಳಲ್ಲಿ ಕಾಣಬಹುದು. ಡೈಲಾಗ್‌ನಲ್ಲೂ ಬಹುವಚನ ಹೆಚ್ಚಾಗಿ ಬಳಸುತ್ತಾರೆ. ಏಕೆಂದರೆ, ಪೌರಾಣಿಕ ನಾಟಕಗಳು ನಡೆದ ಕಾಲಘಟ್ಟಕ್ಕೆ ತಕ್ಕಂತೆ ಈಗಿನ ಪ್ರೇಕ್ಷಕರಿಗೆ ತೋರಿಸಲು ಪಾತ್ರಧಾರಿಗಳಿಗೆ ವೇಷ–ಭೂಷಣ ಹಾಗೂ ನಡೆ, ನುಡಿಗಳಲ್ಲೂ ವ್ಯತ್ಯಾಸವಿರುವುದನ್ನು ತೋರಿಸಬಹುದಾಗಿದೆ ಎಂದು ಉದಾಹರಣೆ ಸಮೇತ ವಿವರಿಸಿದರು.

850 ವರ್ಷಗಳ ಹಿಂದೆ ಬಸವಣ್ಣ ಬೌದ್ಧಿಕವಾಗಿ ಹೇಗಿದ್ದರು ಎಂಬುದು ಯಾರಿಗೂ ತಿಳಿಯದು. ಆದರೆ, ಅವರು ರಚಿಸಿರುವ ವಚನಗಳ ಮೂಲಕ ಬಸವಣ್ಣನ ಜೀವನ ಶೈಲಿ, ಪದವಿ, ಸಾಮಾಜಿಕ ನಡವಳಿಕೆ ಎಲ್ಲವನ್ನೂ ವಚನಗಳ ಮೂಲಕ ಪರಿಚಯಿಸಲಾಗುತ್ತಿದೆ. ಬಸವಣ್ಣ ಅಂದಿನ ಕಾಲಕ್ಕೆ ಎಲ್ಲ ವರ್ಗದವರನ್ನು ಒಂದೇ ವ್ಯಕ್ತಿತ್ವದಡಿ ಕಾಣುತ್ತಿದ್ದರು ಎಂಬುದಕ್ಕೆ ಅವರ ವಚನಗಳಲ್ಲಿ ಕಾಣಬಹುದಾಗಿದೆ. ಹಾಗಾಗಿಯೇ ಅವರ ತತ್ವಗಳು ವಿಶ್ವದ ಯಾವುದೇ ವೇದಿಕೆಯಲ್ಲೂ ಗಟ್ಟಿಯಾಗಿ ಪ್ರತಿಪಾದಿಸಬಹುದಾಗಿದೆ ಎಂದರು.

850 ವರ್ಷಗಳ ಹಿಂದೆ ಬಸವಣ್ಣ ಅನುಸರಿಸಿದ ಸರಳ ವ್ಯಕ್ತಿತ್ವ, ಇಂದಿನ ಯುವಕರಿಗೆ ಮಾದರಿಯಾಗಲಿವೆ. ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನ ಮಂತ್ರಿ ಪಟ್ಟವಿದ್ದರೂ, ಇಲ್ಲದಿದ್ದರೂ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದ ನಡವಳಿಕೆ, ಸಾಮರ್ಥ್ಯಕ್ಕೆ ಅನುಗುಣವಾಗಿ ಕಾಯಕ ನಿಷ್ಠೆ ಎಲ್ಲವನ್ನೂ ಒಳಗೊಂಡಿದೆ. ಇಷ್ಟಲಿಂಗ ಪರಿಕಲ್ಪನೆಯಲ್ಲಿ ನಿನಗೆ ಇಷ್ಟಬಂದಾಗ ದೇವರನ್ನು ಪೂಜಿಸು ಎನ್ನುವ ಸರಳ ಧಾರ್ಮಿಕ ನಡೆ, ಇದು ಸಮ ಸಮಾಜ ನಿರ್ಮಾಣದ ಕುರುಹುಗಳಾಗಿವೆ ಎಂದರು.

'ಬಸವ ವಚನ ಚಿಂತನ' ಕೃತಿ ಲೇಖಕ ಪ್ರೊ.ಮೊರಬದ ಮಲ್ಲಿಕಾರ್ಜುನ ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತಾ, ಹಲವು ವಚನಕಾರರಿಗಿಂತ ಬಸವಣ್ಣ ನಡವಳಿಕೆ ವಿಭಿನ್ನ ಹಾಗೂ ವ್ಯಕ್ತಿಯಾಗಿ ಬಸವಣ್ಣ ಪ್ರತಿಪಾದಿಸುವ ನುಡಿಗಳು, ಪ್ರಧಾನ ಮಂತ್ರಿ ಸ್ಥಾನದಲ್ಲಿದ್ದು, ಸಾಮಾನ್ಯ ಜನರನ್ನು ಕಾಣುವ ಮನೋಭಾವಗಳು ಹಲವು ವಚನಗಳಲ್ಲಿ ಉಲ್ಲೇಖವಿದೆ. ಹಾಗಾಗಿ ಬಸವಣ್ಣ ತತ್ವಗಳಿಗೆ ದೇಶಗಳ ಗಡಿಯಿಲ್ಲ ಎಂದು ತಿಳಿಸಿದರು.

'ಅನುದಿನ ವಚನ' ಕೃತಿಯ ಲೇಖಕ, ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ, ವಚನಗಳ ಮೂಲಕ ಸಮಾಜದ ಸುಧಾರಣೆಗೆ ಶ್ರಮಿಸಿರುವ ಬಸವಣ್ಣನವರ ಸಾಮಾಜಿಕ ಕಳಕಳಿ ಎಂದೆಂದಿಗೂ ಪ್ರಸ್ತುತ ಎಂದರು.

ವೇದಿಕೆಯಲ್ಲಿ ಕುಂದೂರು ಮಠದ ಡಾ.ಶರತ್‌ಚಂದ್ರ ಸ್ವಾಮೀಜಿ, ಹಿರಿಯ ಸಾಹಿತಿ ಡಾ.ರಾಜಪ್ಪ ದಳವಾಯಿ, ಕೊಡಗು ವಿವಿ ಕುಲಪತಿ ಪ್ರೊ.ಅಶೋಕ್ ಸಂಗಪ್ಪ ಆಲೂರ, ಬಸವಬಳಗಗಳ ಒಕ್ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಆಯರಹಳ್ಳಿ ಪಿ.ವಿರೂಪಾಕ್ಷ ಸೇರಿದಂತೆ ಇತರರಿದ್ದರು.

> ಕನ್ನಡಿಗರು ವಚನಗಳನ್ನು ತಮ್ಮ ಬದುಕಿನ ಅಸ್ಮಿತೆಯಾಗಿ ಸ್ವೀಕರಿಸಬಹುದು. ಹನ್ನೆರಡನೇ ಶತಮಾನದ ವಚನಕಾರರು ಬಸವಣ್ಣನೇ ನಮ್ಮ ತಂದೆ–ತಾಯಿ ಎಂದು ಉಲ್ಲೇಖಿಸಿರುವ ಅನೇಕ ವಚನಗಳಿವೆ. ಹಾಗಾಗಿ ರಾಜ್ಯ ಸರ್ಕಾರ ಕೆಲವು ವರ್ಷಗಳ ಹಿಂದೆ ಘೋಷಿಸಿರುವ 'ಸಾಂಸ್ಕೃತಿಕ ನಾಯಕ ಬಸವಣ್ಣ' ಎಂದು ಘೋಷಿಸಿರುವುದು ಸಮಂಜಸವಾಗಿದೆ.
>
> – ಪ್ರೊ.ಕೃಷ್ಣೇಗೌಡ, ಹಿರಿಯ ಸಾಹಿತಿ

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಿಕಾಂ ಮೊದಲ ವರ್ಷ ಪ್ರವೇಶ ಉಚಿತ

ಮೈಸೂರು, 20(ಎಂಟಿವೈ)–ಮೈಸೂರಿನ ಗಂಗೋತ್ರಿ ಬಡಾವಣೆಯ ಜ್ಞಾನದೀಪ ಪ್ರಥಮ ದರ್ಜೆ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.80ರಷ್ಟು ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಬಿ.ಕಾಂ ಪದವಿಗೆ ಪ್ರಥಮ ವರ್ಷದ ಉಚಿತ ಪ್ರವೇಶಾವಕಾಶ ಹಾಗೂ ರೈತರು, ಪೌರಕಾರ್ಮಿಕರು, ಏಕಪೋಷಕರು ಹಾಗೂ ಕೂಲಿ ಕಾರ್ಮಿಕರ ಮಕ್ಕಳಿಗೆ ಶೇ.50ರಷ್ಟು ಶುಲ್ಕ ವಿನಾಯಿತಿ ನೀಡಲಾಗುವುದು ಎಂದು ಕಾಲೇಜಿನ ಪ್ರಾಂಶುಪಾಲರಾದ ಮೇರಿ ಫ್ಲೋರೆನ್ಸ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧ್ಯಾಪನ್ ಎಜುಕೇಷನ್ ಎಂಪೈರ್ ನೇತೃತ್ವದಲ್ಲಿ ಈ ಯೋಜನೆ ಹಮ್ಮಿಕೊಳ್ಳಲಾಗಿದೆ. ಏಕ ಪೋಷಕರು, ರೈತರು, ಪೌರ ಕಾರ್ಮಿಕರು ಹಾಗೂ ದಿನಗೂಲಿ ನೌಕರರ ಮಕ್ಕಳಿಗೂ ವಾರ್ಷಿಕ ಶುಲ್ಕದಲ್ಲಿ ಶೇ.50 ರಿಯಾಯಿತಿ ನೀಡಲಾಗುವುದು. ಮಾಹಿತಿಗೆ ಮೊ.ಸಂ. 97405 00533 ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಪಿಯು ವಿಭಾಗದ ಪ್ರಾಂಶುಪಾಲ ಪ್ರವೀಣ್, ಅಧ್ಯಾಪನ್ ಸಲಹೆಗಾರ ಸಂಧಾನಕೃಷ್ಣ ಇದ್ದರು.

ಮೈಸೂರು ಮಿತ್ರ

ಬಸವಣ್ಣನವರ ವಚನಗಳು ಮಾನವನಿಗೆ ದಾರಿ ದೀಪ

ವಾಟಾಳು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ



ತಿ.ನರಸೀಪುರದ ವಿವೇಕಾನಂದನಗರದಲ್ಲಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಸಭಾ ಭವನದಲ್ಲಿ ಬಸವ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ತಿ.ನರಸೀಪುರ, ಏ.20– ವಿಶ್ವಗುರು ಬಸವಣ್ಣನವರ ವಚನಗಳು ಜನರ ಜೀವನಕ್ಕೆ ದಾರಿ ದೀಪವಾಗಿವೆ ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಪೀಠಾಧ್ಯಕ್ಷ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ವಿವೇಕಾನಂದ ನಗರದಲ್ಲಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಸಭಾ ಭವನದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಜೀವನದಲ್ಲಿ ಕಷ್ಟ ಬಂದಾಗ ನಾವು ವಚನಗಳನ್ನು ಓದಬೇಕು. ವಚನಗಳು ನಮಗೆ ಸಾಂತ್ವನ ಹೇಳುತ್ತವೆ. ಮನಸ್ಸಿಗೆ ಧೈರ್ಯ ತುಂಬುತ್ತವೆ. ವಚನಗಳು ಮನಸ್ಸಿನ ಕತ್ತಲೆಯನ್ನು ಕಳೆಯುತ್ತವೆ. ನಮ್ಮ ಬದುಕಿಗೆ ನೆಮ್ಮದಿ ತುಂಬುತ್ತವೆ. ವಚನಗಳ ಅಧ್ಯಯನ ಹೆಚ್ಚಾದಂತೆ ನಮ್ಮ ಆಚರಣೆಗಳಲ್ಲಿ ಪರಿವರ್ತನೆಯಾಗುತ್ತದೆ. ಮೂಢ ನಂಬಿಕೆ ಕಳೆದು ಸದ್ಭಕ್ತಿ ಮೂಡುತ್ತದೆ. ವಚನಗಳ ಪಾರಾಯಣ ಮಾಡುವುದೆಂದರೆ ಶರಣರ ಜೊತೆಗೆ ಸಂವಾದ ನಡೆಸಿದಂತೆ ಎಂದರು.

ಬಸವಣ್ಣನವರು ಅನುಭವ ಮಂಟಪದಲ್ಲಿ ಎಲ್ಲಾ ಜಾತಿ–ಧರ್ಮದವರಿಗೂ ಅವಕಾಶ ಕಲ್ಪಿಸಿ ಸಮಾಜದಲ್ಲಿ ಜಾತ್ಯಾತೀತ ಭಾವನೆ ಪ್ರತಿಪಾದಿಸಿದರು. ಇಂತಹ ಮಹಾನ್ ಚೇತನ ಇಂದು ಜಗತ್ತಿಗೆ ಬೇಕಾಗಿ ಕಾಣುತ್ತಿರುವುದು ನಾಡಿನ ಭಾಗ್ಯವಾಗಿದೆ ಎಂದರು.

ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ಮಾತನಾಡಿ, ಬಸವಣ್ಣನವರು ಮನುಕುಲದ ಶ್ರೇಯಸ್ಸಿಗಾಗಿ ಅವಿರತ ಹೋರಾಟ ನಡೆಸುವ ಮೂಲಕ ಸಮಾನತೆಯ ಸಾಮಾಜಿಕ ಕ್ರಾಂತಿಯನ್ನು ಜನಮಾನಸದಲ್ಲಿ ಬೆಳೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರ ತತ್ವ, ಆದರ್ಶಗಳು ಇಂದಿಗೂ ಜನ ಮಾನ್ಯತೆ ಪಡೆದುಕೊಳ್ಳುತ್ತಿವೆ ಎಂದರು.

ಜನರು ಬಸವಣ್ಣ, ಅಂಬೇಡ್ಕರ್ ಅವರ ಬಗ್ಗೆ ಅಧ್ಯಯನ ಮಾಡುತ್ತಾರೆ. ಆದರೆ ಅವರ ತತ್ವಾದರ್ಶಗಳಂತೆ ನಡೆಯುವುದಿಲ್ಲ. ನಮ್ಮ ಹವ್ಯಾಸಗಳು ಬೇರೆ ಬೇರೆ ಇರುತ್ತವೆ ಎಂದ ಅವರು ಬಸವಣ್ಣನವರು ಕಳಬೇಡ ಕೊಲಬೇಡ ಹುಸಿಯ ನುಡಿಯಬೇಡ ಎಂದಿದ್ದಾರೆ. ಹೀಗಾಗಿ ಅಸ್ಪೃಶ್ಯತೆ, ದೌರ್ಜನ್ಯ ಇರವಾರದು ಎಂದರು.

ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ಮಾತನಾಡಿದರು. ವೀರಶೈವ ಮಹಾಸಭಾ ಕಾರ್ಯದರ್ಶಿ ಕುರುಬೂರು ಶಿವು, ಫ್ಯಾನ್ಸಿ ಮೋಹನ್, ಅಂಗಡಿ ಶೇಖರ್, ಹೆಚ್.ಎನ್. ಉಮೇಶ್, ವಿಜಯಕುಮಾರ್, ಉಪನ್ಯಾಸಕ ಕುಮಾರಸ್ವಾಮಿ, ಹಿರಿಯೂರು ವೀರೇಂದ್ರ, ಕಾರ್ ಮಲ್ಲಪ್ಪ, ಶಂಭು ದೇವನಪುರ ಸುಗಂಧರಾಜು, ರಮೇಶ್, ಎನ್.ಲೋಕೇಶ್, ಡಿ.ಎಲ್.ಮಹದೇವಪ್ಪ, ಕಿರಗಸೂರು ಮಹದೇವಸ್ವಾಮಿ, ರೂಪಾ ಪರಮೇಶ್, ವಿಜಯಲಕ್ಷ್ಮಿ, ಅಂಬಿಕ ಮತ್ತಿತರರಿದ್ದರು.

> “ಸಮಾಜದಲ್ಲಿನ ಜಾತಿ ವರ್ಗಗಳ ವ್ಯವಸ್ಥೆ ವಿರುದ್ಧ ಹೋರಾಟ ನಡೆಸಿದ ಬಸವಣ್ಣನವರು ಎಲ್ಲರಲ್ಲೂ ಸಮಾನತೆಯ ಬೀಜ ಮಂತ್ರ ಜಪಿಸುವಂತೆ ಮಾಡುವ ಮೂಲಕ ಅನುಭವ ಮಂಟಪ ಸ್ಥಾಪಿಸಿ, ಸಾಮಾಜಿಕ ಕ್ರಾಂತಿ ಹುಟ್ಟು ಹಾಕಿದರು. ಕಾಯಕವೇ ಕೈಲಾಸ ಎನ್ನುವ ತತ್ವದಲ್ಲಿ ಕಾಯಕ ನಿಷ್ಠೆಗೆ ಪ್ರಾಧಾನ್ಯತೆ ನೀಡಿ ಪ್ರತಿಯೊಬ್ಬರಲ್ಲೂ ವೃತ್ತಿ ಗೌರವ ಬೆಳೆಸಿದ ಕೀರ್ತಿ ಕಾಯಕ ಯೋಗಿ ಬಸವಣ್ಣನವರಿಗೆ ಸಲ್ಲುತ್ತದೆ. ಅನುಭವ ಮಂಟಪದಲ್ಲಿ ಅವರು ರಚಿಸಿದ ವಚನ ಸಾಹಿತ್ಯದ ತತ್ವ ಆದರ್ಶಗಳೇ ಜಾತ್ಯಾತೀತ, ಸಮಾನತೆ ಹಾಗೂ ಸಹಬಾಳ್ವೆ. ಅವುಗಳನ್ನು ಇಂದಿನ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ನಾವು ಅಳವಡಿಸಿಕೊಂಡು ಕಾರ್ಯ ರೂಪಕ್ಕೆ ತರುವ ಪ್ರಯತ್ನ ಮಾಡಬೇಕಿದೆ.
>
> –ಎಸ್ಎಂಆರ್ ಪ್ರಕಾಶ್, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ.

ಸಂವಿಧಾನದ ರಕ್ಷಕ, ಶೋಷಿತರ ಧ್ವನಿ ಸಚಿವ ಮಹದೇವಪ್ಪ

ಶ್ರೀಕಂಠೇಶ್ವರ ದೇವಾಲಯ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಆರ್.ಇಂಧನ್ ಬಾಬು



ಸಚಿವ ಹೆಚ್.ಸಿ.ಮಹದೇವಪ್ಪ ಅವರ ಹುಟ್ಟುಹಬ್ಬದ ಅಂಗವಾಗಿ ಶ್ರೀಕಂಠೇಶ್ವರ ದೇವಾಲಯದಲ್ಲಿ ಕಾಂಗ್ರೆಸ್ ಮುಖಂಡರು ಪೂಜೆ ಸಲ್ಲಿಸಿದರು.

> ಹೆಚ್.ಸಿ.ಮಹದೇವಪ್ಪ ಅವರು ರಾಜಕಾರಣಿಯಾಗಿ ಹಲವಾರು ಇಲಾಖೆಗಳ ಸಚಿವರಾಗಿ ಕೆಲಸ ನಿರ್ವಹಿಸಿದ್ದಾರೆ, ಅವರು ಮುಂದೆ ರಾಜ್ಯದ ದಲಿತ ಮುಖ್ಯಮಂತ್ರಿಯಾಗುವ ಅರ್ಹತೆಯನ್ನು ಹೊಂದಿದ್ದು, ಶ್ರೀಕಂಠೇಶ್ವರ ಸ್ವಾಮಿಯವರ ಆಶೀರ್ವಾದದಿಂದ ರಾಜ್ಯದ ಮುಖ್ಯಮಂತ್ರಿ ಆಗಲಿ ಎಂದು ದೇವರಲ್ಲಿ ಪ್ರಾರ್ಥಿಸುವೆ.
>
> – ಹಾಡ್ಯ ರಂಗಸ್ವಾಮಿ, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ.

ನಂಜನಗೂಡು: ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ತಮ್ಮ ರಾಜಕೀಯ ತತ್ವ ಸಿದ್ಧಾಂತಗಳ ಮೂಲಕ ಶೋಷಿತ ವರ್ಗದ ಪ್ರಖರ ಧ್ವನಿಯಾಗಿ, ಸಂವಿಧಾನದ ರಕ್ಷಕರಾಗಿ, ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸುವ ಮೂಲಕ ಈ ಭಾಗದ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದು ಶ್ರೀಕಂಠೇಶ್ವರ ದೇವಾಲಯ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಆರ್.ಇಂಧನ್ ಬಾಬು ತಿಳಿಸಿದರು.

ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಅವರ ಹುಟ್ಟುಹಬ್ಬದ ಅಂಗವಾಗಿ ನಂಜನಗೂಡು ಮತ್ತು ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಶ್ರೀಕಂಠೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ದೇವಾಲಯದ ಆವರಣದಲ್ಲಿ ಕೇಕ್ ಕತ್ತರಿಸಿ ಸಂಭ್ರಮಾಚರಣೆ ಆಚರಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಸಚಿವ ಡಾ.ಹೆಚ್.ಸಿ.ಮಹದೇವಪ್ಪ ರಾಜಕೀಯ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ ಪ್ರಜಾಪ್ರಭುತ್ವದ ಮೌಲ್ಯ ಉಳಿಸಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಅಲ್ಲದೆ ಸಂವಿಧಾನದ ಆಶಯಗಳ ಮಹತ್ವವನ್ನು ಜನರಿಗೆ ತಿಳಿಸುವ ಮೂಲಕ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿದ್ದಾರೆ. ಹಳೆ ಮೈಸೂರು ಭಾಗದ ಶೋಷಿತರ ಧ್ವನಿಯಾಗಿ, ಅಭಿವೃದ್ಧಿ ಕೆಲಸ ಮಾಡುವ ಮೂಲಕ ಈ ಭಾಗದ ಜನರ ಮನಸ್ಸಿನಲ್ಲಿ ಶಾಶ್ವತ ಜನನಾಯಕರಾಗಿದ್ದಾರೆ. ಅವರಿಗೆ ಶ್ರೀಕಂಠೇಶ್ವರ ಆಯಸ್ಸು, ಆರೋಗ್ಯ ನೀಡಿ ಮುಂದೆ ದಲಿತ ಮುಖ್ಯಮಂತ್ರಿಯಾಗುವ ಅವಕಾಶ ದೊರಕಲಿ ಎಂದು ಹೇಳಿದರು.

ಮುಖಂಡರಾದ ಎನ್.ಟಿ.ಗಿರೀಶ್, ದಿನೇಶ್, ಬಿ.ಪಿ.ಮಹದೇವು, ಹೆಜ್ಜಿಗೆ ಕೃಷ್ಣ, ಶಿವಶಂಕರ್, ನಗರ್ಲೆ ಗುರುಪಾದು, ತೊರೆಮಾವು ಗಿರೀಶ್, ಜಿಪಂ ಮಾಜಿ ಸದಸ್ಯ ಚೋಳರಾಜು, ಕಾಂಗ್ರೆಸ್ ಎಸಿ ಘಟಕ ರಾಜ್ಯ ಪ್ರಧಾನ ಕಾರ್ಯದರ್ಶಿ, ರವಿಪ್ರಕಾಶ್ ಸೇರಿದಂತೆ ಇತರರಿದ್ದರು.

ಹುಣಸೂರಲ್ಲಿ ಶಕ್ತಿದೇವತೆ ಮುತ್ತುಮಾರಮ್ಮ ದೇವಾಲಯದ 23ನೇ ವಾರ್ಷಿಕೋತ್ಸವ

ಬೆಳ್ಳಿ ರಥ ಲೋಕಾರ್ಪಣೆಗೊಳಿಸಿದ ಸಿಎಂ ಸಿದ್ದರಾಮಯ್ಯ



ನೂತನ ಬೆಳ್ಳಿ ರಥವನ್ನು ಸಿಎಂ ಸಿದ್ದರಾಮಯ್ಯ ಲೋಕಾರ್ಪಣೆಗೊಳಿಸಿದರು.

ಹುಣಸೂರು, ಏ.20– ಹುಣಸೂರಿನ ಮಹಾಶಕ್ತಿ ದೇವತೆ ಮುತ್ತುಮಾರಮ್ಮ ತಾಯಿ ತನ್ನ ಬೆಳ್ಳಿ ರಥ ಎಳೆಯಲು ನನಗೆ ಪ್ರೇರಣೆ ನೀಡಿ ಇಲ್ಲಿವರೆಗೂ ಕರೆ ತಂದಿದ್ದಾಳೆ. ಆ ಮಹಾಶಕ್ತಿಯ ಶ್ರೀರಕ್ಷೆ ನನ್ನ ಮೇಲಿರಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಮಾರಿಗುಡಿ ಬೀದಿಯಲ್ಲಿರುವ ಶಕ್ತಿ ದೇವತೆ ಶ್ರೀಮುತ್ತುಮಾರಮ್ಮ ದೇವಾಲಯದ 23ನೇ ವಾರ್ಷಿಕೋತ್ಸವ ಅಂಗವಾಗಿ ಸುಮಾರು 3 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಬೆಳ್ಳಿ ರಥವನ್ನು ಲೋಕಾರ್ಪಣೆಗೊಳಿಸಿ, ರಥದಲ್ಲಿ ಪ್ರತಿಷ್ಠಾಪಿಸಿದ್ದ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಧಾರ್ಮಿಕ ಕ್ಷೇತ್ರಗಳಲ್ಲಿ ಅದರಲ್ಲೂ ಇಂತಹ ಶಕ್ತಿ ದೇವತೆಗಳನ್ನು ಆರಾಧಿಸುವ ಮೂಲಕ ಪ್ರತಿಯೊಬ್ಬರೂ ಮನಃಶಾಂತಿ ಪಡೆಯುವ ಮೂಲಕ ಶಾಂತಿಯುತ ಜೀವನ ನಡೆಸಲು ಮುಂದಾಗಬೇಕು ಎಂದರು.

ದೇವಸ್ಥಾನ ಮಂಡಳಿ ಅಧ್ಯಕ್ಷ ಹೆಚ್.ವೈ.ಮಹದೇವ್ ಮಾತನಾಡಿ, ಶ್ರೀಮುತ್ತುಮಾರಮ್ಮ ದೇವಾಲಯದ ಆಡಳಿತ ಮಂಡಳಿ ಹಿಂದಿನ ಅಧ್ಯಕ್ಷ ದಿವಂಗತ ದೊಡ್ಡಮನೆ ರಾಜಲಿಂಗಯ್ಯ ಅವರಿಗೆ ದೇವಿ ಪ್ರೇರಣೆಯಾಗಿ ಅಮ್ಮನ ವರಿಗೆ ಬೆಳ್ಳಿ ರಥ ನಿರ್ಮಿಸಲು ಆಡಳಿತ ಮಂಡಳಿ ಸದಸ್ಯರೊಂದಿಗೆ ಚರ್ಚಿಸಿದ್ದರು. ಆದರೆ ಅವರು ನಿಧನರಾದ ಬಳಿಕ ಅವರ ಪುತ್ರ ಅಶೋಕ್ ರಾಜಲಿಂಗಯ್ಯ ಅವರು ದೇವಾಲಯದ ಆಡಳಿತ ಮಂಡಳಿಗೆ ಸೇರಿದ ನಂತರ ತಮ್ಮ ತಂದೆಯವರ ಆಸೆಯನ್ನು ಪೂರೈಸಬೇಕೆಂದು ಸಭೆಯಲ್ಲಿ ಚರ್ಚಿಸಿ 6 ತಿಂಗಳ ಕಾಲಾವಧಿಯಲ್ಲಿ ನೂರಾರು ದಾನಿಗಳಿಂದ ದೇಣಿಗೆ ಸಂಗ್ರಹಿಸಿ 3 ಕೋಟಿ ರೂ. ವೆಚ್ಚದಲ್ಲಿ ನೂತನ ರಥವನ್ನು ನಿರ್ಮಿಸಿದ್ದಾರೆ ಎಂದರು.

ಈ ರಥ 12.5 ಅಡಿ ಎತ್ತರವಿದ್ದು, 6 ಅಡಿ ಅಗಲವಿದೆ. ಈ ರಥದ ನಿರ್ಮಾಣಕ್ಕೆ 125 ಕೆಜಿ ಬೆಳ್ಳಿ ಬಳಸಲಾಗಿದೆ. ಹಾಸನದ ಭೀಮ ಜ್ಯೂಯೆಲರ್ಸ್ ಅವರು ಕಾರ್ಕಳದ ಶಿಲ್ಪಿಗಳಿಂದ 6 ತಿಂಗಳಲ್ಲಿ ಬೆಳ್ಳಿ ರಥ ನಿರ್ಮಿಸಿ ಕೊಟ್ಟರು. ಈ ಕಾರ್ಯದಲ್ಲಿ ಶಕ್ತಿ ದೇವತೆ ಮುತ್ತುಮಾರಮ್ಮ ಎಲ್ಲರ ಮನಸ್ಸಿನಲ್ಲಿ ಒಳ್ಳೆಯ ಭಾವನೆ ಮೂಡಿಸಿ ಬೇಗ ರಥ ನಿರ್ಮಾಣವಾಗಲು ಪ್ರೇರಣೆ ನೀಡಿದ್ದಾಳೆ ಎಂದರು.

ಸಿಎಂಗೆ 125 ಕೆಜಿ ಸೇಬಿನ ಹಾರ: ನಗರಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಕ್ರೇನ್ ಮೂಲಕ 125 ಕೆಜಿ ತೂಕದ ಸೇಬಿನ ಹಾರ ಹಾಕಿ ಸಂಭ್ರಮಿಸಿದರು. ಈ ವೇಳೆ ಮಹಿಳೆಯರು ಆರತಿ ಎತ್ತಿ ಶುಭ ಹಾರೈಸಿದರು. ಈ ವೇಳೆ ಮಾತನಾಡಿದ ಮಹಿಳೆಯರು ನೀವು ನೀಡಿದ ಗ್ಯಾರಂಟಿ ಯೋಜನೆಗಳು ನಮಗೆ ಫಲಪ್ರದವಾಗಿವೆ. ಗೃಹಲಕ್ಷ್ಮಿ ಯೋಜನೆ ಅಡಿ ನೀಡುವ 2 ಸಾವಿರ ರೂ.ಗಳು ವಯೋವೃದ್ಧರ ಔಷಧಗಳಿಗೆ ಖರ್ಚಾದರೇ, ಮತ್ತೆ ಕೆಲವರ ಮಕ್ಕಳ ವಿದ್ಯಾಭ್ಯಾಸ, ಮನೆ ಖರ್ಚಿಗೆ ಸಹಾಯವಾಗುತ್ತಿದೆ. ಅಲ್ಲದೇ ಶಕ್ತಿ ಯೋಜನೆಯಡಿ ಕೆಎಸ್ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿರುವುದರಿಂದ ಸಾಕಷ್ಟು ಧಾರ್ಮಿಕ ಕ್ಷೇತ್ರಗಳನ್ನು ಕಣ್ತುಂಬಿಕೊಳ್ಳುವಂತಾಯಿತು ಎಂದು ಹರ್ಷ ವ್ಯಕ್ತಪಡಿಸಿದರು.

ಇದೇ ವೇಳೆ ಮೆರವಣಿಗೆಯ ದಾರಿಯುದ್ದಕ್ಕೂ ನೆರೆದಿದ್ದ ಸಾರ್ವಜನಿಕರು ಸಿಎಂ ಸಿದ್ದರಾಮಯ್ಯನವರಿಗೆ ಜೈಕಾರ ಹಾಕಿ ಪುಷ್ಪವೃಷ್ಟಿಗೈದರು. ಕಾರ್ಯಕ್ರಮದಲ್ಲಿ ದೇವಾಲಯದ ಆಡಳಿತ ಮಂಡಳಿ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು. ಈ ಸಂದರ್ಭ ರಾಜ್ಯ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್, ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಮಡಿಲು ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಧ್ಯಕ್ಷೆ ಡಿ.ಎಂ.ತ್ರಿವೇಣಿ, ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ, ದೇವಸ್ಥಾನ ಸಮಿತಿಯ ಉಪಾಧ್ಯಕ್ಷ ಹೆಚ್.ಎಸ್.ಶಿವಯ್ಯ, ಪ್ರಧಾನ ಕಾರ್ಯದರ್ಶಿ ಅಶೋಕ್ ರಾಜಲಿಂಗಯ್ಯ, ಜಂಟಿ ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ಯೋಗೇಶ್, ನಿರ್ದೇಶಕರು ಇತರರಿದ್ದರು.

ಹಣ್ಣು ಹಂಪಲು ವಿತರಣೆ



ತಿ.ನರಸೀಪುರ ತಾಲೂಕಿನ ಬನ್ನೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಹುಟ್ಟುಹಬ್ಬ ಅಂಗವಾಗಿ ಪುರಸಭಾ ಮಾಜಿ ಅಧ್ಯಕ್ಷ ಮುನಾವರ್ ಪಾಷ ನೇತೃತ್ವದಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ಪ್ರೊ.ಡಾ.ಜ್ಞಾನ ಪ್ರಕಾಶ್, ಪಾರ್ಥಸಾರಥಿ, ರಾಮಲಿಂಗ, ಅಸದ್, ರಮೇಶ್, ಡಾ.ಮಾಲತೇಶ್ ಇತರರಿದ್ದರು.

ದೇಶ ಅಭಿವೃದ್ಧಿ ಪಥದಲ್ಲಿ ಸಾಗಲು ಬಸವಣ್ಣನ ಕೊಡುಗೆ ಅಪಾರ



ಬಸವಣ್ಣನವರ ಪುತ್ಥಳಿಗೆ ಶಾಸಕ ಡಿ.ರವಿಶಂಕರ್ ಮಾಲಾರ್ಪಣೆ ಮಾಡಿದರು.


ಕೆ.ಆರ್.ನಗರ: ಸಮಾಜದ ಮುಖಂಡರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಈಗಿರುವ ಬಸವ ಭವನದ ನಿವೇಶನವನ್ನು ಶಾಶ್ವತವಾಗಿ ಟ್ರಸ್ಟ್ ಹೆಸರಿಗೆ ಬರೆಸುವ ಜೊತೆಗೆ ಅನುದಾನ ಕೊಡಿಸುವುದಾಗಿ ಶಾಸಕ.ಡಿ.ರವಿಶಂಕರ್ ಹೇಳಿದರು.

ತಾಲೂಕು ಆಡಳಿತದಿಂದ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪಟ್ಟಣದ ಬಸವೇಶ್ವರ ಬ್ಲಾಕ್‌ನಲ್ಲಿರುವ ಬಸವಣ್ಣನವರ ಪುತ್ಥಳಿಗೆ ವೀರಶೈವ ಲಿಂಗಾಯಿತ ಸಮಾಜ ಮುಖಂಡರೊಟ್ಟಿಗೆ ಮಾಲಾರ್ಪಣೆ ಮಾಡಿ ಜೊತೆಗೆ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಸಮ ಸಮಾಜ ನಿರ್ಮಾಣದ ಗುರಿಯನ್ನು ಬಸವಣ್ಣನವರು ಹೊಂದಿದ್ದು, ದೇಶ ಅಭಿವೃದ್ಧಿ ಪಥದಲ್ಲಿ ಸಾಗಲು ಬಸವಣ್ಣನವರ ಕೊಡುಗೆ ಅಪಾರ. ವೀರಶೈವ ಲಿಂಗಾಯತ ಸಮಾಜ ಇಷ್ಟಲಿಂಗ ಧಾರಣೆ ಮಾಡುವ ಮೂಲಕ ಪೂಜೆ ಸಲ್ಲಿಸಲಾಗುತ್ತಿದೆ ಎಂದರು.

ಜಿಪಂ ಮಾಜಿ ಉಪಾಧ್ಯಕ್ಷ ಚನ್ನಬಸಪ್ಪ, ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಮಾತನಾಡಿದರು. ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ನಿರ್ದೇಶಕ ಸಯ್ಯದ್ ಜಾಬೀರ್, ಸಿ.ಪಿ.ರಮೇಶ್, ರವಿ, ತಿಮ್ಮಶೆಟ್ಟಿ, ಪ್ರಕಾಶ್, ಮನೋಹರಿ, ಜಿಲ್ಲಾ ನಿರ್ದೇಶಕಿ ರೂಪಾ, ಸಣ್ಣಲಿಂಗಪ್ಪ ಮಹೇಶ್, ಗಂಗಾಧರ್, ಆರ್.ಕೃಷ್ಣಪ್ಪ, ಅಣ್ಣಯ್ಯ, ಜಿ.ಎಸ್.ರಮೇಶ್, ಡಾ.ಹರೀಶ್ ಸೇರಿದಂತೆ ಅನೇಕರಿದ್ದರು.

ಹುಣಸೂರಲ್ಲಿ ಸಿಎಂಗೆ ಸನ್ಮಾನ



ಹುಣಸೂರಿನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಅಭಿನಂದಿಸಿದರು. ಈ ವೇಳೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಇತರರು ಉಪಸ್ಥಿತರಿದ್ದರು.

ವಿವಿಧ ಸೇವಾ ಕಾರ್ಯಗಳೊಂದಿಗೆ

ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹುಟ್ಟುಹಬ್ಬ ಆಚರಣೆ



ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹುಟ್ಟುಹಬ್ಬ ಅಂಗವಾಗಿ ತಿ.ನರಸೀಪುರದ ಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ವಿಶೇಷ ಪೂಜೆ ಸಲ್ಲಿಸಿದರು.

ತಿ.ನರಸೀಪುರ, ಏ.20– ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಹುಟ್ಟುಹಬ್ಬವನ್ನು ಆಪ್ತ ಸಹಾಯಕ ಬಸವರಾಜು ಅವರ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ವಿವಿಧ ಸೇವಾ ಕಾರ್ಯಗಳೊಂದಿಗೆ ಸೋಮವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬೆಳಗ್ಗೆ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಬಳಿ ಜಮಾಯಿಸಿದ ನೂರಾರು ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಕುಟುಂಬದವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ, ಆಯಸ್ಸು ವೃದ್ಧಿಗೆ ಪ್ರಾರ್ಥನೆ ಸಲ್ಲಿಸಿದರು.

ಬಳಿಕ ಅಲ್ಲಿಂದ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತೆರಳಿದ ಕಾರ್ಯಕರ್ತರು ಆಡಳಿತ ವೈದ್ಯಾಧಿಕಾರಿ ಡಾ.ಅಭಿಲಾಷ್ ಸಮ್ಮುಖದಲ್ಲಿ ನೂರಾರು ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ ಸಚಿವರ ಜನ್ಮ ದಿನವನ್ನು ಅರ್ಥಪೂರ್ಣವಾಗಿಸಿದರು. ನಂತರ ಪಟ್ಟಣದ ಚಾಮರಾಜನಗರ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಗೆ ತೆರಳಿದ ಕಾರ್ಯಕರ್ತರು, ಮುಖಂಡರು ಬಸವ ಜಯಂತಿ ಹಿನ್ನೆಲೆಯಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಕೇಕ್ ಕತ್ತರಿಸಿ ಸಂಭ್ರಮಾಚರಣೆ: ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಸಚಿವ ಮಹದೇವಪ್ಪನವರ ಹುಟ್ಟುಹಬ್ಬದಲ್ಲಿ ಕಾರ್ಯಕರ್ತರು ಕೇಕ್ ಕತ್ತರಿಸಿ, ಪರಸ್ಪರ ಸಿಹಿ ತಿನಿಸಿ ಸಂಭ್ರಮಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿ, ಡಾ.ಹೆಚ್.ಸಿ.ಮಹದೇವಪ್ಪನವರು ತಮ್ಮ 40 ವರ್ಷಗಳ ರಾಜಕೀಯ ಜೀವನದಲ್ಲಿ ಕ್ಷೇತ್ರ ಹಾಗೂ ರಾಜ್ಯದಲ್ಲಿ ಅನೇಕ ಅಭಿವೃದ್ಧಿ ಪರ ಕೆಲಸ ಮಾಡಿದ್ದು, ಅವರ ಸಾಧನೆಗೆ ಸಾಟಿ ಇಲ್ಲ. ತಮ್ಮ ಅಭಿವೃದ್ಧಿ ಕಾರ್ಯಗಳಿಂದಾಗಿ ಬಿಜೆಪಿ ಸರ್ಕಾರದಿಂದಲೇ ಶಹಬ್ಬಾಸ್ ಗಿರಿ ಪಡೆದ ಜನಪರ ನಾಯಕ ಹೆಚ್.ಸಿ.ಮಹದೇವಪ್ಪ ಅವರು ಮತ್ತಷ್ಟು ಹೆಚ್ಚಿನ ಅಧಿಕಾರ ಪಡೆಯುವಂತಾಗಬೇಕು. ಸಚಿವರು ಎಲ್ಲಾ ಸಮಾಜದವರನ್ನು ಸಮಾನ ದೃಷ್ಟಿಯಿಂದ ಕಾಣುತ್ತಿದ್ದು, ಯಾರಿಗೂ ಭೇದ ಭಾವ ಮಾಡಲಿಲ್ಲ. ಹಾಗಾಗಿಯೇ ಅವರು ಇಂದು ರಾಜಕೀಯದಲ್ಲಿ ಉತ್ತುಂಗ ಶಿಖರವೇರಲು ಸಾಧ್ಯವಾಯಿತು. ಹಾಗಾಗಿ ಅವರು ಮತ್ತಷ್ಟು ಅವಧಿಗೆ ಕ್ಷೇತ್ರದಿಂದ ಆಯ್ಕೆಯಾಗಿ ಬರಬೇಕೆಂಬುದು ಇಡೀ ಕ್ಷೇತ್ರದ ಜನತೆಯ ಆಶಯವಾಗಿದೆ ಎಂದು ತಿಳಿಸಿದರು.

ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ಮಾತನಾಡಿ, ಡಾ.ಹೆಚ್.ಸಿ.ಮಹದೇವಪ್ಪನವರು ಸಮಾಜದ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ತಮ್ಮ ರಾಜಕೀಯ ಜೀವನ ಸಮರ್ಪಿಸಿದ ನಾಯಕರಲ್ಲಿ ಒಬ್ಬರು. ಪಕ್ಷದ ಪ್ರಮುಖ ನಾಯಕರಾಗಿ ಅವರು ಹಲವು ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಸಚಿವರಾಗಿ ಕಾರ್ಯ ನಿರ್ವಹಿಸುವ ವೇಳೆ ಮೂಲ ಸೌಕರ್ಯ, ಗ್ರಾಮೀಣಾಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯದ ಕ್ಷೇತ್ರಗಳಲ್ಲಿ ಮಹತ್ವದ ಯೋಜನೆಗಳನ್ನು ರೂಪಿಸಿ ಜನಮನ ಗೆದ್ದಿದ್ದಾರೆ. ಹಾಗಾಗಿ ಮುಂಬರುವ 2028ರಲ್ಲಿ ಅವರು ಮುಖ್ಯಮಂತ್ರಿಯಾಗಿ ಸಮಗ್ರ ಅಭಿವೃದ್ಧಿಗೆ ಕೊಡುಗೆ ನೀಡಬೇಕೆಂಬುದು ಕ್ಷೇತ್ರದ ಜನತೆಯ ಅಭಿಪ್ರಾಯವಾಗಿದೆ ಎಂದರು.

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ಬ್ಲಾಕ್ ಕಾಂಗ್ರೆಸ್ ಮೀನುಗಾರರ ಘಟಕದ ಅಧ್ಯಕ್ಷ ಕೊಳತ್ತೂರು ಕೆ.ಎನ್.ಕುಮಾರ್, ಸೋಸಲೆ ಮಹದೇವಸ್ವಾಮಿ, ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ, ತಾಪಂ ಮಾಜಿ ಅಧ್ಯಕ್ಷರಾದ ಕುಕ್ಕೂರು ಗಣೇಶ್, ಎಂ.ಮಲ್ಲಿಕಾರ್ಜುನಸ್ವಾಮಿ, ಹೆಚ್.ಎನ್.ಉಮೇಶ್, ಮಾಜಿ ಸದಸ್ಯರಾದ ರಾಮಲಿಂಗಯ್ಯ, ನರಸಿಂಹಮಾದನಾಯಕ, ಎಂ.ಬಿ.ಸಾಗರ್, ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ಪಿಎಸಿಎಸ್ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ, ಮಹಿಳಾ ಘಟಕದ ಅಧ್ಯಕ್ಷ ಲತಾ ಜಗದೀಶ್, ಮುಖಂಡರಾದ ಜೆ.ಅನೂಪ್ ಗೌಡ, ಉಕ್ಕಲಗೆರೆ ರಾಜು, ಮಲ್ಲಾಜಮ್ಮ, ಎನ್.ಕೋಕಿಲ, ವೀಣಾ ಶಿವಕುಮಾರ್, ಕಲಿಯೂರು ಶಿವಣ್ಣ, ಕೆಬ್ಬೆ ರಂಗಸ್ವಾಮಿ, ಶಿವರಾಮ್ ಇತರರಿದ್ದರು.

2028ಕ್ಕೆ ಸಚಿವ ಮಹದೇವಪ್ಪ ಮುಖ್ಯಮಂತ್ರಿಯಾಗಲಿ



ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಕೇಕ್ ತಿನ್ನಿಸಿ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು.

ತಿ.ನರಸೀಪುರ: ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೆ ಬರಲಿದ್ದು, ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರು ಮುಖ್ಯಮಂತ್ರಿಯಾಗಿ ರಾಜ್ಯದ ಜನರ ಸೇವೆ ಮಾಡುವಂತಾಗಲಿ ಎಂದು ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ ಆಶಯ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಡಾ.ಹೆಚ್.ಸಿ.ಮಹದೇವಪ್ಪನವರಿಂದ 74 ಕೆಜಿ ತೂಕದ ಬೃಹತ್ ಕೇಕ್ ಕತ್ತರಿಸುವ ಮೂಲಕ ಸಚಿವರಿಗೆ ಕೇಕ್ ತಿನ್ನಿಸಿ ಹುಟ್ಟುಹಬ್ಬದ ಶುಭಾಶಯ ಕೋರಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವುದು. ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಯೋಜನೆಗಳನ್ನು ರೂಪಿಸುವುದು. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ಅಭಿವೃದ್ಧಿಗೆ ಸಹಾಯ ನೀಡುವುದು ಸಚಿವರ ಕಾರ್ಯ ಶೈಲಿ ಭಾಗವಾಗಿದೆ. ಹೆಚ್.ಸಿ.ಮಹದೇವಪ್ಪನವರು ತಮ್ಮ ರಾಜಕೀಯ ಜೀವನವನ್ನು ಸಂಪೂರ್ಣವಾಗಿ ಜನಸೇವೆಗೆ ಸಮರ್ಪಿಸಿದ್ದಾರೆ. ಸರಳತೆ, ಪ್ರಾಮಾಣಿಕತೆ ಮತ್ತು ಜನರ ಸಮಸ್ಯೆಗಳ ಬಗ್ಗೆ ನಿಜವಾದ ಕಾಳಜಿ ಅವರ ನಾಯಕತ್ವದ ಗುರುತುಗಳಾಗಿವೆ. ಅವರಿಂದ ರಾಜ್ಯದ ಜನತೆ ಮತ್ತಷ್ಟು ಅಭಿವೃದ್ಧಿ ಕೆಲಸಗಳನ್ನು ನಿರೀಕ್ಷಿಸುತ್ತಿದ್ದು, ಮುಂಬರುವ 2028ರಲ್ಲಿ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಲು ದೇವರು ಅವರಿಗೆ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಹಾರೈಸಿದರು.

ಪೈ.ಲಕ್ಷ್ಮಿನಾರಾಯಣ ನಿಧನ



ಹುಣಸೂರು, ಏ.20– ನಗರದ ಕರಿಗೌಡರ ಬೀದಿ ನಿವಾಸಿ ಪೈ.ಲಕ್ಷ್ಮಿನಾರಾಯಣ (73) ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಪಂಪ್‌ಹೌಸ್ ಬಳಿಯ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜಣ್ಣ



ಹೆಚ್.ಡಿ.ಕೋಟೆ: ಪಟ್ಟಣದ ಸ್ಟೇಡಿಯಂ ಬಡಾವಣೆ ನಿವಾಸಿ, ಆಲ್ತಾಲ್ ಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಿವೃತ್ತ ಶಿಕ್ಷಕ ರಾಜಣ್ಣ(67) ಸೋಮವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಾಲಿಗ್ರಾಮ ತಾಲೂಕಿನ ಕೆಡಗ ಗ್ರಾಮದ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ವಾತಂತ್ರ್ಯ ಹೋರಾಟಗಾರ ಅನಂತರಾಜ ಗೌಡ



ಮಡಿಕೇರಿ, ಏ.20–ಸ್ವಾತಂತ್ರ್ಯ ಹೋರಾಟಗಾರ, ಸಂಶೋಧಕ ಅನಂತರಾಜ ಗೌಡ (82) ಸೋಮವಾರ ನಿಧನರಾದರು.

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ನಿವಾಸಿ ಅನಂತರಾಜ ಗೌಡ ತಾಲೂಕಿನ ಕೆ.ನಿಡುಗಣೆ ಗ್ರಾಪಂ ವ್ಯಾಪ್ತಿಯ ಕೋಟೆಕಾಡು ಗ್ರಾಮದಲ್ಲಿ ವಾಸವಾಗಿದ್ದರು.

ಅರೆಭಾಷೆ ಗೌಡ ಜನಾಂಗದ ಇತಿಹಾಸ, ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸಿ, ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಮುಖ್ಯವಾಗಿ ಕೆದಂಬಾಡಿ ರಾಮಯ್ಯ ಗೌಡರ ಇತಿಹಾಸವನ್ನು ಸಮಾಜಕ್ಕೆ ಒಪ್ಪಿಸಿದ್ದಾರೆ. ಕೆದಂಬಾಡಿ ರಾಮಯ್ಯ ಗೌಡರ ಕಂಚಿನ ಪ್ರತಿಮೆ ಸ್ಥಾಪನೆಗೆ ಸಾಕಷ್ಟು ಶ್ರಮಿಸಿದ್ದರು. ಅರೆಭಾಷೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಅನಂತರಾಜ ಗೌಡರು ಪಾತ್ರರಾಗಿದ್ದಾರೆ.


ಮೃತರು ಪತ್ನಿ, ಓರ್ವ ಪುತ್ರನನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ನಡೆಯಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಮೈಸೂರಿನಲ್ಲಿ ಮಿತಬೆಲೆಯ ಎಲ್‌ಪಿಜಿಗಾಗಿ ಆಟೋ ಚಾಲಕರ ಪಡಿಪಾಟಲು

ಮುಂಜಾನೆ 5 ಗಂಟೆಗೆ ಕ್ಯೂನಲ್ಲಿ ನಿಂತು ಮಧ್ಯಾಹ್ನ 2 ಗಂಟೆ ವೇಳೆಗೆ ಗ್ಯಾಸ್ ಪಡೆಯುವ ವೇಳೆ ಸುಸ್ತೋ ಸುಸ್ತು





ಮೈಸೂರಿನ ಧನ್ವಂತ್ರಿ ರಸ್ತೆಯ ಇಂಡಿಯನ್ ಆಯಿಲ್ ಬಂಕ್ ಮುಂದೆ ಎಲ್‌ಪಿಜಿಗಾಗಿ ಸರದಿ ಸಾಲಿನಲ್ಲಿ ನಿಂತಿರುವ ಆಟೋಗಳನ್ನು (ಎಡಚಿತ್ರ) ಕಾಣಬಹುದು. ಪೆಟ್ರೋಲ್ ಇಲ್ಲದೆ ಬಿಕೋ ಎನ್ನುತ್ತಿರುವ ಮೈಸೂರಿನ ಭಾರತ್ ಪೆಟ್ರೋಲ್ ಬಂಕ್‌ನ ದೃಶ್ಯವನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.20(ಬಿಎಲ್ ಯು)– ಮಧ್ಯ ಪ್ರಾಚ್ಯ ಯುದ್ಧದ ಪರಿಣಾಮ ಎಲ್‌ಪಿಜಿಗೆ ತೀವ್ರ ವ್ಯತ್ಯಯ ಉಂಟಾಗಿದ್ದು, ಮೈಸೂರಿನ ಆಟೋ ಚಾಲಕರು ಕಂಗಾಲಾಗಿದ್ದಾರೆ. ಖಾಸಗಿ ಕಂಪನಿಗಳ ಎಲ್‌ಪಿಜಿಗಿಂತ ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಎಲ್‌ಪಿಜಿ ಬೆಲೆ ಕಡಿಮೆ ಇರುವ ಹಿನ್ನೆಲೆಯಲ್ಲಿ ಆಟೋ ಚಾಲಕರು ಮುಂಜಾನೆ 5 ಗಂಟೆಯಿಂದಲೇ ಸರದಿ ಸಾಲಿನಲ್ಲಿ ನಿಂತು ಕಾದಿದ್ದೆ ಕಾದಿದ್ದು...

ಮೈಸೂರಿನಲ್ಲಿ ಎಲ್‌ಪಿಜಿಯ 12 ಬಂಕ್ ಗಳಿದ್ದು, ಇದರಲ್ಲಿ ಇಂಡಿಯನ್ ಆಯಿಲ್‌ನ ಎಲ್‌ಪಿಜಿ ಬೆಲೆ ಖಾಸಗಿ ಕಂಪನಿಗಳ ಎಲ್‌ಪಿಜಿಗಿಂತ ಬಹಳ ಕಡಿಮೆ ಇದೆ. ಇದರಿಂದ ಮೈಸೂರಿನ ಧನ್ವಂತ್ರಿ ರಸ್ತೆಯ ವಿಜಯ ಸರ್ವಿಸ್ ಸ್ಟೇಷನ್ ಹಾಗೂ ಹೆಬ್ಬಾಳ'ದ

- ● ಮೈಸೂರಿನಲ್ಲಿ ಎಲ್‌ಪಿಜಿ ಬಂಕ್‌ಗಳ ಸಂಖ್ಯೆ 12
- ● ಖಾಸಗಿ ಕಂಪನಿಗಳ ಬಂಕ್‌ನಲ್ಲಿ ಎಲ್‌ಪಿಜಿ ದುಬಾರಿ
- ● ಸರ್ಕಾರಿ ಸ್ವಾಮ್ಯದ ಎಲ್‌ಪಿಜಿಗಾಗಿ ದುಂಬಾಲು
- ● ಕೊನೆಗೂ ಟ್ಯಾಂಕ್ ಫುಲ್ ಮಾಡಿಸಿಕೊಂಡ ಆಟೋ ಚಾಲಕರು

ಇಂಡಿಯನ್ ಆಯಿಲ್ ಎಲ್‌ಪಿಜಿ ಬಂಕ್ ಮುಂದೆ ಆಟೋ ಚಾಲಕರ ಸರದಿ ಸಾಲು ಸಾಮಾನ್ಯವಾಗಿದೆ.

ಇಂಡಿಯನ್ ಆಯಿಲ್ ನ ಎಲ್‌ಪಿಜಿ ಬೆಲೆ ಲೀಟರ್ ಗೆ 83.50 ರೂಪಾಯಿ ಇದ್ದರೆ, ಥಿಂಕ್ ಗ್ಯಾಸ್‌ನಲ್ಲಿ 95 ರೂಪಾಯಿ ಇದೆ. ಟೋಟಲ್ ಹಾಗೂ ಗೋಬರ್ ಗ್ಯಾಸ್‌ನಲ್ಲಿ 120 ರೂಪಾಯಿ ಇದ್ದರೆ ಗೋ ಗ್ಯಾಸ್‌ನಲ್ಲಿ 115 ರೂಪಾಯಿ ಬೆಲೆ ಇದೆ.

ಕೆಲವು ಬಂಕ್‌ಗಳಲ್ಲಿ ಪೆಟ್ರೋಲ್‌ಗೂ ವ್ಯತ್ಯಯ

ಮೈಸೂರಿನಲ್ಲಿ ಇದೂವರೆಗೆ ಎಲ್‌ಪಿಜಿಗೆ ವ್ಯತ್ಯಯ ಉಂಟಾಗಿತ್ತು. ಆದರೆ ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್‌ಗೂ ಈಗ ಅಭಾವ ಎದುರಾಗಿದೆ.

ಮೈಸೂರಿನ ಕೃಷ್ಣರಾಜ ಬುಲೇವಾರ್ಡ್‌ನ ಭಾರತ್ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಖಾಲಿಯಾಗಿತ್ತು. ಇದರಿಂದ ಬಂಕ್ ಬಿಕೋ ಎನ್ನುತ್ತಿತ್ತು.

ಡಿಪೋನಲ್ಲೇ ಪೆಟ್ರೋಲ್ ಖಾಲಿಯಾಗಿದೆ. ಹೀಗಿರುವಾಗ ನಮಗೆ ಹೇಗೆ ಪೆಟ್ರೋಲ್ ಪೂರೈಕೆ ಆಗಲಿದೆ ಎಂದು ಬಂಕ್ ನವರು ಪ್ರಶ್ನಿಸಿದರು.

ಇಂಡಿಯನ್ ಆಯಿಲ್ ಬಿಟ್ಟು ಎಲ್ಲಾ ಕಂಪನಿಗಳ ಎಲ್‌ಪಿಜಿ ಬೆಲೆ ದುಬಾರಿ. ಇದರಿಂದ ಕಡಿಮೆ ಬೆಲೆಯ ಇಂಡಿಯನ್ ಆಯಿಲ್ ಗ್ಯಾಸ್‌ಗಾಗಿ ಆಟೋ ಚಾಲಕರು ಗಂಟೆ ಗಟ್ಟಲೆ ಕಾಯುತ್ತಿದ್ದಾರೆ. ಇಂದು ಮುಂಜಾನೆ 5 ಗಂಟೆಗೆ ಆಟೋಗಳನ್ನು ನಿಲ್ಲಿಸಿಕೊಂಡು ಸರದಿ ಸಾಲಿನಲ್ಲಿ ಕಾದರು.

ಧನ್ವಂತ್ರಿ ರಸ್ತೆ ಹಾಗೂ ದಿವಾನ್ಸ್ ರಸ್ತೆ ಜಂಕ್ಷನ್ ನಿಂದ ಆರಂಭವಾದ ಸರದಿ ಸಾಲು ದಿವಾನ್ಸ್ ರಸ್ತೆ, ವಿನೋಬಾ ರಸ್ತೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ಜೆಎಲ್‌ಬಿ ರಸ್ತೆ, ದಾಸಪ್ಪ ವೃತ್ತದ ಮೂಲಕ ಧನ್ವಂತ್ರಿ ರಸ್ತೆಯ ಇಂಡಿಯನ್ ಆಯಿಲ್ ಬಂಕ್ ವರೆಗೆ ಕ್ಯೂ ಇತ್ತು.

ಬೆಳಿಗ್ಗೆ 5 ಗಂಟೆಯಿಂದ ಕಾದಿದ್ದಕ್ಕೆ ಮಧ್ಯಾಹ್ನ 12.30 ಗಂಟೆಗೆ ಎಲ್‌ಪಿಜಿ ಹೊತ್ತ ಟ್ಯಾಂಕರ್ ಬಂಕ್‌ಗೆ ಬಂದಿತು. ಟ್ಯಾಂಕರ್‌ನ್ನು ಅನ್‌ಲೋಡ್ ಮಾಡುವ ಹೊತ್ತಿಗೆ 2 ಗಂಟೆ ಆಯಿತು. ತರುವಾಯ ಎಲ್‌ಪಿಜಿ ವಿತರಣೆ ಪ್ರಕ್ರಿಯೆ ಆರಂಭಗೊಂಡಿತು.

ಒಂದು ಆಟೋ 12 ರಿಂದ 20 ಲೀಟರ್ ಸಂಗ್ರಹದ ಸಾಮರ್ಥ್ಯವಿದ್ದು, ಬರೋಬರಿ 8 ಗಂಟೆ ಕಾದ ಆಟೋ ಚಾಲಕರು ಟ್ಯಾಂಕ್ ಫುಲ್ ಮಾಡಿಸಿಕೊಂಡರು.

ಖಾಸಗಿ ಕಂಪನಿಗಳ ಬಂಕ್‌ಗಳಲ್ಲಿ ಸುಲಭವಾಗಿ ಗ್ಯಾಸ್ ದೊರೆಯಲಿದೆ. ಆದರೆ ಅಲ್ಲಿನ ದುಬಾರಿ ಬೆಲೆ ಕೊಟ್ಟು ಗ್ಯಾಸ್ ಖರೀದಿಸಿದರೆ ಆಟೋ ಚಾಲಕರಿಗೆ ಹೊರೆಯಾಗಲಿದೆ.

ಎಲ್‌ಪಿಜಿ ಬೆಲೆ ದುಬಾರಿಯಾಗಿದೆ ಎಂದು ದರ ಹೆಚ್ಚಳ ಸಾಧ್ಯವಿಲ್ಲ. ಇದರಿಂದ ಗಂಟೆ ಗಟ್ಟಲೆ ಕಾದು ಹೇಗೋ ಎಲ್‌ಪಿಜಿ ತುಂಬಿಸಿಕೊಂಡು, ಆಟೋ ಚಾಲಕರು ಜೀವನ ಮಾಡುತ್ತಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯೂತ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಭೂತ್ ಬಂಗ್ಲಾ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಲವ್ ಮಾಕ್‌ಟೇಲ್–3 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಮಿ. ಎಕ್ಸ್ (ತ)	4 ಪ್ರದರ್ಶನಗಳು
ಸಂಗಂ	
ಟೆರರ್ (ಕ)	4 ಪ್ರದರ್ಶನಗಳು
ಲಿಡೋ	
ಬೆಂಗಳೂರು ಇನ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕೆಂಡದ ಸೆರಗು (ಕ) + ಕ್ಯಾಲೆಂಡರ್ (ಕ)	2+2 ಪ್ರದರ್ಶನಗಳು

ವಾಟ್ಸಾಪ್‌ನ ಮೆಸೇಜ್ ನಂಬಿ ಮೋಸ ಹೋದ ಯುವಕ


12.71 ಲಕ್ಷ ರೂ. ಕಳೆದುಕೊಂಡ ಬಗ್ಗೆ ಸೈಬರ್ ಠಾಣೆಗೆ ದೂರು

ಮೈಸೂರು, ಏ.20(ಜಿಎ)–ವಾಟ್ಸಾಪ್‌ನಲ್ಲಿ ಬಂದ ಮೆಸೇಜ್ ನಂಬಿ ಮೈಸೂರಿನ ವಿಜಯನಗರದ ಯುವಕನೋರ್ವ 12.71 ಲಕ್ಷ ರೂ ಕಳೆದುಕೊಂಡಿದ್ದು, ಸೈಬರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾ.26ರಂದು ಯುವಕನ ವಾಟ್ಸಾಪ್ ನಂಬರ್‌ಗೆ ಅನಾಮಧೇಯ ನಂಬರ್‌ನಿಂದ 'ನೀವು ಸ್ಕ್ರೀನ್ ಶಾಟ್ ತೆಗೆದುಕೊಂಡು ರೆಪ್ ಅದೀತಿ ಎಂಬ ಟೆಲಿಗ್ರಾಂ ಐಡಿಗೆ ಕಳುಹಿಸಿ ಇವರಿಂದ ಹಣ ಕಲೆಕ್ಟ್ ಮಾಡಿಕೊಳ್ಳುವಂತೆ ತಿಳಿಸಿ', ಬಿ–ನಾಯಕಾಮಾಲ್ ಟಾಸ್ಕ್–348 ಎಂಬ ಟೆಲಿಗ್ರಾಂ ಗ್ರೂಪ್‌ಗೆ ಸೇರಿಸಿದ್ದಾರೆ.

ಪ್ರತಿದಿನ ಈ ರೀತಿ ಟಾಸ್ಕ್‌ಗಳನ್ನು ನೀಡಿದ್ದು, ಯುವಕ ಪೂರ್ಣಗೊಳಿಸಿದ್ದಾರೆ. ನಂತರ ಹೂಡಿಕೆ ಮಾಡಿ ಟಾಸ್ಕ್ ಮಾಡುವಂತೆ ತಿಳಿಸಿದ್ದು, ಅದನ್ನು ನಂಬಿದ ಯುವಕ ಹಣ ಹೂಡಿಕೆ ಮಾಡಿ ಟಾಸ್ಕ್ ಮಾಡಲು ಆರಂಭಿಸಿದ್ದಾನೆ. ಅದರಂತೆ ಮಾ.26ರಂದು 1700 ರೂ. ಹಣ ಗಳಿಸಿದ್ದಾನೆ. ಅದೇ ರೀತಿ ಟಾಸ್ಕ್‌ಗಳನ್ನು ನೀಡಿದ್ದು, ಅವುಗಳನ್ನು ಪೂರ್ಣಗೊಳಿಸಿದ್ದಾನೆ. ನಂತರ ಹೂಡಿಕೆ ಮಾಡಿದ ಹಣವನ್ನು ಹಿಂತೆಗೆಯಲು ಪ್ರಯತ್ನಿಸಿ ಸಾಧ್ಯವಾಗದಿದ್ದಾಗ ಸಾಲಿ.ಕಾಂ ವೆಬ್ ಪೇಜ್‌ಗೆ ಭೇಟಿ ನೀಡಿ ನಿಮ್ಮ ಬ್ಯಾಂಕ್ ಖಾತೆಯ ವಿವರವನ್ನು ಭರ್ತಿ ಮಾಡುವಂತೆ ತಿಳಿಸಿದ್ದು, ಅದರಂತೆ ಅನುಸರಿಸಿದ್ದಾನೆ. ಅದಾದ ನಂತರವೂ ಹಣ ಹಿಂತೆಗೆಯಲು ಸಾಧ್ಯವಾಗಿಲ್ಲ. ಮಾ.26ರಿಂದ ಏ.4ರವರೆಗೆ ಬರೋಬ್ಬರಿ 12.17 ಲಕ್ಷ ರೂ.ಹಣವನ್ನು ವರ್ಗಾವಣೆ ಮಾಡಿ ಮೋಸ ಹೋಗಿದ್ದಾನೆ ಈ ಸಂಬಂಧ ಸೈಬರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸವಣ್ಣನ ಪ್ರತಿಮೆಗೆ ಪುಷ್ಪನಮನ



ಬಸವ ಜಯಂತಿ ಹಿನ್ನೆಲೆಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫೋಟೋಗ್ರಾಫರ್ ಅಂಡ್ ವಿಡಿಯೋಗ್ರಾಫರ್ ಅಸೋಸಿಯೇಷನ್ ವತಿಯಿಂದ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಅಸೋಸಿಯೇಷನ್ ಅಧ್ಯಕ್ಷ ಬಿ.ವಿಜಯ್, ಉಪಾಧ್ಯಕ್ಷ ರಾಜಗೋಪಾಲ್, ಕಾರ್ಯದರ್ಶಿ ಧನಂಜಯ, ಸಹ ಕಾರ್ಯದರ್ಶಿ ಉಮಾಶಂಕರ್, ಖಜಾಂಚಿ ಉಮೇಶ್, ನಿರ್ದೇಶಕರಾದ ಮಂಜುನಾಥ್, ಅಪೂರ್ವ ಲೋಕೇಶ್, ಬೆಳಕು ಮಂಜು ವರ್ಗೀಸ್, ನಾಗರಾಜ ನಾಯ್ಡು, ಸದಸ್ಯ ಪೀಟರ್ ಮತ್ತಿತರರು ಉಪಸ್ಥಿತರಿದ್ದರು.

ಪದೋನ್ನತಿಗಿದ್ದ ತೊಡಕು ನಿವಾರಿಸಿಕೊಟ್ಟ

ಎಂಎಲ್‌ಸಿ ವಿವೇಕಾನಂದರನ್ನು ಅಭಿನಂದಿಸಿದ ವಿಕಲಚೇತನ ಶಿಕ್ಷಕರು



ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ದಕ್ಷಿಣ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ ವಿಕಲಚೇತನ ಶಿಕ್ಷಕರು ಅಭಿನಂದಿಸಿದರು.

ಮೈಸೂರು, ಏ.20(ಜಿಎ)–ಪದೋನ್ನತಿಗಿದ್ದ ತೊಡಕುಗಳನ್ನು ನಿವಾರಿಸಿಕೊಟ್ಟ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ದಕ್ಷಿಣ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರದ ವಿಕಲಚೇತನ ಶಿಕ್ಷಕರು ಅಭಿನಂದಿಸಿದರು.

ವಿಕಲಚೇತನರು ಸಹಶಿಕ್ಷಕ ಹುದ್ದೆಯಿಂದ ಮುಖ್ಯಶಿಕ್ಷಕ ಹುದ್ದೆಗೆ ಬಡ್ತಿ ಪಡೆದುಕೊಳ್ಳಲು ಇದ್ದ ತೊಡಕುಗಳನ್ನು ನಿವಾರಿಸಿ, ಮುಖ್ಯಶಿಕ್ಷಕ ಹುದ್ದೆಗೆ ಬಡ್ತಿ ದೊರಕಿಸಲು ಪ್ರಮುಖ ಪಾತ್ರವಹಿಸಿದ್ದ ಹಿನ್ನೆಲೆಯಲ್ಲಿ ಜಲದರ್ಶಿನಿ ಆವರಣದಲ್ಲಿರುವ ಎಂಎಲ್‌ಸಿ ಕೆ.ವಿವೇಕಾನಂದರ ಕಚೇರಿಗೆ ಶಿಕ್ಷಕರು ಭೇಟಿ ನೀಡಿ ಸನ್ಮಾನಿಸಿದರು.

2024–25ನೇ ಸಾಲಿನಲ್ಲಿ ಪ್ರೌಢ ಶಾಲಾ ಸಹ ಶಿಕ್ಷಕ ಹುದ್ದೆಯಿಂದ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿಗಾಗಿ ವಾರ್ಷಿಕ ಕಾರ್ಯ ಕ್ಷಮತೆಯ ವರದಿಯನ್ನು ಪಡೆದುಕೊಳ್ಳಲಾಗಿತ್ತು. ತದನಂತರ ಮೀಸಲಾತಿಯ ಗೊಂದಲ, ವಿಕಲಚೇತರ ಮೀಸಲಾತಿಯ ವರ್ಗೀಕರಣದಿಂದ ಬಡ್ತಿ ಪ್ರಕ್ರಿಯೆ ತಡವಾಯಿತು. ಈ ವಿಚಾರಕ್ಕೆ ಸಬಂಧಪಟ್ಟಂತೆ ಶಿಕ್ಷಕರ ಪ್ರತಿನಿಧಿಯಾದ ವಿಧಾನ ಪರಿಷತ್ತಿನ ಸದಸ್ಯ ಕೆ. ವಿವೇಕಾನಂದ ಅವರನ್ನು ಭೇಟಿ ಮಾಡಿ ಬಡ್ತಿ ಪ್ರಕ್ರಿಯೆ ತಡವಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿ ಶೀಘ್ರವಾಗಿ ಪದನ್ನೋತಿ ದೊರಕಿಸಿಕೊಡುವಂತೆ ಕೋರಲಾಗಿತ್ತು.

ಅದರನ್ವಯ ಬಡ್ತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಮುಂದೆ ಶಾಸಕರು ಬಡ್ತಿ ಪ್ರಕ್ರಿಯೆಗೆ ಇದ್ದ ತಾಂತ್ರಿಕ ದೋಷದ ವಿಚಾರವನ್ನು ಸಮಿತಿಯ ಮುಂದೆ ಪ್ರಸ್ತಾಪಿಸಲಾಗಿ ಸಮಿತಿಯು ಮೀಸಲಾತಿಯ ತಾಂತ್ರಿಕ ದೋಷದ ಪರಿಹಾರಕ್ಕೆ ಸಮ್ಮತಿ ನೀಡಿತು.

ತದನಂತರ ಬಡ್ತಿ ಪ್ರಕ್ರಿಯೆಯಲ್ಲಿ ವಿಕಲಚೇತರಿಗೆ ಶೇ.4 ಮೀಸಲಾತಿ ನೀಡುವಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶದನ್ವಯ ವಿಕಲಚೇತರ ಮೀಸಲಾತಿಯ ವರ್ಗೀಕರಣದ ವಿಷಯವನ್ನು ವಿಧಾನಮಂಡಲದ ಮಹಿಳಾ, ಮಕ್ಕಳ ಮತ್ತು ವಿಕಲಚೇತನರ ಕಲ್ಯಾಣ ಸಮಿತಿ ಮುಂದೆ ಶಾಸಕರು ವಿಕಲಚೇತರ ಮೀಸಲಾತಿಯ ವರ್ಗೀಕರಣ ಯಾವ ರೀತಿ ವಿಗಂಡಿಸಿಕೊಳ್ಳಬೇಕು ಎಂದು ವಿಕಲಚೇತರ ಕಲ್ಯಾಣ ಇಲಾಖೆಯು ಸರ್ಕಾರದ ವಿವಿಧ ಇಲಾಖೆಯಲ್ಲಿನ ನೌಕರರ ಬಡ್ತಿ ಪ್ರಕ್ರಿಯೆಯನ್ನು ಸುಲಲಿತವಾಗಿ ಕೈಗೊಳ್ಳಲು ಸ್ಪಷ್ಟ ಮತ್ತು ಸೂಕ್ತ ಮಾರ್ಗದರ್ಶನ ಒಳಗೊಂಡಿರುವಂತೆ ಹಾಗೂ ಪದೇ ಪದೇ ಸ್ಪಷ್ಟೀಕರಣ ಕೋರದ ರೀತಿಯಲ್ಲಿ ನಿಖರತೆಯುಳ್ಳ ಆದೇಶವನ್ನು ಮಾಡುವಂತೆ ಸಮಿತಿಯ ಮುಂದೆ ಪ್ರಸ್ತಾಪಿಸಿದ್ದರು.

ಅದರಂತೆ ವಿಕಲಚೇತರ ಕಲ್ಯಾಣ ಇಲಾಖೆಯು ಸೂಕ್ತ ಆದೇಶ ಮಾಡಿ ಬಡ್ತಿ ಪ್ರಕ್ರಿಯೆಗೆ ಇದ್ದ ತೊಡಕನ್ನು ನಿವಾರಿಸಲಾಯಿತು. ಪ್ರತಿಯೊಂದು ಹಂತದಲ್ಲೂ ಬಡ್ತಿಗೆ ಇದ್ದ ತೊಡಕುಗಳನ್ನು ನಿವಾರಿಸಿ ಸಹಶಿಕ್ಷಕ ಹುದ್ದೆಯಿಂದ ಮುಖ್ಯಶಿಕ್ಷಕ ಹುದ್ದೆಗೆ ಬಡ್ತಿ ದೊರಕಿಸಲು ಸಹಕರಿಸಿ ಶಿಕ್ಷಕರ ಪ್ರತಿನಿಧಿಯಾದ ಕೆ. ವಿವೇಕಾನಂದರನ್ನು ಅವರ ಶಾಸಕರ ಕಛೇರಿಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜ ನಗರ ಜಿಲ್ಲಾ ವ್ಯಾಪ್ತಿಯ ಫಲಾನುಭವಿ ಶಿಕ್ಷಕರು ಭೇಟಿ ಮಾಡಿ ಧನ್ಯವಾದಗಳ ನುಡಿಯೊಂದಿಗೆ ಸನ್ಮಾನಿಸಿ ಅಭಿನಂದಿಸಲಾಯಿತು.

ಕಂದಕಕ್ಕೆ ಬಸ್ ಉರುಳಿ 15 ಮಂದಿ ಸಾವು; ಹಲವರ ಸ್ಥಿತಿ ಗಂಭೀರ

ಉಧಂಪುರ: ಬಸ್ ಕಂದಕಕ್ಕೆ ಉರುಳಿ ಬಿದ್ದು ಸುಮಾರು 15 ಪ್ರಯಾಣಿಕರು ಸಾವನ್ನಪ್ಪಿ, 20ಕ್ಕೂ ಹೆಚ್ಚು ಜನ ಗಾಯಗೊಂಡಿರುವ ಘಟನೆ ಜಮ್ಮು ಮತ್ತು ಕಾಶ್ಮೀರದ ಉಧಂಪುರ ಜಿಲ್ಲೆಯಲ್ಲಿ ಸೋಮವಾರ ಸಂಭವಿಸಿದೆ.



ರಾಮನಗರ ಪ್ರದೇಶದ ಕಾಗೋರ್ಟ್ ಗ್ರಾಮದ ಬಳಿಯ ಕಡಿದಾದ ತಿರುವಿನಲ್ಲಿ ಬಸ್ ಬೆಳಗ್ಗೆ 10 ಗಂಟೆ ಸುಮಾರಿಗೆ ಕಂದಕಕ್ಕೆ ಉರುಳಿ ಈ ದುರಂತ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಸ್ಥಳೀಯರು ಧಾವಿಸಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿ, ಗಾಯಾಳುಗಳನ್ನು ಅವಶೇಷಗಳಿಂದ ಹೊರತೆಗೆದು ರಕ್ಷಿಸಿದ್ದಾರೆ. ಬಳಿಕ ಪೊಲೀಸರು ಹಾಗೂ ತುರ್ತು ನಿರ್ವಹಣಾ ತಂಡ ರಕ್ಷಣಾ ಕಾರ್ಯಾಚರಣೆ ಮುಂದುವರೆಸಿದೆ. ಬಸ್ ಅವಶೇಷಗಳಿಂದ 15 ಶವಗಳನ್ನು ಹೊರತೆಗೆಯಲಾಗಿದ್ದು, 20 ಗಾಯಾಳುಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಅವರಲ್ಲಿ ಹಲವರ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪಘಾತದ ನಂತರ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಉಧಮ್‌ಪುರದ ಉಪ ಆಯುಕ್ತ ಮಿಂಗಾ ಶೆರ್ಪಾ ಅವರೊಂದಿಗೆ ಮಾತನಾಡಿ, ಗಂಭೀರವಾಗಿ ಗಾಯಗೊಂಡಿರುವ ಸಂತ್ರಸ್ತರನ್ನು ವಿಮಾನದ ಮೂಲಕ ಆಸ್ಪತ್ರೆಗೆ ಸಾಗಿಸಲು ವ್ಯವಸ್ಥೆ ಮಾಡಲು ತಿಳಿಸಿದ್ದಾರೆ.

ಜಪಾನ್‌ನಲ್ಲಿ 7.4 ತೀವ್ರತೆಯ ಪ್ರಬಲ ಭೂಕಂಪ

ಟೋಕಿಯೋ: ಜಪಾನ್‌ನ ಈಶಾನ್ಯ ಕರಾವಳಿಯಲ್ಲಿ ಇಂದು 7.4 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ. ಪರಿಣಾಮ ದೇಶಾದ್ಯಂತ ಆತಂಕ ಉಂಟಾಗಿದ್ದು, ಸುನಾಮಿ ಎಚ್ಚರಿಕೆಯನ್ನೂ ನೀಡಲಾಗಿದೆ.



ಅಲೆಗಳು ದಡವನ್ನು ತಲುಪುವ ಹಾಗೂ ಸುಮಾರು 3 ಮೀಟರ್ ವರೆಗೆ ಏಳುವ ಸಾಧ್ಯತೆ ಇರುವುದರಿಂದ ಕರಾವಳಿ ವಲಯಗಳಿಂದ ದೂರ ತೆರಳುವಂತೆ ನಿವಾಸಿಗಳಿಗೆ ಅಧಿಕಾರಿಗಳು ಸೂಚಿಸಿದ್ದಾರೆ. ಜಪಾನ್ ಹವಾಮಾನ ಸಂಸ್ಥೆಯ ಪ್ರಕಾರ, ಸಮುದ್ರದೊಳಗಿನ ಭೂಕಂಪನವು ಸ್ಥಳೀಯ ಸಮಯ ಸಂಜೆ 4.53ಕ್ಕೆ ಇವಾಟೆ ಕರಾವಳಿಯಿಂದ ಕೇವಲ 10 ಕಿಲೋಮೀಟರ್(ಸುಮಾರು 6 ಮೈಲುಗಳು) ಆಳದಲ್ಲಿ ಸಂಭವಿಸಿದೆ.

ಭೂಕಂಪ ಸಂಭವಿಸಿದ ಕೂಡಲೇ ಜಪಾನ್ ಪ್ರಧಾನಿ ಸನೇ ತಕೈಚಿ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡುತ್ತಾ, ತುರ್ತು ಕಾರ್ಯಪಡೆಯ ನಿಯೋಜನೆಯನ್ನು ದೃಢಪಡಿಸಿದರು. ಭೂಕಂಪಪೀಡಿತ ಪ್ರದೇಶಗಳಲ್ಲಿ ತಕ್ಷಣದ ಸ್ಥಳಾಂತರಿಸುವಿಕೆಯ ನಿರ್ಣಾಯಕ ಅಗತ್ಯವನ್ನು ಅವರು ಪುನರುಚ್ಚರಿಸಿದರು. ಸುನಾಮಿಯ ಸಾಧ್ಯತೆಯಿದ್ದು, ತಕ್ಷಣ ಕರಾವಳಿ ತೀರದಿಂದ ಜನರು ಸ್ಥಳಾಂತರಗೊಳ್ಳಿರಿ. ಮುಂದಿನ ಸೂಚನೆ ಬರುವವರೆಗೂ ವಾಪಾಸ್ ಬರಬೇಡಿ ಎಂದು ಅವರು ಮನವಿ ಮಾಡಿದ್ದಾರೆ.

ಏ.22, ಅಕ್ಕಮಹಾದೇವಿ, ಬಸವೇಶ್ವರ ಜಯಂತಿ

ಮೈಸೂರು, ಏ.20(ಎಸ್‌ಪಿಎನ್)– ಕರ್ನಾಟಕ ರತ್ನ ಡಾ.ಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತಿ, ಅಕ್ಕ ಮಹಾದೇವಿ ಜಯಂತಿ ಹಾಗೂ ಬಸವೇಶ್ವರರ ಜಯಂತಿಯನ್ನು ಏ.22ರಂದು ಸಂಜೆ 5 ಗಂಟೆಗೆ ಜೆ.ಪಿ.ನಗರದ ಶರಣ ವೇದಿಕೆ ಕಚೇರಿ ಆವರಣದಲ್ಲಿ ಆಯೋಜಿಸಲಾಗಿದೆ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಜೆ.ಪಿ.ನಗರ ಶರಣ ವೇದಿಕೆ ಹಾಗೂ ಅರಿವಿನ ಮನೆ ಮಹಿಳಾ ಬಳಗದ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದು, ಈ ವೇಳೆ ಮಹಾಸಭಾದ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು, ಪ್ರಧಾನ ಕಾರ್ಯದರ್ಶಿ ಮಲ್ಲಿಕಾ ಮಹದೇವಸ್ವಾಮಿ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಧನ್ಯ ಸತ್ಯೇಂದ್ರ ಮೂರ್ತಿ ಭಾಗವಹಿಸಲಿದ್ದಾರೆ ಎಂದು ಶರಣ ವೇದಿಕೆ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸವಣ್ಣ ಸಮಸಮಾಜದ ಪರಿಕಲ್ಪನೆ ಬಿತ್ತಿದ ಮಾನವತಾವಾದಿ

ಬಸವ ಜಯಂತಿಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬಣ್ಣನೆ



ಮೈಸೂರಿನ ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನದ ಬಳಿ ಶಿವಕುಮಾರಸ್ವಾಮಿ(ಬೆಳ್ಳಿಯಪ್ಪ) ಅವರ ಸ್ನೇಹ ಬಳಗದ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರಿಗೆ ಸೀರೆ ವಿತರಿಸಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕೆಪಿಸಿಸಿ ಸದಸ್ಯ ಶ್ರೀನಾಥ್‌ಬಾಬು ಮತ್ತಿತರರಿದ್ದರು.

ಮೈಸೂರು, ಏ.20– ಕಾಯಕಯೋಗಿ ಬಸವಣ್ಣನವರು ಸಮಸಮಾಜದ ಪರಿಕಲ್ಪನೆ ಬಿತ್ತಿದ ಮಹಾಮಾನವತವಾದಿ ಎಂದು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಬಣ್ಣಿಸಿದರು.

ಮೈಸೂರಿನ ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನದ ಬಳಿಯ ಕಾಂಪ್ಲೆಕ್ಸ್‌ವೊಂದರ ಮುಂಭಾಗ ಶಿವಕುಮಾರ ಸ್ವಾಮಿ (ಬೆಳ್ಳಿಯಪ್ಪ) ಅವರ ಸ್ನೇಹ ಬಳಗದ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಸವಣ್ಣನವರು ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ 12ನೆ ಶತಮಾನದಲ್ಲೇ ಬುನಾದಿ ಹಾಕಿದ್ದರು. ಜಾತಿ, ಲಿಂಗ ಮತ್ತು ವರ್ಗ ತಾರತಮ್ಯಗಳನ್ನು ಬಲವಾಗಿ ವಿರೋಧಿಸಿ, ಸಮ ಸಮಾಜ ನಿರ್ಮಾಣದ ಕನಸು ಕಂಡಿದ್ದರು. ಸರಳ ಭಾಷೆಯಲ್ಲಿ ವಚನಗಳನ್ನು ರಚಿಸಿ ಬದುಕಿನ ಮೌಲ್ಯಗಳನ್ನು ಸಾರಿದರು. ಆರೋಗ್ಯಕರ ಸಮಾಜದ ಬಗ್ಗೆ ಸಾಮಾನ್ಯರಿಗೆ ಮನದಟ್ಟು ಮಾಡಿದ್ದರು. ಬಸವಣ್ಣನವರ ತತ್ವ, ಆದರ್ಶಗಳು ಮನುಕುಲಕ್ಕೆ ಆಸರೆಯಾಗಿವೆ. ಅವರ ಮೌಲ್ಯಯುತ ವಚನಗಳನ್ನು ಓದಿ, ಪಠಿಸುವುದರ ಜೊತೆಗೆ ಅವರ ಆಶಯಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಯತ್ನಿಸಿದರೆ ಉತ್ತಮ ಸಮಾಜ ನಿರ್ಮಾಣವಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಈ ವೇಳೆ ಗಣ್ಯರು, ಸ್ಥಳೀಯರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಪೌರಕಾರ್ಮಿಕರಿಗೆ ಸೀರೆ, ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಲಾಯಿತು. ಕೆಪಿಸಿಸಿ ಸದಸ್ಯ ಶ್ರೀನಾಥ್ ಬಾಬು, ಕಾಂಗ್ರೆಸ್ ಮುಖಂಡರಾದ ಹರೀಶ್, ಬೆಲ್ಲದ ರಾಜಣ್ಣ, ದಿನೇಶ್, ಕುಮಾರಸ್ವಾಮಿ (ಕುಮ್ಮಿ), ರಾಮಾನುಜ ರಸ್ತೆ ಮಹೇಶ್, ಪವನ್ ಪಟೇಲ್, ಪಾಪು, ಲಿಖಿತ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಬಾಲಭವನದ ಮೇಲೆ ಖದೀಮರ ಕಣ್ಣು

ಒಮ್ಮೆ ಹಲವು ವಸ್ತುಗಳ ಕದ್ದಿದ್ದ ಕಳ್ಳರು ಮತ್ತೊಮ್ಮೆ ಯತ್ನ



ಮೈಸೂರಿನ ಬಾಲಭವನ ಕಟ್ಟಡ


ಮೈಸೂರು,ಏ.20(ಎಂಟಿವೈ)– ಮೈಸೂರಿನ ಬಾಲಭವನದಲ್ಲಿ ಕಳ್ಳರ ಹಾವಳಿಗೆ ಕಡಿವಾಣ ಹಾಕಲು ವಿದ್ಯುತ್ ಸಂಪರ್ಕ ಹಾಗೂ ಭದ್ರತಾ ಸಿಬ್ಬಂದಿ ನಿಯೋಜನೆಗೆ ಕ್ರಮ ಕೈಗೊಂಡಿರುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಬಸವರಾಜ್ ತಿಳಿಸಿದ್ದಾರೆ.

ಮಕ್ಕಳ ನೆಚ್ಚಿನ ತಾಣವಾಗಿದ್ದ ಬಾಲಭವನದ ದುಸ್ಥಿತಿಗೆ ಹಾಗೂ ಕಳ್ಳರ ಪಾಲಾಗುತ್ತಿರುವ ವಸ್ತುಗಳ ಕುರಿತು 'ಮೈಸೂರು ಮಿತ್ರ'ದಲ್ಲಿ ವಿಸ್ತೃತ ವರದಿ ಪ್ರಕಟವಾಗಿತ್ತು. ಈ ಹಿನ್ನೆಲೆಯಲ್ಲಿ ಸೋಮವಾರ ಬಾಲಭವನಕ್ಕೆ ತೆರಳಿ ಪರಿಶೀಲಿಸಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಬಸವರಾಜ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಬಾಲಭವನದ ಆಸ್ತಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ಕ್ಕೆ ಸೇರಿದೆ. ಈ ಹಿಂದೆ ಮುಡಾದಿಂದ 30 ವರ್ಷ ಲೀಸ್‌ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಾಲಭವನವನ್ನು ಪಡೆದಿತ್ತು. ನಮ್ಮ ಲೀಸ್ ಅವಧಿ ಮುಗಿದಿದೆ. 2023ರಲ್ಲಿ ಮತ್ತೆ 30 ವರ್ಷದ ಅವಧಿಗೆ ಲೀಸ್‌ಗೆ ನೀಡುವಂತೆ ಪತ್ರ ವ್ಯವಹಾರ ನಡೆಸಲಾಗಿದೆ. ಆ ಪತ್ರವು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಕಚೇರಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಲೀಸ್ ಅವಧಿ ನವೀಕರಣವಾಗದ ಹಿನ್ನೆಲೆಯಲ್ಲಿ ಯಾವುದೇ ಶಾಶ್ವತ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಕಳೆದ ರಾತ್ರಿಯೂ ಕಳ್ಳತನ ಯತ್ನ

ಬಾಲಭವನದಲ್ಲಿ ಬೆಲೆ ಬಾಳುವ ವಸ್ತುಗಳನ್ನು ಈ ಹಿಂದೆ ಕಳ್ಳತನ ಮಾಡಿದ್ದ ಕಳ್ಳರು, ಮಕ್ಕಳು ಆಟ ಆಡುವುದಕ್ಕಾಗಿ ಅಳವಡಿಸಲಾಗಿದ್ದ ಉಯ್ಯಾಲೆ, ಜಾರುವ ಬಂಡಿಯನ್ನು ಕತ್ತರಿಸಿ ಕೊಂಡೊಯ್ಯಲು ಒಂದೆಡೆ ಸಂಗ್ರಹಿಸಿದ್ದರು. ಕಳೆದ ರಾತ್ರಿ ಆ ವಸ್ತುಗಳನ್ನು ಸಾಗಿಸಲು ಕಳ್ಳರು ಬಂದಿದ್ದು, ಭದ್ರತಾ ಸಿಬ್ಬಂದಿಯನ್ನು ಕಂಡು ಪರಾರಿಯಾಗಿದ್ದಾರೆ.

ಬಾಲಭವನದಲ್ಲಿ ಕಳವಾಗುತ್ತಿರುವ ಸಂಬಂಧ ಕಳೆದ ನಾಲ್ಕು ತಿಂಗಳ ಹಿಂದೆಯೇ ದೂರು ನೀಡಲು ಪ್ರಯತ್ನಿಸಲಾಗಿತ್ತು. ಆದರೆ, ಬಾಲಭವನದ ಆಸ್ತಿ ನಮ್ಮ ಇಲಾಖೆ ವ್ಯಾಪ್ತಿಗೆ ಬರದ ಕಾರಣ ದೂರು ಸ್ವೀಕರಿಸುತ್ತಿಲ್ಲ. ಇದೀಗ ಮತ್ತೆ ಕಳ್ಳತನ ನಡೆದಿದೆ. ಇಂದು ಬಾಲಭವನಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಇದರಿಂದ ಕಳ್ಳರ ಹಾವಳಿಗೆ ಕಡಿವಾಣ ಹಾಕಲು ಬಾಲಭವನದ ಕಟ್ಟಡಕ್ಕೆ ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕ ಪಡೆದು ಫೋಕಸ್ ಲೈಟ್ ಅಳವಡಿಸಲಾಗಿದೆ. ಅಲ್ಲದೆ, ಭದ್ರತಾ ಸಿಬ್ಬಂದಿ ನಿಯೋಜಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.


ಅದ್ವೈತ ಸಿದ್ಧಾಂತದ ಪ್ರತಿಪಾದಕ,
ಸನಾತನ ಭಾರತದ
ಸಂಸ್ಕೃತಿಯನ್ನು ಜಗತ್ತಿಗೆ ಸಾರಿದ
ಮಹಾನ್ ತತ್ವಜ್ಞಾನಿ,
ಶೃಂಗೇರಿ ಶಾರದಾ ಪೀಠ
ಸೇರಿದಂತೆ ದೇಶದ ನಾಲ್ಕು ದಿಕ್ಕುಗಳಲ್ಲಿ
ನಾಲ್ಕು ಪೀಠ ಸ್ಥಾಪಿಸಿದ
ಆದಿಗುರು
ಶ್ರೀ ಶಂಕರಾಚಾರ್ಯರ
ಜಯಂತಿಯ ಶುಭಾಶಯಗಳು
ಶುಭ ಕೋರುವವರು:
ಹೆಚ್.ವಿ.ರಾಜೀವ್
ನಿಕಟಪೂರ್ವ ಅಧ್ಯಕ್ಷರು ಮುಡಾ ಮೈಸೂರು
ಹಾಗೂ ಕಾಂಗ್ರೆಸ್ ಮುಖಂಡರು


419 ಕೋಟಿಗೂ ಹೆಚ್ಚು ಅನುಧಾನವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಪಿರಿಯಾಪಟ್ಟಣ
ತಾಲ್ಲೂಕಿಗೆ ಬಿಡುಗಡೆ ಮಾಡಿದ್ದು, ಇದರ ಪ್ರಯುಕ್ತ ವಿವಿಧ ಕಾಮಗಾರಿಗಳ ಗುದ್ದಲಿ
ಪೂಜೆ ಹಾಗೂ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುತ್ತಿರುವ ನಾಡಿನ ಮುಖ್ಯಮಂತ್ರಿಗಳಾದ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ರವರಿಗೆ
ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ರವರಿಗೆ
ಜಿಲ್ಲಾ ಉಸ್ತುವಾರಿಸಚಿವರಾದ ಸನ್ಮಾನ್ಯ ಶ್ರೀ ಡಾ.ಹೆಚ್.ಸಿ.ಮಹದೇವಪ್ಪ ರವರಿಗೆ
ಎಲ್ಲಾ ಗಣ್ಯರಿಗೂ ಹೃತ್ಪೂರ್ವಕ ಸುಸ್ವಾಗತ
GRAPHIC WORLD
9535370787
ಸ್ವಾಗತಕೋರುವವರು : ಹೆಚ್.ಡಿ.ಗಣೇಶ್ ಅಧ್ಯಕ್ಷರು, ಮೈಸೂರು ಪೇಯಿಂಟ್ಸ್ &
ವಾರ್ನಿಷ್ ಲಿ., ಕರ್ನಾಟಕ ಸರ್ಕಾರದ ಅಧೀನ ಉದ್ಯಮ, ಪಿರಿಯಾಪಟ್ಟಣ ತಾಲ್ಲೂಕು